ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 11 | ಸಂಚಿಕೆ 14 | ಪುಟ 16 | ಮಾರ್ಚ್ 27–ಏಪ್ರಿಲ್ 2, 2017 | ರೂ. 10/-

web: www.janashakthi.co.in | e-mail : js_weekly@yahoo.com

ಸಿ.ಎಂ. ಯೋಗಿ

'ಸಬ್ ಕಾ ಸಾಥ್...' ನ ಅಪಹಾಸ್ಯ



ಅಂಗನವಾಡಿ ಅವ್ವಂದಿರ ಚಾರಿತ್ರಿಕ ಹೋರಾಟ





ಸಾರ್ವಜನಿಕ ಉದ್ಯಮ, ಭಾರತ ಉಳಿಸಿ

ಮಾರುತಿ ಕಾರ್ಮಿಕರಿಗೆ ಶಿಕ್ಷೆ: ಸರ್ಕಾರ–ಮಾಲಕರು ಶಾಮೀಲು

ತೆಲಂಗಾಣ 'ಸಮರ ಸಮ್ಮೇಳನ'

ಹುತಾತ್ಮ ಮಾರ್ಚ್



ರಾಮಮಂದಿರ ವಿವಾದದ ಬಗ್ಗೆ ಮಾತುಕತೆಯ ನಿರರ್ಥಕ ಸಲಹೆ ಬೇಕಿಲ್ಲ ಸುಪ್ರಿಂ ಕೋರ್ಟ್ ತನ್ನ ಮುಂದಿರುವ ವಿಷಯದ ನ್ಯಾಯನಿರ್ಣಯ ಮಾಡಲಿ

–ಸಿಪಿಐ(ಎಂ) ಪೊಲಿಟ್‌ಬ್ಯುರೊ

ದೇಶದ ಸರ್ವೋಚ್ಚ ನ್ಯಾಯಾಲಯ ಅಯೋಧ್ಯೆಯ ರಾಮಮಂದಿರ ವಿವಾದ ಒಂದು 'ಸೂಕ್ಷ್ಮ' ಮತ್ತು 'ಭಾವನಾತ್ಮಕ' ವಿಷಯ ಎಂದು ವರ್ಣಿಸುತ್ತ ಈ ವಿವಾದಾತ್ಮಕ ಪ್ರಶ್ನೆಯನ್ನು ಸೌಹಾರ್ದಯುತವಾಗಿ ಇತ್ಯರ್ಥ ಮಾಡುವುದು ಅತ್ಯುತ್ತಮ ಎಂದು ಸೂಚಿಸಿದೆ. ಬಿಜೆಪಿ ಮುಖಂಡ ಸುಬ್ರಮಣ್ಯಸ್ವಾಮಿ ಈ ವಿವಾದದ ಬಗ್ಗೆ ತುರ್ತು ವಿಚಾರಣೆ ಕೈಗೆತ್ತಿಕೊಳ್ಳಬೇಕು ಎಂದು ಸಲ್ಲಿಸಿರುವ ಅರ್ಜಿಯನ್ನು ಪರಿಶೀಲಿಸುತ್ತ ಮುಖ್ಯ ನ್ಯಾಯಾಧೀಶರ ನೇತೃತ್ವದ ಪೀಠ ಸಂಬಂಧಪಟ್ಟ ಪಾರ್ಟಿಗಳು ಒಟ್ಟಿಗೆ ಕುಳಿತು ಒಂದು ಒಮ್ಮತಕ್ಕೆ ಬರಬೇಕು, ಸುಬ್ರಮಣ್ಯ ಸ್ವಾಮಿ ಸಂಬಂಧಪಟ್ಟ ಪಾರ್ಟಿಗಳೊಂದಿಗೆ ಸಮಾಲೋಚಿಸಿ ಮಾರ್ಚ್ 31ರೊಳಗೆ ಈ ಕುರಿತ ನಿರ್ಧಾರದ ಬಗ್ಗೆ ನ್ಯಾಯಾಲಯಕ್ಕೆ ತಿಳಿಸಬೇಕು ಎಂದು ಹೇಳಿದೆ.

ಮುಖ್ಯ ನ್ಯಾಯಾಧೀಶರಾದ ನ್ಯಾಯಮೂರ್ತಿ ಜೆ ಎಸ್ ಖೇಹರ್ ಇನ್ನೂ ಮುಂದೆ ಹೋಗಿ ತಾನು ಈ ವಿಯದಲ್ಲಿ ಮಧ್ಯಸ್ಥಿಕೆ ನಡೆಸಲು ಸಿದ್ಧ ಎಂದೂ ಹೇಳಿದರು.

ಮುಖ್ಯ ನ್ಯಾಯಾಧೀಶರ ಸೂಚನೆ ಅನಗತ್ಯವಾದದ್ದು ಮತ್ತು ವಿವೇಕವಿಲ್ಲದ್ದು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಈ ಬಗ್ಗೆ ಪ್ರತಿಕ್ರಿಯಿಸುತ್ತ ಹೇಳಿದೆ.

ಸುಪ್ರಿಂ ಕೋರ್ಟ್ ಅಲಹಾಬಾದ್ ಹೈಕೋರ್ಟಿನ ತೀರ್ಪಿನ ವಿರುದ್ಧ ಅಪೀಲುಗಳ ವಿಚಾರಣೆ ನಡೆಸಬೇಕಾಗಿದೆ. ಅದನ್ನು ಮಾಡುವ ಬದಲು ಮುಖ್ಯ ನ್ಯಾಯಾಧೀಶರು ಸಂಬಂಧಪಟ್ಟವರು ನ್ಯಾಯಾಲಯದ ಹೊರಗೆ ಇತ್ಯರ್ಥ ಮಾಡಿಕೊಳ್ಳಬೇಕು ಎಂದು ಹೇಳಿದ್ದಾರೆ ಎಂದಿರುವ ಸಿಪಿಐ(ಎಂ) ಈ ವಿಷಯದಲ್ಲಿ ಮಾತುಕತೆಗಳ ಒಂದು ದೊಡ್ಡ ಇತಿಹಾಸವೇ ಇದೆ ಎಂಬುದನ್ನು ನೆನಪಿಸಿದೆ. ಈ ಎಲ್ಲವೂ ನಿಷ್ಫಲಗೊಂಡಿವೆ. 1992ರಲ್ಲಿ ಬಾಬ್ರಿ ಮಸೀದಿಯ ಧ್ವಂಸದ ನಂತರ ಪರಿಸ್ಥಿತಿ ಬದಲಾಗಿದೆ. ಈಗ ಇನ್ನಷ್ಟು ಮಾತುಕತೆಗೆ ಅವಕಾಶವಿಲ್ಲ, ಏಕೆಂದರೆ ವಿವಾದಕ್ಕೆ ಸಂಬಂಧಪಟ್ಟ ಒಂದು ಪಕ್ಷ ಏಕಪಕ್ಷೀಯವಾಗಿ ಮಸೀದಿಯನ್ನು ಧ್ವಂಸಮಾಡುವ ಕ್ರಮ ಕೈಗೊಂಡಿದೆ. ಈಗ ಮಾತುಕತೆ ನಡೆಸಬೇಕು ಎಂದು ಉನ್ನತ ನ್ಯಾಯಾಲಯ ಸೂಚಿಸುವುದು ಹೇಗೆ ಕಾನೂನನ್ನು ಮುರಿಯಲಾಯಿತು ಮತ್ತು ಸಂವಿಧಾನವನ್ನು ತುಳಿಯಲಾಯಿತು ಎಂಬುದನ್ನು ಉಪೇಕ್ಷಿಸಿದಂತಾಗುತ್ತದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಅಭಿಪ್ರಾಯ ಪಟ್ಟಿದೆ.

ಸುಬ್ರಮಣ್ಯ ಸ್ವಾಮಿಗೆ ಸಂಬಂಧಪಟ್ಟವರು ಮಾತುಕತೆ ನಡೆಸಬಹುದೇ ಎಂದು ಸಮಾಲೋಚಿಸಲು ಮುಖ್ಯ ನ್ಯಾಯಾಧೀಶರು ಹೇಳಿರುವುದು ಕೂಡ ಆಕ್ಷೇಪಕಾರಿ ಸಂಗತಿ. ಮೊದಲನೆಯದಾಗಿ, ಸುಬ್ರಮಣ್ಯ ಸ್ವಾಮಿ ಈ ಕೇಸಿನ ಒಬ್ಬ ಅರ್ಜಿದಾರನಲ್ಲ. ಅಲ್ಲದೆ ಆತ ಮಸೀದಿಯನ್ನು ತೆಗೆದು ಆ ಸ್ಥಳದಲ್ಲಿ ಒಂದು ದೇವಸ್ಥಾನ ಕಟ್ಟಬೇಕು ಎಂದು ಪ್ರತಿಪಾದಿಸುವವರೆಂದು ಎಲ್ಲರಿಗೂ ಗೊತ್ತಿದೆ.

ನ್ಯಾಯಾಂಗ ಪ್ರಕ್ರಿಯೆ ಬಾಬ್ರಿ ಮಸೀದಿಯಿದ್ದ ಭೂಮಿಯ ಒಡೆತನಕ್ಕೆ ಸಂಬಂಧಪಟ್ಟದ್ದು. ಸುಪ್ರಿಂ ಕೋರ್ಟ್ ತನ್ನ ಮುಂದಿರುವ ಈ ವಿಷಯದ ನ್ಯಾಯನಿರ್ಣಯ ಮಾಡಬೇಕು ಮತ್ತು ತನ್ನ ನ್ಯಾಯಾಂಗ ಜವಾಬ್ದಾರಿಯನ್ನು ನಿರ್ವಹಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಉನ್ನತ ಮಟ್ಟಗಳ ರಾಜಕೀಯ ಭ್ರಷ್ಟಾಚಾರವನ್ನು ಮೋದಿ ಸರಕಾರ ಕಾನೂನುಬದ್ಧಗೊಳಿಸುತ್ತಿದೆ

–ಸಿಪಿಐ(ಎಂ) ಪೊಲಿಟ್‌ಬ್ಯುರೊ

ಭ್ರಷ್ಟಾಚಾರವನ್ನು, ಅದರಲ್ಲೂ ಚುನಾವಣಾ ಪ್ರಕ್ರಿಯೆಯಲ್ಲಿ, ನಿಗ್ರಹಿಸಿ ದೇಶವನ್ನು ಶುದ್ಧಗೊಳಿಸುವ ದೊಡ್ಡ-ದೊಡ್ಡ ಮಾತುಗಳನ್ನಾಡುತ್ತಿರುವ ಮೋದಿ ಸರಕಾರ ಈ ದೇಶದ ಜನಗಳ ಕಣ್ಣಿಗೆ ಮಣ್ಣೆರಚಲು ಅತಿ ದೊಡ್ಡ ವಂಚನೆಯಲ್ಲಿ ತೊಡಗಿದೆ ಎಂಬುದು ಹಣಕಾಸು ಮಸೂದೆ 2017ರಲ್ಲಿ ತೂರಿಸಿರುವ ಒಂದು ತಿದ್ದುಪಡಿಯಿಂದ ಸ್ಪಷ್ಟವಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಟೀಕಿಸಿದೆ.

ಈ ಮಸೂದೆಯಲ್ಲಿ ಕಂಪನಿ ಕಾಯ್ದೆಯನ್ನು ತಿದ್ದುಪಡಿ ಮಾಡುವ ಅಂಶವನ್ನೂ ಸೇರಿಸಿ ಬಿಡಲಾಗಿದೆ. ಇದರ ಪ್ರಕಾರ ರಾಜಕೀಯ ಪಕ್ಷಗಳಿಗೆ ವಂತಿಗೆ ನೀಡಲು ಕಂಪನಿಗಳ ಮೇಲಿದ್ದ "ಹಿಂದಿನ ಮೂರು ವರ್ಷಗಳಲ್ಲಿ ನಿವ್ವಳ ಲಾಭದ 7.5% ಮಿತಿ"ಯನ್ನು ಕೈಬಿಡಲಾಗಿದೆ, ಅಲ್ಲದೆ ವಂತಿಗೆ ನೀಡಿದ ರಾಜಕೀಯ ಪಕ್ಷಗಳ ಹೆಸರು ಪ್ರಕಟಿಸಬೇಕು ಎಂಬ ಅಂಶವನ್ನೂ ತೆಗೆದು ಹಾಕಲಾಗಿದೆ. ಅಂದರೆ ಕಂಪನಿ ಕಾಯ್ದೆಯ ಈ ತಿದ್ದುಪಡಿಯ ನಂತರ ಕಾರ್ಪೊರೇಟ್‌ಗಳು ರಾಜಕೀಯ ಪಕ್ಷಗಳಿಗೆ ಚುನಾವಣಾ ಬಾಂಡ್‌ಗಳ ಸ್ಕೀಮಿನ ಮೂಲಕ ಎಷ್ಟು ಬೇಕಾದರೂ ವಂತಿಗೆಗಳನ್ನು ರವಾನಿಸಬಹುದು, ಮತ್ತು ಅದರ ಫಲಾನುಭವಿಗಳ ಹೆಸರುಗಳನ್ನು ಪ್ರಕಟಿಸಬೇಕಾಗಿರುವುದಿಲ್ಲ!

ರಾಜಕೀಯ ಪಕ್ಷಗಳಿಗೆ ಕಾರ್ಪೊರೇಟ್ ದೇಣಿಗೆಗಳು ಉನ್ನತ ಸ್ಥಾನಗಳಲ್ಲಿ ಭ್ರಷ್ಟಾಚಾರದ ಮೂಲಸೆಲೆಗಳು ಎಂದು ಅದನ್ನು ಸತತವಾಗಿ ವಿರೋಧಿಸಿಕೊಂಡು ಬಂದಿರುವ ಸಿಪಿಐ(ಎಂ), ಮೋದಿ ಸರಕಾರ ಈ ಮೂಲಕ ರಾಜಕೀಯ ಪಕ್ಷಗಳಿಗೆ ಕಾರ್ಪೊರೇಟ್ ದೇಣಿಗೆಗಳ ಪ್ರಕ್ರಿಯೆಯನ್ನು ವಿಸ್ತಾರಗೊಳಿಸಿದೆ, ಮಾತ್ರವೇ ಅಲ್ಲ, ವ್ಯಾಪಕ ಪ್ರಮಾಣದಲ್ಲಿ ಕಪ್ಪು ಹಣವನ್ನು ಬಿಳಿಮಾಡಲು ಹೊಸ ದಾರಿಗಳನ್ನು ಕಲ್ಪಿಸಿ ಕೊಟ್ಟಿದೆ ಎಂದು ಬಲವಾಗಿ ಖಂಡಿಸಿದೆ.

ನಮ್ಮ ಪ್ರಜಾಸತ್ತಾತ್ಮಕ ಚುನಾವಣಾ ಪ್ರಕ್ರಿಯೆಯನ್ನು ಬಲಿಷ್ಟಗೊಳಿಸಬೇಕು ಎಂಬ ಸದಾಶಯ ಹೊತ್ತಿರುವ ಎಲ್ಲ ರಾಜಕೀಯ ಪಕ್ಷಗಳು, ಸಾಮಾಜಿಕ ಆಂದೋಲನಗಳು ಮತ್ತು ವ್ಯಕ್ತಿಗಳು ರಾಜಕೀಯ ಭ್ರಷ್ಟಾಚಾರವನ್ನು ಅಸಹ್ಯ ಮಟ್ಟಗಳ ವರೆಗೆ ಒಯ್ಯುವ ಈ ಕ್ರಮಗಳನ್ನು ಒಟ್ಟಾಗಿ ವಿರೋಧಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಕರೆ ನೀಡಿದೆ.

ಯೋಗಿ ಆದಿತ್ಯನಾಥ ಆಯ್ಕೆಯ ಬಗ್ಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸಬ್ ಕಾ ಸಾಥ್, ಸಬ್ ಕಾ ವಿಕಾಸ್' ಘೋಷಣೆಯ ಅಪಹಾಸ್ಯ

ಉತ್ತರಪ್ರದೇಶದ ಮುಖ್ಯಮಂತ್ರಿಯಾಗಿ ಯೋಗಿ ಆದಿತ್ಯನಾಥರ ನೇಮಕ ಬಿಜೆಪಿಯ ಒಂದು ಆಘಾತಕಾರಿ ನಿರ್ಧಾರ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ. ಆರೆಸ್ಸೆಸ್‌ನ ಆಯ್ಕೆಯನ್ನು ಅದರ ರಾಜಕೀಯ ಅಂಗವಾದ ಬಿಜೆಪಿ ಕಾರ್ಯಗತ ಮಾಡಿದ್ದು, ಇದು ಒಂದು ಉದ್ದೇಶಪೂರ್ವಕ ನಡೆಯಾಗಿದೆ, ರಾಜ್ಯಕ್ಕೆ ಇದು ಶುಭಸೂಚಕವಲ್ಲ ಎಂದು ಅದು ಅಭಿಪ್ರಾಯ ಪಟ್ಟಿದೆ.

ಆದಿತ್ಯನಾಥ ಒಬ್ಬ ಸುಪರಿಚಿತ ಹಿಂದುತ್ವ ಮತಾಂಧ, ಕೋಮುವಾದಿ ಹಿಂಸಾಚಾರವನ್ನು ಉದ್ರೇಕಿಸಿರುವ ದಾಖಲೆ ಹೊಂದಿರುವಾತ. ಅವರ ಮೇಲೆ ಹಲವಾರು ಕ್ರಿಮಿನಲ್ ಕೇಸುಗಳಿವೆ. ಅಲ್ಲದೆ ಆತ ಉಗ್ರ ಜಾತಿವಾದಿ ಕಣ್ಣೋಟಗಳ ವ್ಯಕ್ತಿ. ಆದಿತ್ಯನಾಥರ ಆಯ್ಕೆ ಪ್ರಧಾನ ಮಂತ್ರಿಗಳು ಸದಾ ಹೇಳಿಕೊಳ್ಳುತ್ತಿರುವ ಅಭಿವೃದ್ಧಿ ತಮ್ಮ ಅಜೆಂಡಾ ಎಂಬ ದಾವೆ ಹುಸಿಯೆಂಬುದನ್ನು ಮತ್ತೊಮ್ಮೆ ಬಯಲಿಗೆಳೆದಿದೆ. ಇದು ಅವರದ್ದೇ 'ಸಬ್‌ಕಾ ಸಾಥ್, ಸಬ್‌ಕಾ ವಿಕಾಸ್'(ಎಲ್ಲರೊಂದಿಗೆ, ಎಲ್ಲರ ವಿಕಾಸ) ಘೋಷಣೆಯ ಅಪಹಾಸ್ಯವಾಗಿದೆ ಎಂದು ಸಿಪಿಐ(ಎಂ) ಟೀಕಿಸಿದೆ.

ಇಂತಹ ಸನ್ನಿವೇಶದಲ್ಲಿ, ಉತ್ತರಪ್ರದೇಶದ ಎಲ್ಲ ಪ್ರಜಾಪ್ರಭುತ್ವವಾದಿ ಮತ್ತು ಜಾತ್ಯತೀತ ಶಕ್ತಿಗಳು ಕೋಮು ಸಾಮರಸ್ಯ ಕಾಪಾಡಿಕೊಳ್ಳಲು ಮತ್ತು ಸಂವಿಧಾನ ಒದಗಿಸಿರುವ ಖಾತರಿಗಳಿಗೆ ಅನುಗುಣವಾಗಿ ಎಲ್ಲ ಜನವಿಭಾಗಗಳ ಹಕ್ಕುಗಳ ರಕ್ಷಣೆಗೆ ಒಟ್ಟಾಗಿ ಕೆಲಸ ಮಾಡಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಕರೆ ನೀಡಿದೆ.

ಮಾರುತಿ ಸುಝುಕಿ ಕಾರ್ಮಿಕರಿಗೆ ಶಿಕ್ಷೆ: ಸರಕಾರ-ಮಾಲಕರ ದುಷ್ಟಕೂಟದ ಶಾಮೀಲು ಅಧಿಕಾರದ ದುರುಪಯೋಗದ ನಾಚಿಕೆಗೆಟ್ಟ ಪ್ರದರ್ಶನ –ಸಿಐಟಿಯು

ಮಾರುತಿ ಸುಝುಕಿ ಕಂಪನಿಯ ಮನೇಸರ್ ಸ್ಥಾವರದಲ್ಲಿ 2012ರಲ್ಲಿ ನಡೆದ ಹಿಂಸಾಚಾರಕ್ಕೆ ಸಂಬಂಧಪಟ್ಟಂತೆ ಗುರ್‌ಗಾಂವ್‌ನ ಅಡಿಶನಲ್ ಸೆಶನ್ಸ್ ನ್ಯಾಯಾಲಯ 13 ಕಾರ್ಮಿಕರಿಗೆ ಜೀವಾವಧಿ ಶಿಕ್ಷೆ ವಿಧಿಸಿದೆ ಮತ್ತು ಇನ್ನೂ ನಾಲ್ಕು ಕಾರ್ಮಿಕರಿಗೆ 5 ವರ್ಷಗಳ ಸಜೆ ವಿಧಿಸಿದೆ. ಇದು ಅತ್ಯಂತ ದುಃಖದ ಮತ್ತು ನೋವಿನ ಸಂಗತಿ ಎಂದು ಸಿಐಟಿಯು ಹೇಳಿದೆ.

ಈ ಫ್ಯಾಕ್ಟರಿಯ ಒಬ್ಬ ಮ್ಯಾನೇಜರ್ ಕೊಲೆಯಾದ 2012ರ ಹಿಂಸಾಚಾರ ಮಾಲಕರ ಬಾಡಿಗೆ ಗೂಂಡಾಗಳ ಕೃತ್ಯ, ಅವರನ್ನು ಕಾರ್ಮಿಕರ ಸಂಘಗಳನ್ನು ಮುರಿಯಲು ಆಧಾರ ಕಲ್ಪಿಸಲಿಕ್ಕಾಗಿ ಬಳಸಲಾಗಿತ್ತು. ಈ ಘಟನೆಗೆ ಯಾವ ರೀತಿಯಲ್ಲೂ ಹೊಣೆಗಾರರಲ್ಲದ ಕಾರ್ಮಿಕರನ್ನು ರಾಜ್ಯ ಆಡಳಿತ, ಪೊಲೀಸ್ ಇಲಾಖೆ ಮತ್ತು ಮಾಲಕರ ದುಷ್ಟಕೂಟ ಸೃಷ್ಟಿಸಿದ ಸುಳ್ಳು ಸಾಕ್ಷ್ಯಗಳ ಆಧಾರದಲ್ಲಿ ಶಿಕ್ಷಿಸಲಾಗಿದೆ. ಇದು ಅಧಿಕಾರದ ದುರುಪಯೋಗದ ನಾಚಿಕೆಗೆಟ್ಟ ಪ್ರದರ್ಶನ ಎಂದು ಸಿಐಟಿಯು ಬಲವಾಗಿ ಟೀಕಿಸಿದೆ.

ಒಬ್ಬ ಮ್ಯಾನೇಜರ್ ಬೆಂಕಿಯ ಹೊಗೆಯಿಂದ ಉಸಿರುಗಟ್ಟಿ ಸತ್ತ ಈ ಘಟನೆಯಲ್ಲಿ 546 ಖಾಯಂ ಮತ್ತು ಸುಮಾರು 1800 ಕ್ಯಾಶುವಲ್ ಕಾರ್ಮಿಕರನ್ನು ಕೆಲಸದಿಂದ ಹೊರಗಟ್ಟಲಾಯಿತು, 213 ಕಾರ್ಮಿಕರ ಮೇಲೆ ಕೊಲೆ ಆಪಾದನೆ ಹಾಕಿ ಜೈಲಿಗಟ್ಟಲಾಯಿತು. ಅವರಲ್ಲಿ 117 ಮಂದಿಯನ್ನು ನಾಲ್ಕೂವರೆ ವರ್ಷಗಳ ಜೈಲುವಾಸದ ನಂತರ ಈಗ ಖುಲಾಸೆ ಮಾಡಲಾಗಿದೆ.

ಹರ್ಯಾಣ ಸರಕಾರ ಈ ಕೇಸ್‌ಗಾಗಿ ಒಬ್ಬ ಖಾಸಗಿ ವಕೀಲ ಕೆಟಿಎಸ್‌ತುಲಸಿಗೆ ಸರ್ಕಾರದ ಖಜಾನೆಯಿಮದ 9 ಕೋಟಿ ರೂ. ಸಂಭಾವನೆ ನೀಡಿದೆ ಎಂದೂ ತಿಳಿದು ಬಂದಿದೆ.

ಇಷ್ಟಾದರೂ ಗುರುಗಾಂವ್ ಕೈಗಾರಿಕಾ ಪ್ರದೇಶದಲ್ಲಿ ಕಾರ್ಮಿಕ ಆಂದೋಲನವನ್ನು ದಮನ ಮಾಡುವ ಹರ್ಯಾಣ ಸರಕಾರ ಮತ್ತು ಬಂಡವಾಳಶಾಹಿಗಳ ಹೀನ ಶಾಮೀಲಿಗೆ ಪೂರ್ಣವಾಗಿ ಸಾಧ್ಯವಾಗಿಲ್ಲ.

ಮಾರ್ಚ್ 16ರಂದು ಈ ಪ್ರದೇಶದ ಒಂದು ಲಕ್ಷಕ್ಕೂ ಹೆಚ್ಚು ಕಾರ್ಮಿಕರು ಈ ತೀರ್ಪಿನ ಪ್ರತಿಭಟನಾರ್ಥ ಮಧ್ಯಾಹ್ನದ ಊಟವನ್ನು ಬಹಿಷ್ಕರಿಸಿದರು.

ಮಾರ್ಚ್ 18ರ ಸಂಜೆಯ ಶಿಫ್ಟ್‌ನಲ್ಲಿ ಗುರ್‌ಗಾಂವ್/ ಮಾನೇಸರ್‌ನ ಮಾರುತಿ ಮತ್ತು ಅದರ ಎಲ್ಲ ಉಪಘಟಕಗಳ ಕಾರ್ಮಿಕರು ಒಂದು ಗಂಟೆಯ ಮುಷ್ಕರ ನಡೆಸಿದರು. ಗುರ್‌ಗಾಂವ್ ಕೈಗಾರಿಕಾ ಪ್ರದೇಶದಲ್ಲಿ ಕಾರ್ಮಿಕ ಸಂಘಗಳು ಶಿಕ್ಷೆಗೊಳಗಾಗಿರುವ ಕಾರ್ಮಿಕರೊಂದಿಗೆ ಸೌಹಾರ್ದ ವ್ಯಕ್ತಪಡಿಸುವ ಐಕ್ಯ ಕಾರ್ಯಾಚರಣೆಗಳನ್ನು ನಡೆಸುವ ಯೋಜನೆ ರೂಪಿಸುತ್ತಿವೆ. ಇದರಲ್ಲಿ ಈ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸುವುದೂ ಸೇರಿದೆ.

ಸಿಐಟಿಯು ಕಾರ್ಮಿಕರ ಈ ತಕ್ಷಣದ ಮತ್ತು ಐಕ್ಯ ಸ್ಪಂದನೆಯ ಬಗ್ಗೆ ಅವರನ್ನು ಅಭಿನಂದಿಸುತ್ತ ಕಾರ್ಮಿಕ ಆಂದೋಲನ ಈ ರೀತಿಯ ಸರಕಾರ-ಮಾಲಕ ದುಷ್ಟಕೂಟದ ದುಷ್ಟ ಕೃತ್ಯಗಳನ್ನು ಒಪ್ಪುವುದಿಲ್ಲ, ಅವುಗಳೆದುರು ತಲೆ ಬಾಗುವುದಿಲ್ಲ ಎಂದು ಎಚ್ಚರಿಸಿದೆ.

ಅನ್ಯಾಯದ ವಿರುದ್ಧ, ಮತ್ತು ಕಾನೂನು ಸಮರ ನಡೆಸುವಲ್ಲಿಯೂ ಮಾರುತಿ ಕಾರ್ಮಿಕರ ಹೋರಾಟದೊಂದಿಗೆ ಸೌಹಾರ್ದ ವ್ಯಕ್ತಪಡಿಸುವಂತೆ ಸಿಐಟಿಯು ತನ್ನ ಎಲ್ಲ ರಾಜ್ಯಸಮಿತಿಗಳಿಗೆ, ಸಂಬದ್ಧ ಸಂಘಗಳಿಗೆ ಹಾಗೂ ಸಮಸ್ತ ಕಾರ್ಮಿಕ ಆಂದೋಲನಕ್ಕೆ ಕರೆ ನೀಡಿದೆ.

ಭಗತ್ ಸಿಂಗ್ ಹುತಾತ್ಮ ದಿನದಂದು ಸಂಕಲ್ಪ ದಿನಾಚರಣೆ

ಬ್ರಿಟಿಶರ ಕಾಲದಲ್ಲಿ ಕಾರ್ಮಿಕರ ಹಕ್ಕುಗಳನ್ನು ದಮನ ಮಾಡುವ ಒಂದು ಮಸೂದೆಗೆ ಪ್ರತಿಭಟನೆಯಾಗಿ ಬಾಂಬೆಸೆದ ಭಗತ್ ಸಿಂಗ್, ಸುಖದೇವ ಮತ್ತು ರಾಜ್‌ಗುರು ಅವರು ನೇಣುಗಂಬಕ್ಕೇರಿದ ಮಾರ್ಚ್ 23ನ್ನು ಈ ವರ್ಷ ಆಳುವ ವರ್ಗಗಳ ಕಾರ್ಮಿಕ-ವಿರೋಧಿ ಧೋರಣೆಗಳ ವಿರುದ್ಧ ಹೋರಾಟ ನಡೆಸುವ ಸಂಕಲ್ಪದ ದಿನವಾಗಿ ಆಚರಿಸಲು ಸಿಐಟಿಯು ಹರ್ಯಾಣ ರಾಜ್ಯಸಮಿತಿ ನಿರ್ಧರಿಸಿದೆ.

ಈಗ ಖುಲಾಸೆಯಾಗಿರುವ ಕಾರ್ಮಿಕರಿಗೆ ಪೂರ್ಣ ಪರಿಹಾರ ನೀಡಬೇಕು, ಇವರು ಮತ್ತು ಆಗ ತೆಗೆದು ಹಾಕಿದ ಎಲ್ಲ ಕಾರ್ಮಿಕರನ್ನು ಮತ್ತೆ ಕೆಲಸಕ್ಕೆ ತಗೊಳ್ಳಬೇಕು ಎಂದು ಅದು ಆಗ್ರಹಿಸಿದೆ.

ಮಾತೆಂದರೆ ಇದು

.....ಸಾಮಾಜಿಕ ಪ್ರಗತಿ ಕೆಲವೇ ಜನರ ಔನ್ನತ್ಯವನ್ನು ಅವಲಂಬಿಸಿರುವುದಿಲ್ಲ, ಅದು ಪ್ರಜಾಪ್ರಭುತ್ವವನ್ನು ಶ್ರೀಮಂತಗೊಳಿಸುವುದರ ಮೇಲೆ ಅವಲಂಬಿಸಿದೆ ಅಥವ ಸಾಮಾಜಿಕ, ರಾಜಕೀಯ ಮತ್ತು ವೈಯಕ್ತಿಕ ಬದುಕಿನಲ್ಲಿ ಸಮಾನ ಅವಕಾಶ ಇದ್ದಾಗ ಮಾತ್ರವೇ ಸಾರ್ವತ್ರಿಕ ಸೋದರತ್ವವನ್ನು ಸಾಧಿಸಬಹುದು.



–ಭಗತ್‌ಸಿಂಗ್
ತನ್ನ ಕೊನೆಯ ದಿನಗಳಲ್ಲಿ ಬರೆಯುತ್ತಿದ್ದ ಜೈಲು ದಿನಚರಿಯಲ್ಲಿನ ಒಂದು ಟಿಪ್ಪಣಿ

ದಿಲ್ಲಿಯಲ್ಲಿ ತಮಿಳುನಾಡು ರೈತರ ಧರಣಿ ಕೃಷಿ ಬಿಕ್ಕಟ್ಟಿನ ಬಗ್ಗೆ ಸರಕಾರದ ನಿರ್ಲಕ್ಷ್ಯ –ಎಐಕೆಎಸ್ ಟೀಕೆ

ಮಾರ್ಚ್ 14ರಿಂದ ತಮಿಳುನಾಡಿನ ರೈತರ ಪ್ರತಿನಿಧಿಗಳು ದಿಲ್ಲಿಯ ಜಂತರ್ ಮಂತರ್‌ನಲ್ಲಿ ಧರಣಿ ನಡೆಸುತ್ತಿದ್ದಾರೆ. ಸಾಲಮನ್ನಾ ಇವರ ಬೇಡಿಕೆಗಳಲ್ಲಿ ಒಂದು.

ಅಖಿಲ ಭಾರತ ಕಿಸಾನ್ ಸಭಾದ ಜಂಟಿ ಕಾರ್ಯದರ್ಶಿ ಎನ್ ಕೆ ಶುಕ್ಲ ಮತ್ತು ಖಜಾಂಚಿ ಪಿ.ಕೃಷ್ಣಪ್ರಸಾದ್ ಮಾರ್ಚ್ 22ರಂದು ಧರಣಿನಿರತರನ್ನು ಭೇಟಿ ಮಾಡಿದರು. ರೈತಮುಖಂಡ ಪಿ.ಅಯ್ಯಕಣ್ಣು ಅವರೊಂದಿಗೆ ಮಾತುಕತೆ ನಡೆಸಿದರು.

ಪ್ರಧಾನ ಮಂತ್ರಿಗಳು ತಕ್ಷಣವೇ ಸಾಲಮನ್ನಾ ಸೇರಿದಂತೆ ರೈತರ ನ್ಯಾಯಯುತ ಬೇಡಿಕೆಗಳ ಬಗ್ಗೆ ತಕ್ಷಣ ನಿರ್ಧಾರ ಕೈಗೊಳ್ಳಬೇಕೆಂದು ಎಐಕೆಎಸ್ ಆಗ್ರಹಿಸಿದೆ.

ರೈತರ ಪರಿಸ್ಥಿತಿಗಳನ್ನು ಹದಗೆಡಿಸುತ್ತಿರುವ ನವ-ಉದಾರವಾದಿ ಧೋರಣೆಗಳನ್ನು ಅನುಸರಿಸುತ್ತಿರುವ ನಿರ್ಲಕ್ಷ್ಯದ ವಿರುದ್ಧ ದೇಶಾದ್ಯಂತ ಜಂಟಿ ಹೋರಾಟಗಳನ್ನು ನಡೆಸಬೇಕಾಗಿದೆ ಎಂದು ಎಐಕೆಎಸ್ ಮುಖಂಡರು ಹೇಳಿದ್ದಾರೆ.

ಕಾರ್ಮಿಕರ ಹೋರಾಟದಲ್ಲೊಂದು ಮೈಲಿಗಲ್ಲು

ಸಂಪಾದಕೀಯ

ಮಾರ್ಚ್ 20ರಿಂದ 23ರ ವರೆಗೆ ನಡೆದ ನಾಲ್ಕು ದಿನಗಳ ಅಂಗನವಾಡಿ ಕಾರ್ಮಿಕರ ಹೋರಾಟ ಹಲವು ರೀತಿಗಳಲ್ಲಿ ಚಾರಿತ್ರಿಕ ಹೋರಾಟ. ಕರ್ನಾಟಕದ 65 ಸಾವಿರಕ್ಕೂ ಹೆಚ್ಚು ಅಂಗನವಾಡಿ ಕೇಂದ್ರಗಳಲ್ಲಿ ಕೆಲಸ ಮಾಡುತ್ತಿರುವ ಸುಮಾರು 1.25 ಲಕ್ಷದಷ್ಟು ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಕನಿಷ್ಟ ಕೂಲಿಗಿಂತಲೂ ಕಡಿಮೆ "ಗೌರವ ಧನ" ಪಡೆಯುತ್ತಿದ್ದಾರೆ. ಇದಕ್ಕೆ ಸರಕಾರ ಕೊಡುವ ನೆಪ (ಅವರ ನವ–ಉದಾರವಾದಿ ಭಾಷೆಯಲ್ಲಿ) ಅವರ 'ಅರೆಕಾಲಿಕ' 'ಅನುತ್ಪಾದಕ' ಕೆಲಸ ಅಂತ. 1975ರಲ್ಲಿ ಆರಂಭವಾದ ಸಮಗ್ರ ಶಿಶು ಬೆಳವಣಿಗೆ ಯೋಜನೆ(ಐ.ಸಿ.ಡಿ.ಎಸ್.) ಯ ಭಾಗವಾಗಿ ಪ್ರಾರಂಭಿಕ ಶಿಶು ಆರೈಕೆ, ಶಿಕ್ಷಣ ಹಾಗೂ ಅಭಿವೃದ್ಧಿ; ಮಗುವಿನ ಆರೈಕೆ ಮತ್ತು ಪೌಷ್ಟಿಕತೆ ಬಗ್ಗೆ ಸಲಹೆ; ಆರೋಗ್ಯ ಸೇವೆ; ಸಮುದಾಯ ಒಟ್ಟುಗೂಡಿಸುವುದು, ಅರಿವು ಮತ್ತು ಮಾಹಿತಿ ಶಿಕ್ಷಣ ಸಂವಹನ – ಇವು ಕಾರ್ಯಕರ್ತೆಯ ಕರ್ತವ್ಯಗಳು.


ಬೇಡಿಕೆ ಈಡೇರುವವರೆಗೆ ಪ್ರತಿಭಟನೆ ಮುಂದುವರಿಕೆ

ರಸ್ತೇಲೇ ಯುಗಾದಿ ಮಾಡ್ತೀವಿ!

ಮುಖ್ಯಮಂತ್ರಿ ಜತೆ ಸಂಧಾನ ವಿಫಲ ಬಳಿಕ ಅಂಗನವಾಡಿ ಕಾರ್ಯಕರ್ತೆಯರ ಘೋಷಣೆ

ಏ.19ರಂದು ಮತ್ತೆ ಸಭೆ ನಡೆಸಿ ಸಮಸ್ಯೆ ಬಗೆಹರಿಸುವ ಸಿದ್ದರಾಮಯ್ಯ ಭರವಸೆಗೆ ತಿರಸ್ಕಾರ

ಕರ್ನಾಟಕದಲ್ಲಿ ಅಪೌಷ್ಟಿಕತೆ ಕಡಿಮೆ ಮಾಡಿ ಶಿಶು ಮರಣ ಕಡಿಮೆ ಮಾಡುವಲ್ಲಿ, 20 ಲಕ್ಷ ಮಹಿಳೆಯರನ್ನು ಒಳಗೊಂಡ 1.4 ಲಕ್ಷ ಸ್ತ್ರೀಶಕ್ತಿ ಗುಂಪುಗಳನನು ರಚಿಸಿ ಕಾರ್ಯ ನಿರ್ವಹಿಸುವಲ್ಲಿ, 18.65 ಲಕ್ಷ ಭಾಗ್ಯಲಕ್ಷ್ಮಿ ಬಾಂಡ್ ಫಲಾನುಭವಿಗಳನ್ನು ಗುರುತಿಸಿ ವಿತರಿಸುವಲ್ಲಿ ಆಕೆಯ ಶ್ರಮವೇ ಪ್ರಧಾನ. ಇವು ಅನುತ್ಪಾದಕವೇ. ಇವು ಶ್ರಮಶಕ್ತಿಯನ್ನೇ ಉತ್ಪಾದಿಸುವ ಕೆಲಸ. ಇದಲ್ಲದೆ ಈಗ ಐ.ಸಿ.ಡಿ.ಎಸ್. ಯೋಜನೇತರ ಕೆಲಸಗಳನ್ನು ಆಕೆಯ ಮೇಲೆ ಹೊರಿಸಲಾಗುತ್ತಿದೆ. ಭಾಗ್ಯಲಕ್ಷ್ಮಿ, ಸ್ತ್ರೀಶಕ್ತಿ ಕೆಲಸಗಳು ಹೆಚ್ಚಾಗಿ ಸಂಜೆಯೇ ನಡೆಯುತ್ತಿದ್ದು ಅವರ ಕೆಲಸ ಪೂರ್ಣಕಾಲಿಕವೇ.

ಅಂಗನವಾಡಿ ಕಾರ್ಯಕರ್ತೆಯರು ರಾಜ್ಯದಾದ್ಯಂತ ಸಂಘಟಿತರಾಗಿ ಕಳೆದ ಎರಡು ದಶಕಗಳಿಂದಲೂ ತಮ್ಮ ಗೌರವಧನ ಹೆಚ್ಚಳಕ್ಕೆ, ಆರೋಗ್ಯ ಮುಂತಾದ ಸಾಮಾಜಿಕ ಭದ್ರತೆ ಸವಲತ್ತು ಪಡೆಯಲು, ಕಾರ್ಮಿಕರು ಎಂದು ಪರಿಗಣಿಸಿ ಕಾರ್ಮಿಕ ಹಕ್ಕು ಪಡೆಯಲು, ಕೆಲಸ ಖಾಯಮಾತಿಗಾಗಿ ಹೋರಾಡುತ್ತಿದ್ದಾರೆ. ಬೆಂಗಳೂರಿನಲ್ಲೂ, ರಾಜ್ಯದ ಎಲ್ಲೆಡೆಯಲ್ಲೂ ಹೋರಾಟ ಮಾಡುತ್ತಾ ಬಂದಿದ್ದಾರೆ. ಇತ್ತೀಚೆಗೆ ಜನವರಿ 31ರಿಂದ 3 ದಿನದ ಹೋರಾಟದ ಕೊನೆಯಲ್ಲಿ ಮುಖ್ಯಮಂತ್ರಿಗಳು ಬಜೆಟಿನಲ್ಲಿ ಅವರ ಬೇಡಿಕೆ ಈಡೇರಿಸುವ ಆಶ್ವಾಸನೆ ಕೊಟ್ಟಿದ್ದರು. ಗೌರವಧನವನ್ನು ರೂ. 10 ಸಾವಿರಕ್ಕೆ ಏರಿಸುವುದು ಅವರ ಮುಖ್ಯ ಬೇಡಿಕೆಯಾಗಿತ್ತು. ಆದರೆ ಬಜೆಟಿನಲ್ಲಿ ಈ ಬೇಡಿಕೆ ಈಡೇರದ್ದು ಅವರ ಆಕ್ರೋಶಕ್ಕೆ ಮುಖ್ಯ ಕಾರಣವಾಗಿತ್ತು.


ಗೌರವಧನ ಹೆಚ್ಚಳಕ್ಕೆ ಆಗ್ರಹಿಸಿ ಮುಂದುವರಿದ ಅಂಗನವಾಡಿ ಸಿಬ್ಬಂದಿ ಹೋರಾಟ

ಸದನದಲ್ಲಿ ಮಾರ್ದನಿಸಿದ ಕಾರ್ಯಕರ್ತೆಯರ ಕೂಗು

ಈ ಹೋರಾಟ ಅಂಗನವಾಡಿ ಕಾರ್ಮಿಕರ ಸಮರಶೀಲ ಹೋರಾಟದಲ್ಲೂ, ರಾಜ್ಯದ ಕಾರ್ಮಿಕರ ಹೋರಾಟದಲ್ಲೂ ಒಂದು ಮೈಲಿಗಲ್ಲು. ವಿಧಾನಸೌಧ ಚಲೋ ಹೊರಟಾಗ ಪೋಲಿಸರು ತಡೆಯುವುದು, ತಡೆದಾಗ ಮನವಿ ಅರ್ಪಿಸಲು ನಾಯಕರಿಗೆ ಬಿಟ್ಟು ವಾಪಸು ಹೋಗುವುದು ಈ ವರೆಗೆ ನಡೆದು ಬಂದ ಪದ್ಧತಿ. ಇದನ್ನೂ ಮೀರಿ ಅಂಗನವಾಡಿ ಕಾರ್ಮಿಕರು ರಸ್ತೆಯಲ್ಲೇ ಧರಣಿ ಕೂತು ನಾಲ್ಕು ದಿನ ತೆರವು ಮಾಡದೆ ಪಟ್ಟು ಹಿಡಿದದ್ದು ಒಂದು ಹೊಸ ಚಳುವಳಿ ವಿಧಾನವೇ ಹುಡುಕಿದಂತಿದೆ. ಪಶ್ಚಿಮದ 'ಒಕ್ಯುಪೈ'(ವಶ ಪಡಿಸಿಕೊಳ್ಳಿ) ಮತ್ತು ಕೈರೋದ 'ತಹ್ರಿರ್ ಚೌಕ್'ನ ಚಳುವಳಿಗಳಂತೆ ಭಾರತದ್ದೇ ಆದ ಒಂದು ಮಾದರಿ ಸಿದ್ಧಪಡಿಸಿದಂತಿದೆ. ಅಧಿಕಾರ ಕೇಂದ್ರವಾದ ವಿಧಾನಸೌಧಕ್ಕೆ ಹೊಗುವಂತಹ ರಸ್ತೆಯನ್ನು ವಶಪಡಿಸಿಕೊಂಡಿದ್ದು ಇನ್ನಷ್ಟು ಅರ್ಥಗರ್ಭಿತವಾದದ್ದು.

ಬಹುಶಃ ಇತ್ತೀಚಿನ ವರ್ಷಗಳಲ್ಲಿ ಯಾವ ಕಾರ್ಮಿಕ ಹೋರಾಟವೂ ವಿಧಾನಸಭೆ ಮತ್ತು ಸರಕಾರವನ್ನು ಇಷ್ಟರ ಮಟ್ಟಿಗೆ ಅಲುಗಾಡಿಸಲಿಲ್ಲ. ಸರಕಾರ ಮತ್ತು ವಿರೋ ಧ ಪಕ್ಷಗಳೆರಡನ್ನೂ ಅಲುಗಾಡಿಸಿತು. ಕಾರ್ಮಿಕರ ವಿಷಯ ಚರ್ಚೆಗೆ ಎತ್ತಿಕೊಳ್ಳುವಂತೆ ಬಾಧ್ಯ ಮಾಡಿತು.

ಕಾರ್ಮಿಕರ ಹೋರಾಟ ಅದರಲ್ಲೂ ರಸ್ತೆ ತಡೆಯಂತಹ ಹೋರಾಟ ಸಾರ್ವಜನಿಕರಿಂದ ಬೆಂಬಲ ಪಡೆಯುವುದಿಲ್ಲ. ಸಾಮಾನ್ಯವಾಗಿ ಅಸಹನೆ ಸಿಟ್ಟು ಪಡೆಯುತ್ತದೆ. ಕೆಲಮಟ್ಟಿಗೆ ಅವರ ಸತತ ಸಮರಶೀಲ ಹೋರಾಟದ ನಂತರವೂ ಸರಕಾರ ಏನೂ ಕೊಡುತ್ತಿಲ್ಲ ಎಂಬ ಅನುಕಂಪ, ಕೆಲಮಟ್ಟಿಗೆ ಅಂಗನವಾಡಿ ಕೆಲಸದ ಬಗ್ಗೆ ಗೌರವ ಅಭಿಮಾನಗಳಿಂದ ಈ ರೀತಿಯ ಸ್ಪಂದನ ಬಂದಿರಬಹುದು. ಕೆಲವು ವ್ಯಾಪಾರಿಗಳು ಸೇರಿದಂತೆ ಸಾಮಾನ್ಯ ಜನತೆ ಊಟ, ನೀರು ಮುಂತಾದ ಸಹಾಯ ಮಾಡಲು ಸ್ವಯಂಸ್ಫೂರ್ತವಾಗಿ ಬಂದಿದ್ದು ವಿಶೇಷ. ಅದೇ ಅಲ್ಲದೆ ಸಾಹಿತಿ, ಕಲಾವಿದರು, ಬುದ್ಧಿಜೀವಿಗಳ ಬೆಂಬಲ ಸಹ ಗಮನಾರ್ಹವಾಗಿತ್ತು.

ಕಾರ್ಮಿಕ ಹೋರಾಟದ ಬಗ್ಗೆ ಮೂಗು ಮುರಿಯುವ ಮಾಧ್ಯಮಗಳ ಬೆಂಬಲ ಸಹ ಸಾಮಾನ್ಯವಾಗಿ ನಿರೀಕ್ಷಿತವಲ್ಲದ್ದು. ಇದಕ್ಕೆ ಭಾಗಶಃ ಮಾಧ್ಯಮದ ಬಿಜೆಪಿ–ಪರ ಒಂದು ವಿಭಾಗ ಕಾಂಗ್ರೆಸ್ ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸಬೇಕೆಂದಿದ್ದು ಕಾರಣವಾಗಿರಬಹುದು. ಮೇಲೆ ಹೇಳಿದ ವ್ಯಾಪಕ ಸಾರ್ವಜನಿಕ ಬೆಂಬಲ ಅನುಕಂಪವೂ ಒಂದು ಕಾರಣವಾಗಿರಬಹುದು. ಸಾರ್ವಜನಿಕರ ಮತ್ತು ಮಾಧ್ಯಮಗಳ ಬೆಂಬಲ ಸರಕಾರದ ಮೇಲೂ ಪ್ರಭಾವ ಬೀರಿತು.

ಅಂಗನವಾಡಿ ಕಾರ್ಮಿಕರು ತಮ್ಮ ಬೇಡಿಕೆಗಳನ್ನು ತಕ್ಷಣ ಈಡೇರಿಸಿಕೊಳ್ಳಲು ಸಾಧ್ಯವಾಗದಿದ್ದರೂ, ಏಪ್ರಿಲ್ 10ರ ಸಭೆಯಲ್ಲಿ ಸರಕಾರ ಒಪ್ಪಿಕೊಳ್ಳುವಂತೆ ಸಾಕಷ್ಟು ಒತ್ತಡ ಉಂಟು ಮಾಡಿದ್ದಾರೆ. ಜನತೆಯ, ಸರಕಾರದ ಗಮನ ಸೆಳೆಯುವ ಮೂಲಕ ಅಂಗನವಾಡಿ ಕಾರ್ಮಿಕರ ಹೋರಾಟ ಎಲ್ಲಾ ಕಾರ್ಮಿಕರ ಅದರಲ್ಲೂ ಕನಿಷ್ಟ ಕೂಲಿಯನ್ನೂ ಪಡೆಯದ, ಖಾಯಮಾತಿಯೂ ಇಲ್ಲದ ಎಲ್ಲಾ ಕಾರ್ಮಿಕರ ಚಳುವಳಿಯನ್ನೂ ಒಂದಿಷ್ಟು ಮುಂದಕ್ಕೆ ಒಯ್ದಿದ್ದಾರೆ. ಕನಿಷ್ಟ ಕೂಲಿ, ಕಾರ್ಮಿಕರ ಹಕ್ಕು, ಕನಿಷ್ಟ ಸಾಮಾಜಿಕ ಭದ್ರತೆಯ ಬಗೆಗೆ ಎಲ್ಲರ ಗಮನ ಸೆಳೆದಿದ್ದಾರೆ.

ಈ ಚಾರಿತ್ರಿಕ ಹೋರಾಟದಿಂದ ಹಲವರು ಹಲವು ಪಾಠಗಳನ್ನು ಕಲಿಯಬೇಕಾಗಿದೆ. ಸರಕಾರ, ಮಾಧ್ಯಮಗಳಿಗೆ ಕಾರ್ಮಿಕರ ಹೋರಾಟದ ನಿರ್ಲಕ್ಷ ಮಾಡುವುದು ಅವಹೇಳನ ಮಾಡುವುದು ಕಷ್ಟ ಸಾಧ್ಯವಾಗುತ್ತಾ ಹೋಗಬಹುದು. ಇದರಿಂದ ಕಾರ್ಮಿಕ ವರ್ಗ ಸಹ ಹಲವು ಪಾಠಗಳನ್ನು ಕಲಿಯಬೇಕಾಗಿದೆ. ಇಂತಹ ದೊಡ್ಡ ಹೋರಾಟಗಳಿಗೆ ಹೋಗುವಾಗ ಅಂಗನವಾಡಿ ಕಾರ್ಮಿಕರ ದೀರ್ಘ ಹೋರಾಟಗಳ ಪರಂಪರೆಯಿಂದ ರೂಪುಗೊಂಡಂತಹ ಕೆಚ್ಚು, ಐಕ್ಯತೆ, ಸ್ಥೈರ್ಯಗಳನ್ನು ಬೆಳೆಸಿಕೊಳ್ಳಬೇಕಾಗಿದೆ. ಅಂಗನವಾಡಿ ಕಾರ್ಮಿಕರ ಬಗ್ಗೆ ಇದ್ದ ಭಾವನಾತ್ಮಕ ಗೌರವ, ಅನುಕಂಪ, ಬೆಂಬಲ ಎಲ್ಲಾ ಕಾರ್ಮಿಕರ ಬಗ್ಗೆ ಇರುವುದಿಲ್ಲ. ಆದ್ದರಿಂದ ಕಾರ್ಮಿಕರ ಹಕ್ಕುಗಳ ಬಗ್ಗೆ ಸಾರ್ವಜನಿಕರ ಅನುಕಂಪ, ಅರಿವು, ಬೆಂಬಲ ಗಳಿಸುವ ಬಗ್ಗೆ ಯೋಚಿಸಬೇಕಾಗಿದೆ. ಅಂಗನವಾಡಿ ಕಾರ್ಮಿಕರ ಹೊಸ ವಿಧಾನವನ್ನು ಹೇಗೆ ಮಟ್ಟ ಹಾಕುವುದು ಎಂದು ಸರಕಾರ ಹಾಗೂ ಮಾಲಕರು ಕಲಿಯುತ್ತಾರೆ. ಆದ್ದರಿಂದ ಹೊಸ ಸಮರಶೀಲ ವಿಧಾನಗಳ ಬಗ್ಗೆ ಚಿಂತಿಸಬೇಕಾಗಿದೆ.

ಈ ಹೋರಾಟದಿಂದ ಹೊಮ್ಮುವ ಇನ್ನೊಂದು ಅಂಶವೆಂದರೆ ಕಾರ್ಮಿಕರ ಪರಸ್ಪರ ಸೌಹಾರ್ದ ಬೆಂಬಲ ಇರಬೇಕಾದ ಮಟ್ಟದಲ್ಲಿ ಇರಲಿಲ್ಲ ಎಂಬುದು. ಕೆಲವು ಕಾರ್ಮಿಕ ಸಂಘಗಳು ಸೌಹಾರ್ದ ಬೆಂಬಲ ಘೋಷಿಸಿದರೂ, ಅದರ ವ್ಯಾಪಕತೆ ತೀವ್ರತೆ ಕಡಿಮೆ ಇತ್ತು. ಹಲವು ಕಾರ್ಮಿಕರು ಸ್ವಯಂಸ್ಫೂರ್ತಿಯಿಂದ ಸಾರ್ವಜನಿಕರಂತೆ ಬೆಂಬಲ ತೋರಿಸಿದರು. ಆದರೆ ಸಂಘಟಿತ ಕಾರ್ಮಿಕ ಸಂಘಗಳು, ಅಸಂಘಟಿತ ವಲಯದ ಕಾರ್ಮಿಕರು ಸ್ವಯಂಸ್ಫೂರ್ತವಾಗಿ ಅಂಗನವಾಡಿ ಅವರ ಹೋರಾಟ ತಮ್ಮ ಹೋರಾಟದ ಭಾಗವೆಂದು ಪರಿಗಣಿಸಿ ಸೌಹಾರ್ದ ಬೆಂಬಲ ಕೊಡಲಿಲ್ಲ. ಇದು ಮುಂದಿನ ದಿನಗಳಲ್ಲಿ ಎಲ್ಲಾ ಕಾರ್ಮಿಕರ ಹೋರಾಟಕ್ಕೆ ನಿರ್ಣಾಯಕವಾಗಲಿದೆ.

ಅಂಗನವಾಡಿ ಕಾರ್ಮಿಕರ ಈ ಚಾರಿತ್ರಿಕ ಹೋರಾಟಕ್ಕೆ ಲಾಲ್ ಸಲಾಂ! ಏಪ್ರಿಲ್ 10ರ ಅವರ ಅಂತಿಮ ಸುತ್ತಿನ ಹೋರಾಟ ಯಶಸ್ವಿಗೊಳಿಸಲು ಇಡೀ ಕಾರ್ಮಿಕ ವರ್ಗ ಶ್ರಮಿಸಬೇಕು. ಅದು ಕಾರ್ಮಿಕ ವರ್ಗದ ಅದರಲ್ಲೂ ನಿರ್ಣಾಯಕ ಕನಿಷ್ಟ ಕೂಲಿಯ ಹೋರಾಟವನ್ನು ಗಟ್ಟಿಗೊಳಿಸಲಿದೆ. ●

ಈ ವಾರ ಚರಿತ್ರೆಯಲ್ಲಿ

29 ಮಾರ್ಚ್ 1943

ಕಯ್ಯೂರು ವೀರರನ್ನು ಗಲ್ಲಿಗೇರಿಸಿದ ದಿನ

ಈ ದಿನ ನಿರಂಜನರ 'ಚಿರಸ್ಮರಣೆ' ಕಾದಂಬರಿ ಚಿರಸ್ಮರಣೀಯವಾಗಿಸಿದ ಕಯ್ಯೂರು ಹೋರಾಟದ 4 ವೀರರಾದ – ಅಪ್ಪು, ಕುಂಞಂಬು, ಚಿರಕುಂಡನ್, ಅಬು ಬಾಕರ್– ಗಲ್ಲಿಗೇರಿಸಿದ ದಿನ. 1940ರ ದಶಕದಲ್ಲಿ ಮಲಬಾರಿನಲ್ಲಿ ಎದ್ದು ಬಂದ ರೈತ ಹೋರಾಟದ ಭಾಗವಾಗಿ, ಕಯ್ಯೂರಿನಲ್ಲಿ ಎರಡು ಜಮೀನುದಾರರ ಹಾಗೂ ಅವರ ರಕ್ಷಣೆಗೆ ಬಂದು ರೈತರ ಮೇಲೆ ಕ್ರೂರ ದಮನ ಹರಿಯ ಬಿಟ್ಟ ಪೋಲಿಸರ ವಿರುದ್ಧ ರೈತರ ಹೋರಾಟದ ವೀರ ಅಧ್ಯಾಯ. ಈ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿದ 4 ಯುವ ನಾಯಕರ ಮೇಲೆ ಸುಳ್ಳು ಕೊಲೆ ಕೇಸು ಹಾಕಿ ಗಲ್ಲಿಗೇರಿಸಲಾಯಿತು.

ದಕ್ಷಿಣ ಕನ್ನಡ ಜಿಲ್ಲಾ ರೈತ ಸಮ್ಮೇಳನ

ವರದಿ: ವಾ. ಉ.



ಇತ್ತೀಚಿನ ವರ್ಷಗಳಲ್ಲಿ ಎಡಚಳುವಳಿ, ಕಾರ್ಮಿಕ ಚಳುವಳಿಗಳು ದ.ಕ.ಜಿಲ್ಲೆಯಲ್ಲಿ ಪ್ರಬಲವಾಗಿದ್ದರೂ, ಅದಕ್ಕೆ ಸಮದಂಡಿಯಾಗಿ ರೈತ ಚಳುವಳಿ ಬೆಳೆದಿರಲಿಲ್ಲ. ಈ ನಿಟ್ಟಿನಲ್ಲಿ ರೈತ ಚಳುವಳಿಯನ್ನು ಮತ್ತಷ್ಟು ಬಲಿಷ್ಟಗೊಳಿಸಲು ಮಾರ್ಚ್ 19ರಂದು ಉಳ್ಳಾಲದ ಕುತ್ತಾರು ಎಂಬಲ್ಲಿ ನಡೆದ ಕರ್ನಾಟಕ ಪ್ರಾಂತ ರೈತ ಸಂಘದ ದ.ಕ.ಜಿಲ್ಲಾ ಸಮಿತಿ ಏರ್ಪಡಿಸಿದ ಜಿಲ್ಲಾ ರೈತ ಸಮ್ಮೇಳನ ಕಾರ್ಯಕ್ರಮ ಮತ್ತು ಸಂಘಟನೆಗಳನ್ನು ಮರುರೂಪಿಸಿತು.

ಕೃಷಿಕರಿಗೆ ಅನುಕೂಲವಾಗುವ ಸ್ವಾಮಿನಾಥನ್ ವರದಿಯನ್ನು ಜಾರಿಮಾಡುವ ಭರವಸೆಯಲ್ಲಿ ಮತ ಪಡೆದ ಪ್ರಧಾನಿ ನರೇಂದ್ರಮೋದಿ ನೇತೃತ್ವದ ಸರಕಾರ, ಇದೀಗ ಬಂಡವಾಳಶಾಹಿಗಳ ಕೈಜೋಡಿಸಿದೆ. ಕೃಷಿ ಭೂಮಿಯನ್ನು ಕಾರ್ಪರೇಟ್ ಸಂಸ್ಥೆಗಳಿಗೆ ನೀಡುತ್ತಾ ದೇಶವನ್ನು ಮಾರಾಟ ಮಾಡಲು ಹೊರಟಿದೆ. ವಿದೇಶಗಳಲ್ಲಿ ಕೃಷಿಕರಿಗೆ ಶೇ.42 ಸಬ್ಸಿಡಿ ಕೊಡುತ್ತಿದ್ದರೆ, ಭಾರತದಲ್ಲಿ ಈಗ ಕೇವಲ ಶೇ.3 ಸಬ್ಸಿಡಿ ನೀಡಲಾಗುತ್ತಿದೆ ಎಂಬುದಾಗಿ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿ ಅಧ್ಯಕ್ಷ ಮಾರುತಿ ಮಾನ್ಪಡೆ ತಮ್ಮ ಉದ್ಘಾಟನಾ ಭಾಷಣದಲ್ಲಿ ನುಡಿದರು.

ಸಮ್ಮೇಳನದ ಪ್ರತಿನಿಧಿ ಅಧಿವೇಶನವು ಜಿಲ್ಲಾ ಸಮಿತಿ ಪ್ರಧಾನ ಕಾರ್ಯದರ್ಶಿ ಮಂಡಿಸಿದ ವರದಿಯನ್ನು ಚರ್ಚಿಸಿತು. ಜಿಲ್ಲೆಯ ಕೃಷಿ ಮತ್ತು ರೈತ ಸಂಬಂಧಿಯಾದ ಹಲವು ನಿರ್ಣಯಗಳನ್ನು ಸಮ್ಮೇಳನವು ಕೈಗೊಂಡಿರುತ್ತದೆ. ಕಸ್ತೂರಿ ರಂಗನ್ ವರದಿಯನ್ನು ಜಾರಿಮಾಡಕೂಡದು, ಸ್ವಾಮಿನಾಥನ್ ವರದಿಯಲ್ಲಿ ಕೃಷ್ಯುತ್ಪನ್ನಗಳಿಗೆ ವೆಚ್ಚದ ಒಂದೂವರೆಪಟ್ಟು ಬೆಲೆ ನಿಗದಿಗೊಳಿಸಬೇಕು, ಅಡಿಕೆ ತೆಂಗುಗಳಿಗೆ ಬೆಂಬಲ ಬೆಲೆ ನೀಡಬೇಕು, ಸರಕಾರಿ ಭೂಮಿಗಳಲ್ಲಿ ವಾಸ ಹಾಗೂ ಕೃಷಿ ಮಾಡಿರುವವರಿಗೆ ಅತಿ ಶೀಘ್ರದಲ್ಲಿ 94 ಸಿ ಮತ್ತು 94 ಸಿಸಿ ನಿಯಮಗಳ ಅಡಿಯಲ್ಲಿ ಹಕ್ಕುಪತ್ರ ನೀಡಬೇಕು, ಅರಣ್ಯ ಭೂಮಿಯಲ್ಲಿ ದ.ಕ. ಜಿಲ್ಲೆಯಲ್ಲಿ ಬಹಳ ವರ್ಷಗಳಿಂದ ಭೂಮಿಯನ್ನು ಅಭಿವೃದ್ಧಿಗೊಳಿಸಿರುವವರಿಗೆ ಮತ್ತು ಆದಿವಾಸಿಗಳಿಗೆ ಆ ಭೂಮಿ ಮಂಜೂರು ಮಾಡಬೇಕು, ನಗರ ಮತ್ತು ಗ್ರಾಮಗಳೆಂಬ ಭೇದವಿಲ್ಲದೆ ವಸತಿ ರಹಿತರಿಗೆ ನಿವೇಶನ ಭೂಮಿಯನ್ನು ಮಂಜೂರು ಮಾಡಬೇಕು ಮೊದಲಾದ ನಿರ್ಣಯಗಳನ್ನು ಸಮ್ಮೇಳನ ಕೈಗೊಂಡಿರುತ್ತದೆ. ಹಿರಿಯ ರೈತ ಮುಖಂಡರೂ, ಪ್ರಾಂತ ರೈತ ಸಂಘದ ಜಿಲ್ಲಾ ಸಮಿತಿಯ ಅಧ್ಯಕ್ಷರೂ ಆದ ಕೆ.ಆರ್.ಶ್ರೀಯಾನ್ ಸಮ್ಮೇಳನದ ಉದ್ಘಾಟನಾ ಸಮಾರಂಭ ಮತ್ತು ಪ್ರತಿನಿಧಿ ಅಧಿವೇಶನದ ಅಧ್ಯಕ್ಷತೆ ವಹಿಸಿದ್ದರು. ಸಮ್ಮೇಳನದ ಧ್ವಜಾರೋಹಣವನ್ನು ಹಿರಿಯ ರೈತ ಗಂಗಯ್ಯ ಗಟ್ಟಿ ನಡೆಸಿಕೊಟ್ಟರು.

ಸಮ್ಮೇಳನದ ಬಹಿರಂಗ ಸಭೆ ತೊಕ್ಕೊಟಿನಲ್ಲಿ ನಡೆದಾಗ ಆ ಸಭೆಯನ್ನುದ್ದೇಶಿಸಿ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಉಪಾಧ್ಯಕ್ಷರೂ, ಮಾಜಿ ಶಾಸಕರೂ ಆದ ಜಿ.ವಿ.ಶ್ರೀರಾಮರೆಡ್ಡಿ ಮಾತನಾಡಿದರು. ಕೃಷಿ ಭೂಮಿಗೆ ರೈತರಿಗೆ ಮೂಲ ಸೌಲಭ್ಯ ಮತ್ತು ಸಾಲ ಸೌಲಭ್ಯಗಳನ್ನು ಒದಗಿಸಬೇಕಾದ ಕೇಂದ್ರ ಮತ್ತು ರಾಜ್ಯ ಸರಕಾರಗಳು ರೈತರ ಭೂಮಿಗಳನ್ನು ಅಗ್ಗವಾಗಿ ಪಡೆದು ಉದ್ಯಮಿಗಳಿಗೆ ನೀಡಿರುವುದಲ್ಲದೆ, ಅದೇ ರೈತರ ಅಸಹಾಯಕತೆಯನ್ನು ಉಪಯೋಗಿಸಿಕೊಂಡು ಅವರ ಜಾಗಗಳಲ್ಲಿ ಕಾರ್ಖಾನೆಗಳನ್ನು ನಿರ್ಮಿಸಿ ಅವರನ್ನೇ ಕೂಲಿಯಾಳುಗಳಾಗಿ ದುಡಿಸುವ ವಾತಾವರಣ ಸೃಷ್ಟಿಯಾಗಿದೆ ಎಂದವರು ನುಡಿದರು.

ಬಹಿರಂಗ ಸಭೆಯನ್ನುದ್ದೇಶಿಸಿ ಸಂಘದ ರಾಜ್ಯಾಧ್ಯಕ್ಷ ಮಾರುತಿ ಮಾನ್ಪಡೆ ಮಾತನಾಡಿದರು. ಜಿಲ್ಲಾ ಸಮಿತಿಯ ಪ್ರಧಾನ ಕಾರ್ಯದರ್ಶಿ ಯಾದವ ಶೆಟ್ಟಿ ಸಮ್ಮೇಳನ ಕೈಗೊಂಡ ನಿರ್ಣಯಗಳನ್ನು ವಿವರಿಸಿದರು. ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ನೂತನ ಜಿಲ್ಲಾ ಸಮಿತಿಯ ಅಧ್ಯಕ್ಷರಾಗಿ ಆಯ್ಕೆಯಾದ ಕೃಷ್ಣಪ್ಪ ಸಾಲ್ಯಾನ್ ವಹಿಸಿದ್ದರು. ಬಾಲಕೃಷ್ಣ ಸಾಲ್ಯಾನ್ ಕಂಪ, ಸಂಜೀವ ಭಂಡಾರಿ ತೋಡ್ದಲ, ಶ್ರೀನಿವಾಸ ಆಳ್ವ ಹಾಗೂ ನೂತನ ಜಿಲ್ಲಾ ಸಮಿತಿಯ ಪದಾಧಿಕಾರಿಗಳು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸ್ವಾಗತ ಸಮಿತಿಯ ಪ್ರಧಾನ ಕಾರ್ಯದರ್ಶಿ ಸಂಜೀವ ಪಿಲಾರು ಸ್ವಾಗತಿಸಿದರು. ವಾಸುದೇವ ಉಚ್ಚಿಲ ವಂದಿಸಿದರು.

ಬಹಿರಂಗ ಸಭೆಗೂ ಮೊದಲು ಕೇರಳದ ಸಮವಸ್ತ್ರದ ಬ್ಯಾಂಡ್‌ಸೆಟ್, ಚೆಂಡೆ ಮೇಳ, ಯಕ್ಷಗಾನ ವೇಷಧಾರಿಗಳು ಇತ್ಯಾದಿ ಒಳಗೊಂಡ ಆಕರ್ಷಕ ರ್ಯಾಲಿ ಕುತ್ತಾರು ಸಮ್ಮೇಳನ ಆವರಣದಿಂದ ತೊಕ್ಕೊಟಿನ ಬಹಿರಂಗ ಸಭೆಯ ಮೈದಾನದವರೆಗೆ ಸಾಗಿ ಬಂದಿರುತ್ತದೆ.

ವಿನಾಯಕ ಬಾಳಿಗ ಹತ್ಯೆಗೆ ಒಂದು ವರ್ಷ – ಮಂಗಳೂರಿನಲ್ಲಿ ಮೆರವಣಿಗೆ:

ಆರ್‌ಟಿಐ ಕಾರ್ಯಕರ್ತ ವಿನಾಯಕ ಬಾಳಿಗಾ ಕೊಲೆಯಾಗಿ ದೀರ್ಘ ಕಾಲದ ಬಳಿಕ ಆರೋಪಿಗಳನ್ನು ಬಂಧಿಸಲಾಗಿದ್ದು, ಸಂಚುಕೋರನಾದ ಆರೋಪಿ ಸಂಗಪರಿವಾರದ ಒಳಗಿನವನಾಗಿದ್ದು ಆತ ಜಾಮೀನಿನ ಮೇಲೆ ಹೊರಗಿದ್ದಾನೆ. ಆತನ ಸಂಚಿನಿಂದಲೇ ಈಗ 10 ದಿನಗಳ ಹಿಂದೆ ಈ ಹತ್ಯೆಯ ಕೊಲೆಗಡುಕರ ಮೇಲೆ ಕಾನೂನುಕ್ರಮಕ್ಕಾಗಿ ಆಗ್ರಹಿಸುತ್ತಿರುವ ವಿಚಾರವಾದಿ ಪ್ರೊ.ನರೇಂದ್ರ ನಾಯಕರ ಮೇಲೆ ಕೊಲೆಯತ್ನದ ಸಂಚು ನಡೆದಿದೆ. ಈ ಹಿನ್ನೆಲೆಯಲ್ಲಿ ದೇಶಪ್ರೇಮಿ ಸಂಘಟನೆಗಳ ಒಕ್ಕೂಟದ ವತಿಯಿಂದ ಮಾರ್ಚ್ 21ರಂದು ಮಂಗಳೂರಿನಲ್ಲಿ ಪ್ರತಿಭಟನಾ ಮೆರವಣಿಗೆ ಮತ್ತು ಸಭೆ ನಡೆಯಿತು.

ವೆಂಕಟರಮಣ ದೇವಸ್ಥಾನದ ಹಣ ದುರುಪಯೋಗವನ್ನು ಪ್ರಶ್ನಿಸಿದುದಕ್ಕಾಗಿ ವಿನಾಯಕ ಬಾಳಿಗಾ ಕೊಲೆ ನಡೆದಿದ್ದು, ಮೆರವಣಿಗೆ ದೇವಸ್ಥಾನದಿಂದ ವಿನಾಯಕ ಬಾಳಿಗ ಅವರ ಮನೆಯವರೆಗೆ ನಡೆಯಿತು. ಬಳಿಕ ಬ್ಯಾಂಕ್‌ನೌಕರರ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಜಿಲ್ಲೆಯ ಹಾಗೂ ಹೊರಗಿನ ಗಣ್ಯರು ಮಾತನಾಡಿ, ಸಂಚು-ಕೋರರ ಬಗ್ಗೆ ಮೌನವಾಗಿರುವ ಸಂಗಪರಿವಾರ ಹಾಗೂ ತನಿಖೆಯ ಬಗ್ಗೆ ರಾಜ್ಯ ಸರಕಾರ ನಿಧಾನ ನಡೆಯನ್ನು ಖಂಡಿಸಿದರು. ಪ್ರತಿಭಟನೆಯನ್ನುದ್ದೇಶಿಸಿ ಪ್ರೊ.ನರೇಂದ್ರ ನಾಯಕ್, ಆದಿವಾಸಿ ಹಕ್ಕುಗಳ ರಾಜ್ಯ ಸಮನ್ವಯ ಸಮಿತಿಯ ಸಂಚಾಲಕ ಎಸ್. ವೈ.ಗುರುಶಾಂತ್, ಮೈಸೂರಿನ ನಿವೃತ್ತ ಪ್ರಾಧ್ಯಾಪಕ ಪ್ರೊ.ಎಚ್.ಎ.ಪಂಡಿತಾರಾಧ್ಯ, ವಿನಾಯಕ ಬಾಳಿಗ ಅವರ ಸೋದರಿ ಅನುರಾಧ, ಉಡುಪಿಯ ಮನೋವೈದ್ಯ ಡಾ.ಪಿ.ವಿ.ಭಂಡಾರಿ, ಡಿವೈಎಫ್‌ಐ ದ.ಕ.ಜಿಲ್ಲಾಧ್ಯಕ್ಷ ದಯಾನಂದ ಶೆಟ್ಟಿ, ಸಮುದಾಯ ಸಂಘಟನೆಯ ವಾಸುದೇವ ಉಚ್ಚಿಲ, ಬ್ಯಾಂಕ್ ಅಧಿಕಾರಿಗಳ ಸಂಘದ ನಿವೃತ್ತ ರಾಷ್ಟ್ರ ಸಮಿತಿ ಅಧ್ಯಕ್ಷ ಟಿ.ಆರ್.ಭಟ್ ಮಾತನಾಡಿದರು. ದಲಿತ ಸಂಘರ್ಷ ಸಮಿತಿ ಮುಖಂಡರಾದ ಎಂ.ದೇವದಾಸ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಡಿವೈಎಫ್‌ಐ ದ.ಕ.ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು.



ಹಕ್ಕುಪತ್ರ ನಿವೇಶನಗಳಿಗೆ ಆಗ್ರಹಿಸಿ ಕುಂದಾಪುರ ತಾಲೂಕಿನಲ್ಲಿ ಸಮಾವೇಶಗಳು:



ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ಕುಂದಾಪುರ ತಾಲೂಕು ಸಮಿತಿ ನೇತೃತ್ವದಲ್ಲಿ ಮನೆ ರಹಿತರಿಗೆ ಸರ್ಕಾರಿ ಸ್ಥಳ ಗುರುತಿಸಿ ಮಂಜೂರು ಮಾಡಲು ಅಲ್ಲದೆ ಸರ್ಕಾರಿ ಜಾಗದಲ್ಲಿ ವಸತಿ ಹಾಗೂ ಕೃಷಿ ಅಭಿವೃದ್ಧಿಪಡಿಸಿದವರಿಗೆ ಹಕ್ಕುಪತ್ರ ನೀಡಲು ಆಗ್ರಹಿಸಿ ಹಲವು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ನಿವೇಶನ ರಹಿತರ ಸಮಾವೇಶಗಳು ನಡೆದಿವೆ.

ಮಾರ್ಚ್ 15ರಂದು ಕೋಣಿಯಲ್ಲಿ ನಡೆದ ಸಮಾವೇಶದಲ್ಲಿ ಕೋಣಿ ಮತ್ತು ಕಂದಾವರು ಗ್ರಾಮಸ್ಥರು ಭಾಗವಹಿಸಿದ್ದರು.

ಆನಗಳ್ಳಿ ಗ್ರಾಮದಲ್ಲಿ ನಡೆದ ಸಮಾವೇಶದಲ್ಲಿ ಪ್ರಾಂತ ಕೃಷಿಕೂಲಿಕಾರರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವೆಂಕಟೇಶ ಕೋಣಿ ಮಾತನಾಡಿದರು.

ಮಾರ್ಚ್ 17 ರಂದು ಶಿರೂರು ಗ್ರಾಮದಲ್ಲಿ ನಡೆದ ಸಭೆಯಲ್ಲಿ ವೆಂಕಟೇಶ ಕೋಣಿ, ತಾಲೂಕು ಸಂಘದ ಮುಖಂಡರಾದ ದಾಸ್ ಭಂಡಾರಿ ಭಾಗವಹಿಸಿದ್ದರು.

ಮಾರ್ಚ್ 20ರಂದು ಬೈಂದೂರು ಸಿಐಟಿಯು ಕಚೇರಿಯಲ್ಲಿ ಬೈಂದೂರು ವಲಯ ಮಟ್ಟದ ನಿವೇಶನ ರಹಿತರ ಸಮಾವೇಶ ನಡೆಯಿತು. ಸಂಘದ ಅಧ್ಯಕ್ಷ ರಾಜೀವ ಪಡುಕೋಣೆ, ಮುಖಂಡರಾದ ದಾಸ್ ಭಂಡಾರಿ, ನಾಗರತ್ನ ಮೊದಲಾದವರು ಭಾಗವಹಿಸಿದ್ದರು.

ನಾಳಿನ ಕಾರ್ಯಕ್ರಮಗಳು

- **ರಾಜ್ಯ ಮಟ್ಟದ ಉದ್ಯೋಗ ಖಾತ್ರಿ ಸಮಾವೇಶ: ಏಪ್ರಿಲ್ 3,** ಬೆಂಗಳೂರು
  ಕರ್ನಾಟಕ ಪ್ರಾಂತ ರೈತ ಸಂಘ, ಇತರ ಸಂಘಟನೆಗಳ ಜತೆ ಜಂಟಿಯಾಗಿ
- ಏಪ್ರಿಲ್ 10 –23 ಜನಶಕ್ತಿ ಪ್ರಸಾರಾಂದೋಲ
- **ದಲಿತ ಹಕ್ಕುಗಳ ಸಮಿತಿಯ ರಾಜ್ಯಮಟ್ಟದ ಶಾಲೆ, ಏಪ್ರಿಲ್ 14–16,**
  ಹೊಸಪೇಟೆ (ಬಳ್ಳಾರಿ)
- **ಸಾಮಾಜಿಕ ನ್ಯಾಯ ಮತ್ತು ಸಮಾಜವಾದಿ ಕ್ರಾಂತಿ, ಏಪ್ರಿಲ್ 23**
  ದಲಿತ ಹಕ್ಕುಗಳ ಸಮಿತಿ ಇತರ ಸಂಘಟನೆಗಳ ಜತೆ
- **ಕರ್ನಾಟಕ ಪ್ರಾಂತ ರೈತ ಸಂಘ ರಾಜ್ಯ ಸಮ್ಮೇಳನ ಏಪ್ರಿಲ್ 25–27, ಹುಬ್ಬಳ್ಳಿ**

ಹುತಾತ್ಮ ದಿನಾಚರಣೆ

ಪ್ರತಿಗಾಮಿ ಶಕ್ತಿಗಳು ಕ್ರಾಂತಿಯ ದಿಕ್ಕುತಪ್ಪಿಸುವ ಕೆಲಸವನ್ನು ಮಾಡುತ್ತಿವೆ

ಅಬಿವ್ಯಕ್ತಿ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವ ಮತ್ತು ಸತ್ಯವನ್ನು ಹೇಳುವುದೇ ಅಪರಾದ ಎನ್ನುವ ಕಾಲಘಟಗಟದಲ್ಲಿ ನಾವು ದೇಶಕ್ಕಾಗಿ, ದೇಶದ ಸ್ವಾತಂತ್ರ್ಯಕ್ಕಾಗಿ ಕ್ರಾಂತಿಕಾರಿ ಮಾರ್ಗದಲ್ಲಿ ಹೋರಾಟ ಮಾಡಿ ಹುತಾತ್ಮರಾದ ಭಗತ್‌ಸಿಂಗ್, ರಾಜ್‌ಗುರು, ಸುಖ್‌ದೇವ್ ರವರುಗಳ ಹುತಾತ್ಮ ದಿನಾಚರಣೆಯನ್ನು ನಡೆಸುತ್ತಿದ್ದೇವೆ ಎಂದು ಪದವಿಪೂರ್ವ ಶಿಕ್ಷಣ ಇಲಾಖೆ ನಿವೃತ್ತ ಜಂಟಿ ನಿರ್ದೇಶಕ ಪ್ರೊ. ಕೆ.ದೊರೈರಾಜ್ ತಿಳಿಸಿದರು

ಅವರು ಭಗತ್‌ಸಿಂಗ್, ರಾಜ್‌ಗುರು, ಸುಖ್‌ದೇವ್‌ರವರ ಹುತಾತ್ಮ ದಿನಾಚರಣೆಯ ಅಂಗವಾಗಿ ನಗರದ ಅಂಬೇಡ್ಕರ್ ಭವನದಲ್ಲಿ ಎಸ್.ಎಫ್.ಐ ಮತ್ತು ಡಿ.ವೈ.ಎಫ್.ಐ ಸಂಘಟನೆಗಳು ಹಮ್ಮಿಕೊಂಡಿದ್ದ ರಕ್ತದಾನ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು. ಈ ಮಹಾನ್ ನಾಯಕರು ಜಾತಿ, ಧರ್ಮಕ್ಕಾಗಿ ಹೋರಾಟ ನಡೆಸಿದವರಲ್ಲ ಇಡೀ ದೇಶದ ಜನರ ಸ್ವಾತಂತ್ರಯಕ್ಕಾಗಿ ಹೋರಾಟ ನಡೆಸಿದ ಈ ಯುವಕರು ಜಗತ್ತಿನ ನಾಯಕರು ಎಂದು ಅವರು ಭಗತ್‌ಸಿಂಗ್‌ರವರು ಹೇಳಿದಂತೆ ಕ್ರಾಂತಿ ಎಂದರೆ ಚೈತನ್ಯ ಎಂದಿದ್ದರು ಇಂದು ನಮ್ಮ ಸಮಾಜದಲ್ಲಿ ವ್ಯವಸ್ಥೆಗೆ ಹೊಂದಿಕೊಂಡು ಹೋಗುವ ಗುಣವನ್ನು ಬಂಡವಾಳಮಾಡಿಕೊಂಡು ರಾಜಕೀಯ ಲಾಭ ಮಾಡಿಕೊಳ್ಳುವ ವ್ಯವಸ್ಥೆಯ ವಿರುದ್ದ ಬದಲಾವಣೆಗಾಗಿ ಕ್ರಾಂತಿಕಾರಿ ಹೋರಾಟ ನಡೆಸಿದ ಭಗತ್‌ಸಿಂಗ್‌ರವರ ಆದರ್ಶಗಳನ್ನು ವಿದ್ಯಾರ್ಥಿ–ಯುವಜನರು ಮೈಗೂಡಿಸಿಕೊಳ್ಳಬೇಕು ಎಂದ ಅವರು ಇಂದು ಪ್ರತಿಗಾಮಿ ಶಕ್ತಿಗಳು ಕ್ರಾಂತಿಯನ್ನು ದಿಕ್ಕುತಪ್ಪಿಸುವ ಕೆಲಸವನ್ನು ಮಾಡುತ್ತವೆ ಅಂತಹ ಶಕ್ತಿಗಳನ್ನು ಹಿಮ್ಮೆಟ್ಟಿಸಲು ಯುವಜನರು ಹೆಚ್ಚು ಹೆಚ್ಚು ಅಧ್ಯಯನ ಶೀಲರಾಗಬೇಕು ಎಂದರು.

ಜಿಲ್ಲಾ ಆಸ್ಪತ್ರೆಯ ವೈದ್ಯಾಧಿಕಾರಿ ಡಾ. ವೀಣಾ. ಎ.ಎಸ್. ಮಾತನಾಡಿ ಈ ರೀತಿಯ ಸಮಾಜಮುಖಿಯಾದ ಕೆಲಸಗಳು ಹೆಚ್ಚು ಹೆಚ್ಚು ನಡೆಯಬೇಕು, ಈ ರೀತಿಯಾಗಿ ಸಂಗ್ರಹವಾದ ರಕ್ತಗಳನ್ನು ನಾವು ಬಡಜನತೆಗೆ, ಬಾಣಂತಿಯರಿಗೆ, ನೀಡುತ್ತೇವೆ ಎಂದರು.

ಸಿಐಟಿಯು ಜಿಲ್ಲಾಧ್ಯಕ್ಷ ಸೈಯದ್‌ಮುಜೀಬ್ ಮಾತನಾಡಿ ಕ್ರಾಂತಿಕಾರಿಗಳು ಎಂದರೆ ಅಸಮಾನತೆಯ ವಿರುದ್ದ ಸಮಾನತೆಗಾಗಿ ಹೋರಾಟನಡೆಸುವವರು ಎಂದರ್ಥ. ಯಾವ ಉದ್ದೇಶಗಳನ್ನು ಇಟ್ಟುಕೊಂಡು ಭಗತ್‌ಸಿಂಗ್ ಮತ್ತು ರಾಜ್‌ಗುರು, ಸುಖ್‌ದೇವ್‌ರವರು ನೇಣುಗಂಬ ಏರಿದರೂ ಆ ಆಶಯಗಳನ್ನು ಸರ್ಕಾರಗಳು ಇಂದು ಮೂಲೆಗುಂಪುಮಾಡುತ್ತಿವೆ. ಭಗತ್‌ಸಿಂಗ್ ಪಾರ್ಲಿಮೆಂಟ್‌ನಲ್ಲಿ ಬಾಂಬ್ ಹಾಕಿ ಓಡಿಹೋಗಲಿಲ್ಲ ಬದಲಾಗಿ ನಿಮ್ಮ ನೀತಿಗಳನ್ನು ಬದಲಾಯಿಸಿ ಎಂದು ಘೋಷಣೆಗಳನ್ನು ಕೂಗುವ ಮೂಲಕ ಬಂದನಕೊಳಗಾದರು. ಇಂದು ದೇಶದಲ್ಲಿ ತಾಂಡವವಾಡುತ್ತಿರುವ ಜಾತಿ, ಧರ್ಮ, ಲಿಂಗತಾರತಮ್ಯಗಳ ವಿರುದ್ದ ವಿದ್ಯಾರ್ಥಿ–ಯುವಜನರು ಹೋರಾಟಗಳನ್ನು ನಡೆಸಬೇಕು ಎಂದರು. ಎಸ್.ಎಫ್.ಐನ ಜಿಲ್ಲಾಧ್ಯಕ್ಷ ಇ. ಶಿವಣ್ಣ ಮಾತನಾಡಿ ಸರ್ಕಾರಗಳು ವಿದ್ಯಾರ್ಥಿ–ಯುವಜನರನ್ನು ಕಡೆಗಣಿಸುತ್ತಿದ್ದು ಶಿಕ್ಷಣದ ಶುಲ್ಕಗಳನ್ನು ಹೆಚ್ಚಳಮಾಡುತ್ತಿವೆ ಈ ನೀತಿಗಳ ವಿರುದ್ದ ವಿದ್ಯಾರ್ಥಿಗಳು ಹೋರಾಟ ನಡೆಸಬೇಕು ಎಂದರು. ಡಿ.ವೈ.ಎಫ್.ಐ ನಗರಾಧ್ಯಕ್ಷ ಜಿ. ದರ್ಶನ್ ಮಾತನಾಡಿ ದೇಶದಲ್ಲಿನ ಬಡತನ ದಾರಿದ್ರ್ಯಗಳನ್ನು ಹೋಗಲಾಡಿಸಲು ಯುವಜನರು ಸಂಘಟಿತರಾಗಿ ಭಗತ್‌ಸಿಂಗ್‌ರವರ ಹಾದಿ ನಡೆಯಬೇಕು ಎಂದರು

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಡಿ.ವೈ.ಎಫ್.ಐ ಜಿಲ್ಲಾಧ್ಯಕ್ಷ ಎಸ್. ರಾಘವೇಂದ್ರ ಮಾತನಾಡಿ ಅಸಮಾನತೆಯ ವಿರುದ್ದ ಸಮಾನತೆಗಾಗಿ ಹೋರಾಟ ನಡೆಸಿದ ಭಗತ್‌ಸಿಂಗ್ ಒಂದು ಕಡೆಯಾದರೆ ಶೋಷಿತ ಜನರ ಹಕ್ಕಿಗಾಗಿ ಹೋರಾಟ ನಡೆಸಿ ಅಂಬೇಡ್ಕರ್ ಒಂದು ಕಡೆ ಇಂದು ನಮ್ಮನಾಳುತ್ತಿರುವ ಸರ್ಕಾರಗಳು ಭಗತ್‌ಸಿಂಗ್ ಮತ್ತು ಅಂಬೇಡ್ಕರ್ ಇಬ್ಬರನ್ನು ಕೇವಲ ವೋಟ್‌ಬ್ಯಾಂಕಿನ ರಾಜಕೀಯ ಮಾತ್ರ ಬಳಸಿಕೊಳ್ಳುತ್ತಿದ್ದು ಸಂವಿಧಾನದ ಯಾವ ಅಶಯಗಳನ್ನು ಈಡೇರಿಸುತ್ತಿಲ್ಲ ಎಂದ ಅವರು ಸಮಾಜವಾದಿ ರಾಷ್ಟ್ರಗಳಲ್ಲಿ ಶಿಕ್ಷಣ, ಉದ್ಯೋಗ, ಆರೋಗ್ಯ ಉಚಿತವಾಗಿ ನೀಡುತ್ತಿವೆ ನಮ್ಮ ದೇಶದ ಸಂವಿಧಾನ ಇವುಗಳನ್ನು ತಿಳಿಸಿದರೂ ಸಹ ಸರ್ಕಾರಗಳ ಇದರ ಜಾರಿಗೆ ಮುಂದಾಗಿಲ್ಲ ಎಂದ ಅವರು ಭಗತ್‌ಸಿಂಗ್ ರವರ ಆದರ್ಶಗಳನ್ನು ಮೈಗೂಡಿಸಿಕೊಂಡು ಸಮಾನತೆಯ ನಾಡನ್ನು ಕಟ್ಟುವ ಕಡೆ ಯುವಜನರು ಮುಂದಾಗಬೇಕು ಎಂದರು. ಸಮುದಾಯದ ಲಕ್ಷಣ್ ಕ್ರಾಂತಿಗೀತೆ ಹಾಡಿದರು. ಡಿ.ವೈ.ಎಫ್.ಐನ ಶರತ್‌ಕುಮಾರ್ ಸ್ವಾಗತಿಸಿ ವಂದಿಸಿದರು, ರವೀಂದ್ರ ಕಾರ್ಯಕ್ರಮ ನಿರೂಪಿಸಿದರು



ಸಮಾರಂಭದಲ್ಲಿ ಸಿಐಟಿಯು ಜಿಲ್ಲಾಕಾರ್ಯದರ್ಶಿ ಎನ್.ಕೆ. ಸುಬ್ರಮಣ್ಯ, ಕಟ್ಟಡ ಕಾರ್ಮಿಕರ ಸಮಧ ಶ್ರೀಧರ್, ರಾಮಚಂದ್ರು ಮುಂತಾದರು ಭಾಗವಹಿಸಿದ್ದರು ನಂತರ ರಕ್ತದಾನ ಮಾಡಲಾಯಿತು.

ಭಗತ್ ಸಿಂಗ್‌ರ ಸಮಾಜವಾದಿ ಆಶಯಗಳನ್ನು ಈಡೇರಿಸಲು ವಿದ್ಯಾರ್ಥಿಗಳು ಸಂಘಟಿತರಾಗಿ ಹೋರಾಟ ನಡೆಸಬೇಕು – ಪೀರು ರಾಠೋಡ

ಕ್ರಾಂತಿಕಾರಿಗಳಾದ ಹುತಾತ್ಮ ಭಗತ್ ಸಿಂಗ, ರಾಜಗುರು, ಹಾಗೂ ಸುಖದೇವ ರವರ ಸಮಾನತೆಯ ಸಮಾಜವಾದಿ ಪ್ರಜಾಪ್ರಭುತ್ವವನ್ನು ಕಟ್ಟಲು ವಿದ್ಯಾರ್ಥಿಗಳು ಎಸ್.ಎಫ್.ಐ ಸಂಘಟನೆ ಸೇರಿ ಹೋರಾಟ ನಡೆಸುವ ಮೂಲಕ ಆಶಯು ಈಡೇರಿಸಲು ಮುಂದಾಗಬೇಕು ಎಂದು ಎಸ್.ಎಫ್.ಐ ನ ಮಾಜಿ ಮುಖಂಡರಾದ ಪೀರು ರಾಠೋಡ ಹೇಳಿದರು.

ಗದಗ ನಗರದ ಸರಕಾರಿ ಪದವಿ ಕಾಲೇಜಿನಲ್ಲಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ಗದಗ ತಾಲ್ಲೂಕಾ ಸಮಿತಿ ಹಮ್ಮಿಕೊಂಡಿದ್ದ ಕ್ರಾಂತಿಕಾರಿಗಳಾದ ಹುತಾತ್ಮ ಭಗತ್ ಸಿಂಗ, ರಾಜಗುರು, ಹಾಗೂ ಸುಖದೇವ ರವರ ಹುತಾತ್ಮ ದಿನಾಚರಣೆಯ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ ಭಗತ್‌ಸಿಂಗರವರು ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮ ಪ್ರಾಣವನ್ನೆ ತ್ಯಾಗ ಮಾಡಿದವರು. ದೇಶಕ್ಕೆ ಸಮಾಜವಾದಿ ಸಿಧ್ಧಾಂತದ ಸ್ವಾತಂತ್ರ್ಯ ಸಿಗಬೇಕು ಆ ಮೂಲಕ ಎಲ್ಲರಿಗೂ ಸಮಾನ ರೀತಿಯ ಆವಕಾಶ ಸಿಗಬೇಕು ಎಂದು ಹೋರಾಟ ನಡೆಸಿದವರು. ಅವರ ಪ್ರಕಾರ ಸ್ವಾತಂತ್ರ್ಯ ಎಂದರೆ ಕೇವಲ ಯಜಮಾನರ ಬದಲಾವಣೆ ಎಂದಾದರೆ ಜನರ ಸ್ಥಿತಿ ಹಾಗೆಯೆ ಉಳಿಯುತ್ತದೆ. ಪುರಾತನ ಶೋಷಕ ವ್ಯವಸ್ಥೆ ಅಮೂಲಾಗ್ರವಾಗಿ ಬದಲಾವಣೆಯೇ ನಿಜವಾದ ಸ್ವಾತಂತ್ರ್ಯ ಎಂದುಕೊಂಡವರು. ಪ್ರಗತಿಪರ ಆಶಯಗಳನ್ನು, ಜಾತ್ಯಾತೀತ ನಿಲುವನ್ನು ಇಟ್ಟುಕೊಂಡು ರಾಷ್ಟ್ರದ ಐಕ್ಯತೆಗಾಗಿ, ವಿದ್ಯಾರ್ಥಿಗಳ ಏಳ್ಗೆಗಾಗಿ ದುಡಿಯುತ್ತಿರುವ ಏಕಮಾತ್ರ ವಿದ್ಯಾರ್ಥಿ ಸಂಘಟನೆ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ಎಂದು ಹೆಮ್ಮೆಯಿಂದ ಹೇಳಿದರು.

ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಕುಟುಂಬದಿಂದ ಬಂದ ಭಗತ್‌ಸಿಂಗ ತನ್ನ ಹನ್ನೆರಡನೇ ವಯಸ್ಸಿನಲ್ಲಿಯೇ ಶಾಲೆಯನ್ನು ತೊರೆದು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಈಡೀ ಜೀವನವನ್ನೆ ಸ್ವಾತಂತ್ರ್ಯಕ್ಕಾಗಿ ಮುಡಿಪಿಟ್ಟರು. ಆದರೆ ಈಗ ಸಿಕ್ಕಿರುವ ಸ್ವಾತಂತ್ರ್ಯ ಟಾಟಾ–ಬಿರ್ಲಾ ಅಂತಹವರಿಗೆ ಸಿಕ್ಕಿದೆ. ದೇಶದ ಜನ ಸಾಮಾನ್ಯರಿಗೆ ಅಲ್ಲ ಹಾಗಾಗಿ ತಾವೆಲ್ಲರೂ ಜನ ಸಾಮಾನ್ಯರಿಗೆ ನಿಜವಾದ ಭಗತ್‌ಸಿಂಗ್ ಆಶಯದ ಸ್ವಾತಂತ್ರಕ್ಕಾಗಿ ಹೋರಾಡ ಬೇಕು. ಆದರೆ ಇಂದು ಕೆಲವು ಕೋಮುವಾದಿ ಸಂಘಟನೆಗಳು ಹಾಗೂ ಪಕ್ಷಗಳು ಹುಸಿ ದೇಶ ಪ್ರೇಮವನ್ನು ಮೆರೆಸಿ ಈ ದೇಶದ ಜನರ ನಿಜವಾದ ದೇಶ ಪ್ರೇಮವನ್ನು ದೇಶದ್ರೋಹಕ್ಕೆ ಹೋಲಿಸುತ್ತಿರುವುದು ಖಂಡನೀಯ. ಆಡಳಿತರೂಢ ಪಕ್ಷದ ನೀತಿಯನ್ನು ವಿರೋಧಿಸಿದವರು ದೇಶದ್ರೋಹಿಗಳು, ಆಡಳಿತರೂಢ ಪಕ್ಷದ ನೀತಿಯನ್ನು ಬೆಂಬಲಿಸುವವರು ದೇಶಪ್ರೇಮಿಗಳು ಎಂದು ಸರ್ಟಿಫೀಕೇಟನ್ನು ನೀಡುವುದನ್ನು ನೋಡಿದರೆ ಮುಂದೊಂದು ದಿನ ಇವರು ಹಿಟ್ಲರನಂತೆ ವರ್ತಿಸಬಹುದು ಎಂದು ಆತಂಕ ವ್ಯಕ್ತಪಡಿಸಿದರು. ನಂತರ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ಗದಗ ಜಿಲ್ಲಾ ಸಮಿತಿ ಅಧ್ಯಕ್ಷರಾದ ಶಿವಾನಂದ ಬೋಸ್ಲೆ ಮಾತನಾಡಿ ಭಗತ್‌ಸಿಂಗ್, ರಾಜಗುರು, ಸುಖದೇವರ ಆದರ್ಶಗಳನ್ನು ಎಲ್ಲಾ ವಿದ್ಯಾರ್ಥಿಗಳನ್ನು ಮೈಗೂಡಿಸಿಕೊಂಡು ಹುಸಿ ದೇಶ ಪ್ರೇಮದ ಬಗ್ಗೆ ಪ್ರಚಾರ ಮಾಡುತ್ತಿರುವವರ ವಿರುದ್ಧ ಹೋರಾಟ ನಡೆಸಿ ಈ ದೇಶದ ನಿಜವಾದ ದೇಶ ಪ್ರೇಮ ಜನಸಾಮಾನ್ಯರ ಅಭಿವೃದ್ಧಿಯಲ್ಲಿದೆ ಎಂದು ಹೇಳಿದ

ಭಗತ್ ಸಿಂಗ ಅವರು ಕೋರ್ಟನಲ್ಲಿ ನಿಂತಾಗ ಬ್ರೀಟಿಷರು ಹೇಳಿದ ಮಾತೆನೆಂದರೆ ನೀನು ತಪ್ಪು ಮಾಡಿದ್ದನ್ನು ಒಪ್ಪಿಕೊಂಡರೆ ನಿನ್ನನ್ನು ಬಿಟ್ಟು ಬಿಡುತ್ತೆನೆ ಎಂದಾಗ ಭಗತ್‌ಸಿಂಗ ನಾನು ಯಾವುದೇ ಕಾರಣಕ್ಕೂ ತಪ್ಪು ಮಾಡಿಲ್ಲ ನಿಮ್ಮನ್ನು ದೇಶದಿಂದ ಹೊರಹಾಕಲು ಪ್ರಾಣ ತ್ಯಾಗ ಮಾಡಲು ಸಿದ್ಧ ಎಂದ ಮಹಾನ್ ನಾಯಕ ಹುತಾತ್ಮ ಭಗತ್ ಸಿಂಗ. ಆದರೆ ಇಂದು ಭಗತ್ ಸಿಂಗ ಕನಸುಗಳು ಈಡೇರುತ್ತಿಲ್ಲ. ದೇಶದ ಸ್ವಾತಂತ್ರ್ಯ ಭ್ರಷ್ಟರಿಗೆ, ಅಧಿಕಾರಿಗಳ ಕೈಯಲ್ಲಿದೆ ಎಂದು ವಿಷಾದ ವ್ಯಕ್ತಪಡಿಸಿದ ಅವರು ಇವತ್ತಿನ ರಾಜಕೀಯ ಶಿಕ್ಷಣವನ್ನು ಮಾರಾಟದ ಸರಕಾಗಿಸಿದೆ. ಹಣ ಉಳ್ಳವರಿಗೆ ಮಾತ್ರ ಶಿಕ್ಷಣ ಎಂಬ ನೀತಿ ತರುತ್ತಿವೆ, ಶಿಕ್ಷಣವನ್ನು ಖಾಸಗೀಕರಣ ಮಾಡುತ್ತಿವೆ. ಸರ್ಕಾರಿ ಶಾಲಾ–ಕಾಲೇಜು–ಹಾಸ್ಟೆಲುಗಳಿಗೆ ಮೂಲಭೂತ ಸೌಕರ್ಯ ನೀಡದೇ ಬಡ–ಮಧ್ಯಮ–ಅಲ್ಪಸಂಖ್ಯಾತ–ದಲಿತ ವಿದ್ಯಾರ್ಥಿಗಳನ್ನು ವಂಚಿಸುತ್ತಿವೆ. ಜೊತೆಗೆ ಶಿಕ್ಷಣ ಹೊಂದಿದ ಯುವಕರಿಗೆ ಉದ್ಯೋಗ ನೀಡದೇ ನಿರುದ್ಯೋಗಿಗಳನ್ನಾಗಿ ಮಾಡುತ್ತಿವೆ ಎಂದು ಆತಂಕ ವ್ಯಕ್ತಪಡಿಸಿದರು.ಜೊತೆಗೆ ಸಮಸಮಜಕ್ಕಾಗಿ ವಿದ್ಯಾರ್ಥಿಗಳು ಹೋರಾಟಕ್ಕೆ ಮಂಂದಾಗಬೇಕು ಹಾಗೂ ಅನ್ಯಾಯದ ವಿರುಧ್ಧ ಹೋರಾಟ ನಡೆಸುವ ಮೂಲಕ ನ್ಯಾಯ ಪಡೆದುಕೊಳ್ಳಲು ಕರೆ ನೀಡಿದರು.

ಭಗತ್‌ಸಿಂಗ್ ಬಾಲ್ಯದಲ್ಲಿಯೆ ಸ್ವಾತಂತ್ರ್ಯ ಹೋರಾಟ ಆರಂಭಸಿದ ಧೃವತಾರೆ


ಹಾವೇರಿ : ಭಗತ್‌ಸಿಂಗ್ ಒಬ್ಬ ಅಪ್ರತಿಮ ದೇಶ ಪ್ರೇಮಿ, ದೇಶದ ಸ್ವಾತಂತ್ರ್ಯ ಹೋರಾಟದ ಧೃವತಾರೆ ಇಂದಿನ ಯುವ ಪೀಳಿಗೆಯ ಆದರ್ಶ, ಸ್ಪೂರ್ತಿಯ ನಾಯಕ ಎಂದು ಕಾರ್ಮಿಕ ಮುಖಂಡರಾದ ನಾರಾಯಣ ಕಾಳೆ ಹೇಳಿದರು. ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಹಾವೇರಿ ಜಿಲ್ಲಾ ಸಮಿತಿಯು ನಗರದ ಟಿಎಂಎಇಎಸ್ ಕಾಲೇಜಿನಲ್ಲಿ ಆಯೋಜಿಸಿದ್ದ ಭಗತ್‌ಸಿಂಗ್ ಮತ್ತು ಮೈಲಾರ ಮಹದೇವಪ್ಪನವರ ಹುತಾತ್ಮ ದಿನಾಚರಣೆ ಅಂಗವಾಗಿ ಜಿಲ್ಲೆಯಾದ್ಯಂತ ಒಂದು ವಾರಗಳ ಕಾಲ ನಡೆಸುತ್ತಿರುವ ಬೀದಿ ನಾಟಕದ ಕಾರ್ಯಕ್ರವನ್ನು ಉದ್ಘಾಟಿಸಿ ಮಾತನಾಡಿದ ಅವರು.

ಭಗತ್‌ಸಿಂಗ್ 1919ರಲ್ಲಿ ಜಲಿಯನ್ ವಾಲಾಭಾಗನಲ್ಲಿ ಡಯರ್ ಎಂಬ ಬ್ರಿಟಿಷ್ ಸೇನಾಧಿಕಾರಿ ನೀಡಿದ ಆದೇಶ 1560 ಸುತ್ತು ಗುಂಡುಗಳ ಹಾರಿಸಿ ಕೇವಲ 10 ನಿಮಿಷದಲ್ಲಿ 1516 ಜನ ಅಸುನೀಗಿದರು ಈ ಘಟನೆ ಭಗತ್‌ಸಿಂಗ್‌ರವರಲ್ಲಿ ಬಹಳ ಪರಿಣಾಮ ಬೀರಿತು, ಈ ಘಟನೆ ನಡೆದಾಗ ಭಗತ್‌ಸಿಂಗ್ ಶಾಲಾ ಬಾಲಕ ವಯಸ್ಸು ಕೇವಲ 12 ಆಗಿ–ತ್ತು. ದೇಶದ ಸ್ವತಂತ್ರ್ಯ ಚಳುವಳಿಗೆ ತನ್ನದೆ ಆದ ಕೊಡುಗೆ ನೀಡಿದ ಭಗತ್‌ಸಿಂಗ್ ಮತ್ತು ಆತನ ಸಂಗಾತಿಗಲಾದ ರಾಜಗುರು, ಸುಖದೇವ್ ಸ್ವತಂತ್ರ ಭಾರತದ ಕನಸು ಕಂಡವರು ಹಿಂದೂಸ್ತಾನ್ ಸೋಷಿಯಲಿಸ್ಟ್ ರಿಪಬ್ಲಿಕ್ ಅಸೋಷಿಯೇಶನ್‌ನನ್ನು ಕಟ್ಟಿದ ಭಗತ್ ಸಮಾಜವಾದಿ ರಾಷ್ಟ್ರ ನಿರ್ಮಾಣದ ಕನಸು ಹೊತ್ತವನು ಎಂದು ಹೇಳಿದರು.

ನಮ್ಮ ನೆಲದ ಮೈಲಾರ ಮಹದೇವಪ್ಪ, ತಿರುಕಪ್ಪ ಮಡಿವಾಳರ, ವೀರಯ್ಯ ಹಿರೇಮಠ ಕೂಡಾ ದೇಶದ ಸ್ವಾತಂತ್ರ್ಯ ಚಳುವಳಿಯ ಒಂದು ಭಾಗವಾದವರು, ಅಹಿಂಸಾ ಮಾರ್ಗದ ಮೂಲಕ ಗಾಂಧಿಜಿಯವರ ತತ್ವದಲ್ಲಿ ನಂಬಿಕೆ ಇಟ್ಟವರು, 1943 ಎಪ್ರಿಲ್ 1 ರಂದು ಬ್ರಿಟಿಷ್ ಪೋಲಿಸ್‌ರ ಗುಂಡಿಗೆ ತಮ್ಮ ಎದೆಯನ್ನು ಒಡ್ಡಿ ಹುತಾತ್ಮರಾದ ಸಂಗಾತಿಗಳು. ಗಾಂಧಿಜಿ ಕರೆ ಕೊಟ್ಟಿದ್ದ ಚಲೇಜಾವ್ ಚಳುವಳಿ, ದಾಂಡಿ ಯಾತ್ರೆಯಲ್ಲಿ ಕರ್ನಾಟಕದ ಏಕೈಕ ಪ್ರತಿನಿಧಿಯಾಗಿ ಬಾಗವಹಿಸಿದ ಹೋರಾಟಗಾರ ಮೈಲಾರ ಮಹದೇವಪ್ಪ ದೇಶದ ಸ್ವತಂತ್ರ ಚಳುವಳಿಗೆ ತಮ್ಮ ಪ್ರಾಣ ಅರ್ಪಣೆ ಮಾಡಿದಾಗ ಅವರ ವಯಸ್ಸು ಕೇವಲ 32 ಆಗಿ–ತ್ತು. ಅಲ್ಪ ವಯಸಿನಲ್ಲಿಯೆ ಮಹಾನ್ ತ್ಯಾಗ ಮಾಡಿದ ಹುತಾತ್ಮರನ್ನು ನೆನೆಯಬೇಕು ಎಂದರು.

ಕಲಾವಿದ ಬಸವರಾಜ ಶಿಗ್ಗಾಂವಿ ಮಾತನಾಡಿದರು, ವೇದಿಕೆ ಮೇಲೆ ಕಾಲೇಜಿನ ಸಿಬ್ಬಂದಿ ವಿಜಯಕುಮಾರ, ಎಸ್‌ಎಫ್‌ಐ ಅಖಿಲ ಬಾರತ ಮುಖಂಡರಾದ ರೇಣುಕಾ ಕಹಾರ ಉಪಸ್ಥಿತರಿದ್ದರು. ●

ನಾಟಕದ ದೃಶ್ಯ







"ಸಾರ್ವಜನಿಕ ವಲಯ ಉಳಿಸಿ, ಭಾರತ ಉಳಿಸಿ" ಸಮಾವೇಶದ ಕರೆ

ಮಾರ್ಚ್ 22ರಂದು ಬೆಂಗಳೂರಿನ ಸೆಕ್ರೆಟಾ–ರಿಯಟ್ ಕ್ಲಬ್ ಸಭಾಂಗಣದಲ್ಲಿ 'ಸಾರ್ವಜನಿಕ ವಲಯ ಉಳಿಸಿ, ಭಾರತ ಉಳಿಸಿ' ಕರ್ನಾಟಕ ರಾಜ್ಯ ಸಮಾವೇಶ ನಡೆಯಿತು. ಸಾರ್ವಜನಿಕ ಉದ್ಯಮಗಳನ್ನು ಖಾಸಗೀಕರಿಸುವ ನಾಶ ಮಾಡುವ ಕೇಂದ್ರ ಸರಕಾರದ ನೀತಿಗಳ ವಿರುದ್ಧ ಪ್ರತಿಭಟನೆ ಮತ್ತು ಪ್ರತಿರೋಧ ಈಗಾಗಲೇ ಆರಂಭವಾಗಿದ್ದು ಬೆಳೆಯುತ್ತಲೇ ಇದೆ. ಜಂಟಿ ಕ್ರಿಯಾ ರಂಗದಡಿಯಲ್ಲಿ ಬೆಂಗಳೂರಿನ ವಿವಿಧ ಸಾರ್ವಜನಿಕ ಉದ್ಯಮಗಳ ಕಾರ್ಮಿಕರು 2017ರ ಜನವರಿ 28ರಂದು ಬೃಹತ್ ಸಾಮೂಹಿಕ ಮೆರವಣಿಗೆ ಮತ್ತು ಪ್ರತಿಭಟನಾ ಸಭೆ ನಡೆಸಿದ್ದಾರೆ. 2017ರ ಜನವರಿ 29ರಂದು ಅಖಿಲ ಭಾರತ ಮಟ್ಟದ ಕೇಂದ್ರ ಕಾರ್ಮಿಕ ಸಂಘಟನೆಗಳ ಜಂಟಿ ಸಮಾವೇಶ ನಡೆದಿದೆ. ಇದರ ಮುಂದುವರಿಕೆಯೇ ಮಾರ್ಚ್ 22ರಂದು ನಡೆದ ಸಮಾವೇಶ.

ಸಮಾವೇಶವನ್ನು ನಿಡುಮಾಮಿಡಿ ಮಠದ ಸ್ವಾಮಿಜಿ ಉದ್ಘಾಟಿಸಿದರು. ಸಮಾವೇಶದಲ್ಲಿ ನೂರಾರು ಸಾರ್ವಜನಿಕ ಉದ್ಯಮಗಳ ಕಾರ್ಮಿಕರಲ್ಲದೆ ಉಳಿದ ಆಸಕ್ತರೂ ಭಾಗವಹಿಸಿದ್ದರು. ಬೆಂಗಳೂರು ಸಾರ್ವಜನಿಕ ಉದ್ಯಮಗಳ ಯೂನಿಯನುಗಳ ಜಂಟಿ ಕ್ರಿಯಾ ರಂಗ (ಜೆ.ಎ.ಎಫ್) ಸಂಚಾಲಕ ಮೀನಾಕ್ಷಿಸುಂದರಂ, ಹಿರಿಯ ವಕೀಲ ಕೆ. ಸುಬ್ಬರಾವ್, ಸಿಐಟಿಯು ಉಪಾಧ್ಯಕ್ಷ ವಿ,ಜೆ,ಕೆ. ನಾಯರ್, ಎಐಟಿಯುಸಿ ಕಾರ್ಯದರ್ಶಿ ನಾಗರಾಜ್, ವಿಮಾ ನೌಕರರ ಸಂಘದ ನಾಯಕರಾದ ಎಸ್. ಕೆ.ಗೀತಾ, ಬಿ.ಎಸ್.ಎನ್.ಎಲ್. ಕಾರ್ಮಿಕರ ನಾಯಕ ಸುದರ್ಶನ್, ಸಿಪಿಐ(ಎಂ) ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿ, ಎಎಪಿ ಅಧ್ಯಕ್ಷ ಪೃಥ್ವಿ ಅವರುಗಳು ಸಮಾವೇಶದಲ್ಲಿ ಭಾಗವಹಿಸಿದ್ದರು. ಸಮಾವೇಶ ಮಂಡಿಸಲಾದ 'ಸಾರ್ವಜನಿಕ ವಲಯ ಉಳಿಸಿ, ಭಾರತ ಉಳಿಸಿ' ಘೋಷಣೆಯನ್ನು ಅಂಗೀಕರಿಸಿತು. ಘೋಷಣೆಯ ಭಾಗವಾಗಿ ಏಪ್ರಿಲ್–ಮೇ ಗಳಲ್ಲಿ ಬೆಂಗಳೂರು ಹಾಗೂ ರಾಜ್ಯದಾದ್ಯಂತ ವ್ಯಾಪಕ ಪ್ರಚಾರಾಂದೋಲನ, ಈ ವಿಷಯ ಕೇಂದ್ರೀಕರಿಸಿ ಮೇದಿನಾಚರಣೆ ಮೇ 10ರಂದು ಮುಷ್ಕರ, ಮೇ 25ರಂದು ಹರತಾಳ ಸೇರಿದಂತೆ ಹೋರಾಟದ ಕಾರ್ಯಕ್ರಮಗಳನ್ನೂ ರೂಪಿಸಿತು.

ಸಮಾವೇಶದ ಘೋಷಣೆಯನ್ನು ಈ ಕೆಳಗೆ ಇಡಿಯಾಗಿ ಕೊಡಲಾಗಿದೆ.

ಸಮಾವೇಶದ ಘೋಷಣೆ

ದಿನಾಂಕ 22.03.2017ರಂದು ಬೆಂಗಳೂರಿನಲ್ಲಿ ನಡೆದ 'ಸಾರ್ವಜನಿಕ ವಲಯ ಉಳಿಸಿ, ಭಾರತ ಉಳಿಸಿ' ಸಮಾವೇಶವು ಕರ್ನಾಟಕದ ವಿವಿಧ ಕೇಂದ್ರ ಸಾರ್ವಜನಿಕ ವಲಯದ ಉದ್ಯಮಗಳ ಕಾರ್ಮಿಕ ಸಂಘಗಳ ಪ್ರತಿನಿಧಿಗಳು ಸಂಯೋಜನಾತೀತವಾಗಿ (ಅವು ಸಂಯೋಜನೆಗೊಂಡ ಕೇಂದ್ರೀಯ ಸಂಘಟನೆಯ ಬೇಧವಿಲ್ಲದೆ) ಭಾಗವಹಿಸಿದ್ದರು. ಜಂಟಿ ಕ್ರಿಯಾ ರಂಗಗದಡಿಯಲ್ಲಿ ವಿವಿಧ ಸಾರ್ವಜನಿಕ ಉದ್ಯಮಗಳ ಕಾರ್ಮಿಕರು 2017ರ ಜನವರಿ 28ರಂದು ಕೈಗೊಂಡ ಬೃಹತ್ ಸಾಮೂಹಿಕ ಮೆರವಣಿಗೆ ಮತ್ತು ಪ್ರತಿಭಟನಾ ಸಭೆಯನ್ನು ಯಶಸ್ವಿಗೊಳಿಸಿದ್ದಕ್ಕಾಗಿ ಈ ಸಮಾವೇಶವು ಅವರೆಲ್ಲರನ್ನು ಅಭಿನಂದಿಸುತ್ತದೆ. ಅಂತೆಯೇ, 2017ರ ಜನವರಿ 29ರಂದು ಅಖಿಲ ಭಾರತ ಮಟ್ಟದ ಕೇಂದ್ರ ಕಾರ್ಮಿಕ ಸಂಘಟನೆಗಳ ಜಂಟಿ ಸಮಾವೇಶವನ್ನು ಯಶಸ್ವಿಯಾಗಿ ನಡೆಸಿದ್ದಕ್ಕಾಗಿ ಈ ಸಮಾವೇಶವು ಜಂಟಿ ಕ್ರಿಯಾ ರಂಗದ ಕಾರ್ಮಿಕ ಸಂಘಟನೆಗಳನ್ನು ಅಭಿನಂದಿಸುತ್ತದೆ. ಬೆಂಗಳೂರು ಕೇಂದ್ರೋದ್ಯಮ ಕಾರ್ಮಿಕ ವರ್ಗದ ಚಳವಳಿಯ ತಾಯ್ನೆಲವಾಗಿದ್ದು, ಕಳೆದ ಇಪ್ಪತ್ತೈದು ವರ್ಷಗಳಿಂದಲೂ ಸಾರ್ವಜನಿಕ ವಲಯವನ್ನು ಸಂರಕ್ಷಿಸುವ ಐತಿಹಾಸಿಕ ಹೋರಾಟವನ್ನು ಕೈಗೊಂಡು, ಅದನ್ನು ಮುಂದುವರಿಸುತ್ತಲೇ, ಈಗ **"ಸಾರ್ವಜನಿಕ ವಲಯ ಉಳಿಸಿ, ಭಾರತ ಉಳಿಸಿ"** ಹೋರಾಟಕ್ಕೆ ಮುನ್ನುಡಿ ಬರೆದು, ಈ ಬೀಜ ರೂಪದ ಹೋರಾಟವನ್ನು ಆರಂಭಿಸಿದ್ದನ್ನು ಈ ಸಮಾವೇಶವು ದಾಖಲಿಸುತ್ತದೆ.

ರಾಷ್ಟ್ರೀಯ ವಿಮೋಚನಾ ಸಂಗ್ರಾಮದ ಉತ್ಪನ್ನ : ನಮ್ಮ ಸಾರ್ವಜನಿಕ ವಲಯ

ರಾಷ್ಟ್ರೀಯ ವಿಮೋಚನಾ ಆಂದೋಳನದ ಭಾಗವಾಗಿ ನಮ್ಮ ದೇಶದಲ್ಲಿ ಸಾರ್ವಜನಿಕ ವಲಯದ ಪರಿಕಲ್ಪನೆ ಹುಟ್ಟಿ ಬಂದಿದೆ. 1931ರ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಕರಾಚಿ ಅಧಿವೇಶನದಲ್ಲಿ, ಇನ್ನಿತರ ವಿಚಾರಗಳೊಡನೆ, ನಮ್ಮ ದೇಶವು ಪರಕೀಯ ದಾಸ್ಯದಿಂದ ವಿಮೋಚನೆಗೊಂಡ ಬಳಿಕ, ನವಭಾರತವನ್ನು ಸಾರ್ವಜನಿಕ ವಲಯದ ಉದ್ಯಮಗಳ ಮೂಲಕ ನಿರ್ಮಿಸಬೇಕೆಂದು ನಿಶ್ಚಯಿಸಲಾಯಿತು. ಹೀಗಾಗಿ ರಾಷ್ಟ್ರೀಯ ಆರ್ಥಿಕ ಯೋಜನೆ ಮತ್ತು ಪ್ರಮುಖ ಉದ್ಯಮಗಳ ಬೀಜಗಳು ನಮ್ಮ ಸ್ವಾತಂತ್ರ್ಯ ಹೋರಾಟದ ಕುಲುಮೆಯಿಂದ ಹೊರಬಂದಿವೆ.

ಸ್ವಾತಂತ್ರ್ಯಾನಂತರ, ನಮ್ಮ ರಾಷ್ಟ್ರ ನಿರ್ಮಾಣವನ್ನು ಗಣಿಗಳಿಂದ, ಹೊಲ–ಗದ್ದೆಗಳಿಂದ ನಿರ್ಮಿಸಲಾರಂಭಿಸಿದೆವು. ನಮ್ಮ ದೇಶದ ಜನತೆಯ ರಟ್ಟೆಯ ಕಸುವಿನಿಂದ, ನಾವು ಆಣೆಕಟ್ಟುಗಳನ್ನು ನಿರ್ಮಿಸಿ ನಮ್ಮ ವಿಶಾಲ ದೇಶದ ಹೊಲಗಳಿಗೆ ನೀರುಣಿಸಿದೆವು. ದೇಶದ ಭೂಗರ್ಭವನ್ನು ಬಗೆದು ನಮ್ಮ ಜನತೆಯ ಸಮೃದ್ಧಿಗಾಗಿ ಗಣಿಗಾರಿಕೆ ಮಾಡಿದೆವು.

ಗಣಿಗಳಿಂದ ತೆಗೆದ ಖನಿಜದ ಉಕ್ಕಿನಲ್ಲಿ ಲೋಹೊದ್ಯಮವನ್ನು ನಿರ್ಮಿಸಿದೆವು. ಲೋಹೊದ್ಯಮದಿಂದ ಯಂತ್ರ ನಿರ್ಮಿತಿ ಕೈಗೊಂಡೆವು. ಯಂತ್ರೋದ್ಯಮದ ನೆಲೆಗಟ್ಟಿನ ಮೇಲೆ ಇನ್ನಿತರ ಉದ್ಯಮಗಳನ್ನು – ಎಲೆಕ್ಟ್ರಾನಿಕ್ಸ್, ವೈಮಾನಿಕ–ಅಂತರಿಕ್ಷ ಮತ್ತು ಐಟಿ ಉದ್ಯಮವನ್ನು ಕಟ್ಟಿ–ಬೆಳೆಸಿದೆವು. ನಮ್ಮ ದೇಶದ ಉದ್ದಗಲಕ್ಕೂ ರಸ್ತೆ, ಸೇತುವೆ, ಅಣೆಕಟ್ಟುಗಳನ್ನು ಕಟ್ಟಿದೆವು. ನಮ್ಮ ನಗರ – ಪಟ್ಟಣಗಳನ್ನು ನಿರ್ಮಿಸಿದೆವು. ಅವುಗಳನ್ನು ರೈಲು, ರಸ್ತೆ ಮತ್ತು ಫೋನಿನ ಮೂಲಕ ಬೆಸೆದೆವು. ನಮ್ಮ ಹಡುಗು – ನಮ್ಮದೇ ಹಡಗುಕಟ್ಟೆಗಳನ್ನು ನಿರ್ಮಿಸಿದೆವು. ನಮ್ಮ ದೇಶದ ಉದ್ಯಮಗಳಿಗೆ ಅಗತ್ಯ ವಿದ್ಯುತ್ತನ್ನು, ವಿದ್ಯುತ್ ಸ್ಥಾವರಗಳನ್ನು, ಆ ಸ್ಥಾವರಗಳ ಯಂತ್ರೋಪಕರಣಗಳೆಲ್ಲವನ್ನು ನಮ್ಮ ದೇಶದಲ್ಲೇ ನಿರ್ಮಿಸಿ ವಿದ್ಯುತ್ ಜಾಲವನ್ನು ಬೆಸೆದೆವು. ಆ ಮೂಲಕ ದೇಶದ ಅರ್ಥವ್ಯವಸ್ಥೆಯನಷ್ಟೇ ಬಲಗೊಳಿಸದೆ, ದೇಶದ ಜನತೆಯನ್ನು ಸಾಮಾಜಿಕ ನ್ಯಾಯದ ಮೂಲಕ ಸಬಲೀಕರಿಸಿದೆವು. ಒಂದೇ ಮಾತಿನಲ್ಲಿ ಹೇಳುವುದಾದರೆ, ನಮ್ಮ ಜನತೆಯು ಬೆವರಿನ ಹೊಳೆಯನ್ನು ಹರಿಸಿ, ಇಂದು ಭಾರತವನ್ನು ಕ್ಷಿಪಣಿಯುಕ್ತ ಭಾರತ, ಅಣುಶಕ್ತಿಯುಕ್ತ ಭಾರತ, ಐಟಿ ಉದ್ಯಮದ ರೂವಾರಿಯಾಗಿರುವ ಭಾರತವನ್ನು ನಿರ್ಮಿಸಿದ್ದೇವೆ. ಈ ಸಾರ್ವಜನಿಕ ವಲಯದ ಶಕ್ತಿಯಿಂದ ಭಾರತವು ವಿಶ್ವ ಮಟ್ಟದಲ್ಲಿ ಗುರುತಿಸಲೇಬಾಕಾದ ಸಶಕ್ತ ರಾಷ್ಟ್ರವಾಗಿ ಹೊರಹೊಮ್ಮಿದೆ.

ನಮ್ಮ ದೇಶದ ಪ್ರಮುಖ ಸಾರ್ವಜನಿಕ ವಲಯದ ಕಾರ್ಖಾನೆಗಳಿಗೆ ಬೆಂಗಳೂರು ತವರು ಮನೆಯಾಗಿದ್ದು ಕೇವಲ ಆಕಸ್ಮಿಕವಲ್ಲ. ರಕ್ಷಣಾ ಕ್ಷೇತ್ರವಾಗಲಿ, ಅಥವಾ ಯಾವುದೇ ಕ್ಷೇತ್ರದಲ್ಲಿ ಬೆಂಗಳೂರು ಮೊದಲ ಆಯ್ಕೆಯಾಗಲು, ಉತ್ತಮ ಹವಾಮಾನವಷ್ಟೇ ಅಲ್ಲ, ಅಥವಾ ನುರಿತ ಮಾನವ ಶಕ್ತಿಯ ಲಭ್ಯತೆಯಷ್ಟೇ ಅಲ್ಲ. ಬೆಂಗಳೂರು ನಗರವು ನಮ್ಮ ನೆರೆಯ–ಹೊರೆಯಾಗಿರುವ ಶತ್ರುರಾಷ್ಟ್ರಗಳ ಗಡಿಗಳಿಂದ ಬಹುದೂರದಲ್ಲಿದೆ. ಸಮುದ್ರ ತಟದಿಂದಲೂ ಸಾಕಷ್ಟು ದೂರ ಇದೆ. ಅಲ್ಲದೆ ಅಂದಿನ ಮೈಸೂರು ರಾಜರ ಪ್ರಗತಿಪರ ಧೋರಣೆಯಿಂದ ಭದ್ರಾವತಿಯ ಉಕ್ಕಿನ ಕಾರ್ಖಾನೆ, ಮೈಸೂರು ಕಾಗದ ಕಾರ್ಖಾನೆ, ಮೈಸೂರು ಬ್ಯಾಂಕು, ಮೈಸೂರು ಸಾಬೂನು ಕಾರ್ಖಾನೆ, ಎಮ್‌ಇಐ ಇತ್ಯಾದಿಗಳು ಭಾರತ ರತ್ನ ಸರ್ ಎಂ ವಿಶ್ವೇಶ್ವರಯ್ಯನವರ ದೂರದೃಷ್ಟಿಯಿಂದ ಸ್ಥಾಪನೆಗೊಂಡು, ದೃಢ ಬುನಾದಿ ಮತ್ತು ಸೂಕ್ತ ವಾತಾವರಣ ನಿರ್ಮಿಸಿದ್ದವು. ನಮ್ಮ ರಾಜ್ಯದ ಇಂಜಿನಿಯರಿಂಗ್ ಸಾಮರ್ಥ್ಯದ ಆಧಾರದಲ್ಲಿ ಬೆಂಗಳೂರಿನಲ್ಲಿ ಕೇಂದ್ರ ಸರ್ಕಾರವು ಎಚ್‌ಎಎಲ್, ಬಿಇಎಲ್, ಬೆಮೆಲ್, ಐಟಿಐ, ಎಚ್‌ಎಂಟಿ, ಬಿಎಚ್‌ಇಎಲ್ ಸಂಸ್ಥೆಗಳನ್ನು ಇಲ್ಲಿ ಸ್ಥಾಪಿಸಿತು. ಆದರೆ ಇತ್ತೀಚೆಗೆ ಬಂದ ಕೆಲವು ಸರ್ಕಾರಗಳ ಕೆಟ್ಟ ನೀತಿಗಳ ಪರಿಣಾಮವಾಗಿ ಎಚ್‌ಎಂಟಿ ಕೈಗಡಿಯಾರ ಕಾರ್ಖಾನೆಯುನ್ನು ಮುಚ್ಚಲಾಗಿದೆ. ಖಾಸಗಿ ರಂಗದ ರಿಲಾಯನ್ಸ್, ಏರ್‌ಸೆಲ್, ಏರ್‌ಟೆಲ್, ಐಡಿಯಾ ಸಂಸ್ಥೆಗಳಿಗೆ ಅನುಕೂಲವಾಗಲು ಐಟಿಐ ಮತ್ತು ಬಿಎಸ್‌ಎನ್‌ಎಲ್‌ಗಳನ್ನು ಸರ್ಕಾರವು ಉದ್ದೇಶಪೂರ್ವಕವಾಗಿ ರೋಗಗ್ರಸ್ಥವಾಗಿಸಿದೆ.

ಕೇಂದ್ರ ಆಯವ್ಯಯಕ್ಕೆ ಸಾರ್ವಜನಿಕ ವಲಯದ ಅಪಾರ ಕೊಡುಗೆ

ಭಾರತ ಸರ್ಕಾರದ ವರಮಾನಕ್ಕೆ ಸಾರ್ವಜನಿಕ ಉದ್ಯಮಗಳ ವಾರ್ಷಿಕ ಕೊಡುಗೆ ಅಪಾರವಾಗಿದೆ. 2014–15ನೇ ಸಾಲಿನಲ್ಲಿ 235 ಸಾರ್ವಜನಿಕ ಉದ್ಯಮಗಳಿಂದ ಕೇಂದ್ರ ಸರ್ಕಾರಕ್ಕೆ ಲಭ್ಯವಾದ ಹಣಕಾಸಿನ ಸಂಪನ್ಮೂಲಗಳು ಈ ಕೆಳಕಂಡಂತಿದೆ:

2014–15ನೇ ವರ್ಷದಲ್ಲಿ ಭಾರತ ಸರ್ಕಾರ–ಕ್ಕೆ ಸಾರ್ವಜನಿಕ ಉದ್ಯಮಗಳಿಂದ 1,69,199 ಕೋಟಿರೂಗಳ ವರಮಾನ ಲಭಿಸಿದೆ ಎಂಬುದು

ಪುಟ 10 ಕ್ಕೆ

ಆದಾಯದ ವಿವರ	ವರಮಾನ ಕೋಟಿ ರೂಗಳು
ತೆರೆಗೆ ಮುನ್ನಾ ಲಾಭ	1,50,232
ಭಾರತ ಸರ್ಕಾರಕ್ಕೆ ಜಮೆಯಾದ ತೆರಿಗೆ	47,229
ಸಾಲಕ್ಕೆ ನೀಡಲಾದ ಬಡ್ಡಿ	56,801
ಭಾರತ ಸರ್ಕಾರಕ್ಕೆ ನೀಡಲಾದ ಲಾಭಾಂಶ	56,527
ಲಾಭಾಂಶಕ್ಕೆ ಸಂದಾಯವಾದ ತೆರಿಗೆ	8,642

ಸಮಾವೇಶ ಅಂಗೀಕರಿಸಿದ ಹೋರಾಟದ ಕಾರ್ಯಕ್ರಮಗಳು

- ಏಪ್ರಿಲ್–ಮೇ ಗಳಲ್ಲಿ ವ್ಯಾಪಕ ಪ್ರಚಾರಾಂದೋಲನ
- ಈ ವಿಷಯ ಕೇಂದ್ರೀಕರಿಸಿ ಮೇ ದಿನಾಚರಣೆ
- ಮೇ 10ರಂದು ಮುಷ್ಕರ,
- ಮೇ 25ರಂದು ಹರತಾಳ

ಮುಖ್ಯಮಂತ್ರಿಯಾಗಿ ಆದಿತ್ಯನಾಥ ಪ್ರತಿಷ್ಠಾಪನೆ ಹಿಂದೂರಾಷ್ಟ್ರ ನಿರ್ಮಾಣ ಹೂಟದ ಭಾಗ



ಸಂವಿಧಾನ ಮೂಲ ತತ್ವಗಳಗೇ ಬಹಿರಂಗವಾಗಿ ಸವಾಲೆಸೆದಿರುವ ಒಬ್ಬ ವ್ಯಕ್ತಿಯನ್ನು ಭಾರತದ ಅತಿ ದೊಡ್ಡ ರಾಜ್ಯದ ಮುಖ್ಯಮಂತ್ರಿ ಸ್ಥಾನದಲ್ಲಿ ಅವರು ಪ್ರತಿಷ್ಠಾಪಿಸಿರುವುದು ವಿಧಾನ ಸಭಾ ಚುನಾವಣೆಗಳ ವಿಜಯದ ನಂತರ ಮೋದಿಯವರು ಹೇಳಿದ 'ನವಭಾರತ'ದ ಸ್ವರೂಪ ಹಾಗೂ ರೂಪುರೇಷೆ ಏನು ಎಂಬುದನ್ನು ಸ್ಪಷ್ಟಗೊಳಿಸಿದೆ.

ಪ್ರಕಾಶ್ ಕಾರಟ್

ಗೋರಖ್‌ಪುರ ಲೋಕಸಭಾ ಕ್ಷೇತ್ರದ ಸಂಸತ್ ಸದಸ್ಯರೂ ಆಗಿರುವ ಗೋರಖ್‌ನಾಥ ದೇವಾಲಯದ ಮಹಂತ ಯೋಗಿ ಆದಿತ್ಯನಾಥರನ್ನು ಉತ್ತರ ಪ್ರದೇಶದ ಮುಖ್ಯಮಂತ್ರಿಯಾಗಿ ಆಯ್ಕೆ ಮಾಡಿರುವುದು ಬಿಜೆಪಿ-ಆರ್‌ಎಸ್‌ಎಸ್ ಕೂಟವು ಹಿಂದೂ ಕ್ರೋಡೀಕರಣವನ್ನು ತನ್ನ ಮುಂದಿನ ರಾಜಕೀಯ ತಂತ್ರದ ಆಧಾರವನ್ನಾಗಿ ಅನುಸರಿಸಲು ಬಯಸುತ್ತಿದೆ ಎನ್ನುವುದರ ಸ್ಪಷ್ಟ ಸೂಚನೆಯಾಗಿದೆ.

1998ರಲ್ಲಿ ಗೋರಖ್‌ಪುರ ಕ್ಷೇತ್ರದಿಂದ ಲೋಕಸಭಾ ಸದಸ್ಯನಾಗಿ ಆಯ್ಕೆ ಆದಾಗಿನಿಂದಲೂ ಮುಸ್ಲಿಂ-ದ್ವೇಷಕ್ಕೆ ಹಾಗೂ ಗೋರಖ್‌ಪುರ ಮತ್ತು ಪೂರ್ವ ಭಾಗದಲ್ಲಿನ ನೆರೆಯ ಜಿಲ್ಲೆಗಳಲ್ಲಿ ಕೋಮುವಾದಿ ಹಿಂಸಾಚಾರಕ್ಕೆ ನೇರ ಪ್ರಚೋದನೆ ನೀಡುವುದಕ್ಕೆ ಈ ಆದಿತ್ಯನಾಥ ಕುಖ್ಯಾತರಾಗಿದ್ದವರು. ಆತ ಆರಂಭಿಸಿದ ಹಿಂದೂ ಯುವ ವಾಹಿನಿ ಒಂದು ಸಶಸ್ತ್ರ ಕಾವಲುಗಾರಿಕೆ ಗುಂಪಲ್ಲದೆ ಬೇರೇನೂ ಅಲ್ಲ. ಇದುವರೆಗಿನ ಅವರ ರಾಜಕೀಯ ಪ್ರಚಾರ ಮತ್ತು ಚುನಾವಣಾ ಪ್ರಚಾರಗಳಲ್ಲಿ ಇದ್ದ ಗುರಿ ಒಂದೇ ಒಂದು-ಮುಸ್ಲಿಂ ಭರ್ತ್ಸನೆ.

ಆದಿತ್ಯನಾಥ ವಿರುದ್ಧ ಅನೇಕ ಕ್ರಿಮಿನಲ್ ಪ್ರಕರಣಗಳು ಬಾಕಿಯಿವೆ. ಕೊಲೆ ಯತ್ನ, ದೊಂಬಿ, ಮಾರಕ ಶಸ್ತ್ರಾಸ್ತ್ರಗಳನ್ನು ಹೊಂದಿರುವುದು, ಎರಡು ಧಾರ್ಮಿಕ ಗುಂಪುಗಳ ನಡುವೆ ವೈಷಮ್ಯ ಪ್ರಚೋದಿಸುವುದು, ಪೂಜಾ ಸ್ಥಳಗಳನ್ನು ವಿರೂಪಗೊಳಿಸುವುದು ಇವೇ ಮೊದಲಾದ ಪ್ರಕರಣಗಳಲ್ಲಿ ಅವರು ಆರೋಪಿ. ಯಾವುದೇ ಚಿಕ್ಕಪುಟ್ಟ ಜಗಳಗಳನ್ನೂ ಕೋಮುಗಲಭೆಗಳನ್ನಾಗಿ ಪರಿವರ್ತಿಸುವುದು ಆದಿತ್ಯನಾಥ ನಾಯಕತ್ವದ ಈ ಯುವ ವಾಹಿನಿಯ ವಿಶೇಷತೆ.

ಇಂಥ ಒಬ್ಬ ವ್ಯಕ್ತಿಯನ್ನು ಉತ್ತರ ಪ್ರದೇಶದ ಮುಖ್ಯಮಂತ್ರಿಯನ್ನಾಗಿ ಮಾಡುವುದು ಒಂದು ಉದ್ದೇಶಪೂರ್ವಕ ನಿರ್ಧಾರವಷ್ಟೇ ಆಗಿರುತ್ತದೆ. ರಾಜ್ಯದಲ್ಲಿ ಬಿಜೆಪಿ ಗಳಿಸಿರುವ ಭಾರೀ ಜಯದ ಹಿನ್ನೆಲೆಯ ಸನ್ನಿವೇಶಗಳನ್ನು ಅವಲೋಕಿಸಿದರೆ ಇದು ಸ್ಪಷ್ಟವಾಗುತ್ತದೆ. ಇದು ಮೋದಿ-ಷಾ ಜೋಡಿಯ ಗೆಲುವು ಎಂದು ಬಿಂಬಿಸಲಾಗುತ್ತಿದೆ: ನರೇಂದ್ರ ಮೋದಿಯವರ ಸಾಮೂಹಿಕ ಆಕರ್ಷಣೆ ಮತ್ತು ಅಮಿತ್ ಷಾರ ಸಂಘಟನಾ ಕೌಶಲಕ್ಕೆ ಸಿಕ್ಕ ಜಯವಿದೆಂದು ಹೇಳಲಾಗುತ್ತಿದೆ. ಆದಿತ್ಯನಾಥರನ್ನು ಬಿಜೆಪಿ ಮುಖ್ಯಮಂತ್ರಿ ಅಭ್ಯರ್ಥಿ ಎಂದು ಬಿಂಬಿಸಲಾಗಿರಲಿಲ್ಲ. ಬಿಜೆಪಿ ಮತ್ತದರ ಕೂಟಕ್ಕೆ ಮೂರನೇ ನಾಲ್ಕರಷ್ಟು ಬಹುಮತ ಸಿಕ್ಕಿರುವುದರಿಂದ ತಮಗೆ ಬೇಕಾದ ಯಾರನ್ನೋ ಮುಖ್ಯಮಂತ್ರಿಯನ್ನಾಗಿ ಮಾಡಬೇಕೆಂದು ಯಾವುದೇ ನಾಯಕ ಅಥವಾ ಯಾವುದೇ ಲಾಬಿಯಿಂದ ಯಾವುದೇ ಒತ್ತಡ ಬರಲು ಸಾಧ್ಯವೇ ಇರಲಿಲ್ಲ.



ವ್ಯಂಗ್ಯಚಿತ್ರ: ಗೋಕುಲ್, ಡೆಕ್ಕನ್ ಕ್ರಾನಿಕಲ್

ಹೀಗಾಗಿ, ಆರ್‌ಎಸ್‌ಎಸ್ ಸಮ್ಮತಿಯೊಂದಿಗೆ ನರೇಂದ್ರ ಮೋದಿ ಮತ್ತು ಅಮಿತ್ ಷಾ ವಿವಾದಾತ್ಮಕ ಆದಿತ್ಯನಾಥರನ್ನು ದೇಶದ ಅತಿ ದೊಡ್ಡ ಹಾಗೂ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ರಾಜ್ಯದ ಮುಖ್ಯಮಂತ್ರಿಯನ್ನಾಗಿ ನಿರ್ಧರಿಸಲಾಯಿತು ಎಂಬ ತೀರ್ಮಾನಕ್ಕೇ ಬರಬೇಕಾಗುತ್ತದೆ.

ಆದಿತ್ಯನಾಥರ ಇಮೇಜ್‌ಗೆ ಮರುರೂಪ ಕೊಡುವಲ್ಲಿ ಮುಖ್ಯವಾಹಿನಿಯ ಮಾಧ್ಯಮದ ಒಂದು ವಿಭಾಗ ನಿರತವಾಗಿದೆ. ಆತನ ಮಠದಲ್ಲಿ ವಿವಿಧ ಹುದ್ದೆಗಳಲ್ಲಿ ಹೇಗೆ ಮುಸ್ಲಿಮರನ್ನು ನೇಮಿಸಿಕೊಳ್ಳಲಾಗಿದೆ, ಸಂಸದನ ನೆಲೆಯಲ್ಲಿ ತನ್ನನ್ನು ಸಂಪರ್ಕಿಸಿದ ಮುಸ್ಲಿಮರಿಗೆ ಆದಿತ್ಯನಾಥ ಹೇಗೆ ಕೆಲಸ ಕಾರ್ಯ ಮಾಡಿಕೊಟ್ಟರು ಎಂಬಿತ್ಯಾದಿ ಸುದ್ದಿಗಳು ಮಾಧ್ಯಮಗಳಲ್ಲಿ ಬರಲು ಶುರುವಾಗಿದೆ.

ಹಿಂದುತ್ವ ವ್ಯವಸ್ಥೆ ಸಾಧಿಸಬಯಸುವುದು ಇದನ್ನೇ, ಅಂದರೆ, ಹಿಂದೂರಾಷ್ಟ್ರದ ಏಕಾಧಿಪತ್ಯವನ್ನು ಒಪ್ಪಿದರೆ ಮಾತ್ರವೇ ಮುಸ್ಲಿಮರು ಭಾರತದಲ್ಲಿ ವಾಸಿಸಬಹುದು ಎಂದು. ಕಳೆದ ಎರಡು ದಶಕಗಳಲ್ಲಿ ಗೋರಖ್‌ಪುರದಲ್ಲಿ ಮಂಡಿಯೂರಿಕೊಂಡು ಇರುವಂತೆ ಬೆದರಿಸಲ್ಪಟ್ಟಿರುವ ಮುಸ್ಲಿಮರು ತಮ್ಮ ಕೆಲಸ ನೆರವೇರಿಸಿಕೊಳ್ಳಲು ಹಿಂದೂ ಮಹಾರಾಜನ ನಿಷ್ಠ ಪ್ರಜೆಗಳಾಗಿ ಬಿನ್ನಹ ಮಾಡಿಕೊಳ್ಳಲು ಅವಕಾಶ ನೀಡಲಾಗುವುದು!



ವ್ಯಂಗ್ಯಚಿತ್ರ: ಅದ್ವರ್ಯು, ಟೈಂಸ್ ಆಫ್ ಇಂಡಿಯ

ಆರ್‌ಎಸ್‌ಎಸ್ ಮತ್ತು ನರೇಂದ್ರ ಮೋದಿ ಹಿಂದೂರಾಷ್ಟ್ರ ಸ್ಥಾಪನೆಯ ತಮ್ಮ ಆಟದಲ್ಲಿ ಇದುವರೆಗಿನ ಅತ್ಯಂತ ಧಾರ್ಷ್ಟ್ಯದ ಹೆಜ್ಜೆ ಇಟ್ಟಿದ್ದಾರೆ. ಸಂವಿಧಾನ ಮೂಲ ತತ್ವಗಳಿಗೇ ಬಹಿರಂಗವಾಗಿ ಸವಾಲೆಸೆದಿರುವ ಒಬ್ಬ ವ್ಯಕ್ತಿಯನ್ನು ಭಾರತದ ಅತಿ ದೊಡ್ಡ ರಾಜ್ಯದ ಮುಖ್ಯಮಂತ್ರಿ ಸ್ಥಾನದಲ್ಲಿ ಅವರು ಪ್ರತಿಷ್ಠಾಪಿಸಿದ್ದಾರೆ.

ವಿಧಾನಸಭೆ ಚುನಾವಣೆಗಳ ವಿಜಯೋತ್ಸವ ಆಚರಣೆಗೆ ದೆಹಲಿಯ ಬಿಜೆಪಿ ಕೇಂದ್ರ ಕಚೇರಿಯಲ್ಲಿ ನಡೆದ ಸಭೆಯಲ್ಲಿ ನರೇಂದ್ರ ಮೋದಿ ಒಂದು 'ನವ ಭಾರತ' ನಿರ್ಮಾಣದ ಮಾತನ್ನಾಡಿದರು. ಆ 'ನವ ಭಾರತ'ದ ಸ್ವರೂಪ ಹಾಗೂ ರೂಪುರೇಷೆ ಏನಿದ್ದೀತೆಂಬುದನ್ನು ಆದಿತ್ಯನಾಥರ ಹೊಸ ಜವಾಬ್ದಾರಿ ಸ್ಪಷ್ಟಗೊಳಿಸಿದೆ. **ಅನು: ವಿಶ್ವ**

ಆರೆಸ್ಸೆಸ್ ಕೇಂದ್ರದಲ್ಲೇ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ದಾಳಿಗೆ ತಕ್ಕ ಪ್ರತ್ಯುತ್ತರ

ನಾಗಪುರದ ರಾಷ್ಟ್ರಸಂತ ತುಕ್ಡೋಜಿ ಮಹಾರಾಜ್ ನಾಗಪುರ ವಿಶ್ವವಿದ್ಯಾಲಯದ ಡಾ.ಅಂಬೇಡ್ಕರ್ ಅಧ್ಯಯನ ಕೇಂದ್ರ ಪ್ರತಿವರ್ಷ ವಿಚಾರ ಸಂಕಿರಣಗಳನ್ನು ನಡೆಸುತ್ತದೆ. ಈ ವರ್ಷ ಮಾರ್ಚ್18-19ರಂದು 'ಪ್ರಜಾಪ್ರಭುತ್ವದ ಅವನತಿ-ಸವಾಲುಗಳು ಮತ್ತು ಪರಿಹಾರಗಳು' ಎಂಬ ವಿಷಯದ ಮೇಲೆ ವಿಚಾರ ಸಂಕಿರಣ ಏರ್ಪಡಿಸಲು ನಿರ್ಧರಿಸಲಾಯಿತು. ಸೀತಾರಾಮ್ ಯೆಚುರಿಯವರು ಇದನ್ನು ಉದ್ಘಾಟಿಸುತ್ತಾರೆ ಎಂದೂ ನಿರ್ಧರಿಸಲಾಯಿತು. ಆಹ್ವಾನ ಪತ್ರಿಕೆಗಳನ್ನು ಮುದ್ರಿಸಲಾಯಿತು, ಪತ್ರಿಕೆಗಳಿಗೂ ತಿಳಿಸಲಾಯಿತು. ಒಂದು ತಿಂಗಳ ಹಿಂದೆ ಯೆಚುರಿಯವರಿಗೆ ವಿಶ್ವವಿದ್ಯಾಲಯ ವಿಮಾನ ಟಿಕೆಟುಗಳನ್ನೂ ಕಳಿಸಿತು.

ಆದರೆ ಇದ್ದಕ್ಕಿದ್ದಂತೆ ಮಾರ್ಚ್ 14ರಂದು ವಿವಿಯ ಉಪಕುಲಪತಿ ಡಾ.ಎಸ್.ಪಿ.ಕಾಣೆಯವರು ವಿಚಾರ ಸಂಕಿರಣವನ್ನು ಮುಂದೂಡಲಾಗಿದೆ ಎಂದು ಪ್ರಕಟಿಸಿದರು. ಅದಕ್ಕೆ ಕಾರಣವೇನೂ ಕೊಡಲಿಲ್ಲ. ಉಪಕುಲಪತಿಗಳ ಈ ಪ್ರಕಟಣೆಗೆ ಪ್ರಗತಿಶೀಲ ಶಕ್ತಿಗಳು ಮತ್ತು ಅಂಬೇಡ್ಕರ್‌ವಾದಿ ಪ್ರಾಧ್ಯಾಪಕರುಗಳು ತೀಕ್ಷ್ಣವಾಗಿ ಪ್ರತಿಕ್ರಿಯಿಸಿದರು. ಮಾಧ್ಯಮಗಳು ಉಪಕುಲಪತಿಗಳನ್ನು ಸಂಪರ್ಕಿಸಿದಾಗ ಇದಕ್ಕೆ ಸರಿಯಾದ ಅನುಮತಿ ಪಡೆಯಲಾಗಿರಲಿಲ್ಲ, ಆಡಳಿತ ನಿಯಮಾವಳಿಗಳನ್ನು ಉಲ್ಲಂಘಿಸಿ ಇದನ್ನು ಸಂಘಟಿಸಲಾಗಿತ್ತು ಎಂದು ಅವರು ಉತ್ತರಿಸಿದರು. ಇದು ನಿಜವಾಗಿರಲಿಲ್ಲ, ಏಕೆಂದರೆ ವಿವಿಯ ಪದವಿದಾನ ಸಭಾಂಗಣವನ್ನು ಕೊಡಲಾಗಿತ್ತು ಮತ್ತು ಸ್ವತಃ ಉಪಕುಲಪತಿಗಳೇ ಉದ್ಘಾಟನಾ ಅಧಿವೇಶನದ ಅಧ್ಯಕ್ಷತೆ ವಹಿಸಬೇಕಾಗಿತ್ತು.

ಪ್ರಖ್ಯಾತ ದಲಿತ ಸಾಹಿತಿ ಡಾ.ಯಶವಂತ ಮನೋಹರ್ ಮತ್ತಿತರ ಪ್ರಗತಿಪರರು ಇದ್ದ ನಿಯೋಗ ಉಪಕುಲಪತಿಗಳನ್ನು ಭೇಟಿ ಮಾಡಿತು. ನಂತರ ಉಪಕುಲಪತಿಗಳು ಮಾಧ್ಯಮಗಳಿಗೆ ನೀಡಿದ ಕಾರಣ ಎಂದರೆ ಸೀತಾರಾಮ್ ಯೆಚುರಿಯವರ ಭೇಟಿ ನಗರದಲ್ಲಿ ಕಾನೂನು ವ್ಯವಸ್ಥೆಯ ಸಮಸ್ಯೆ ಉಂಟುಮಾಡುತ್ತದೆ, ಗಲಭೆ ಉಂಟು ಮಾಡುತ್ತದೆ ಎಂದು ಕಾರ್ಯಕ್ರವನ್ನು ಮುಂದೂಡಲಾಗಿದೆ ಎಂದು.

ಉಪಕುಲಪತಿಗಳ ಈ ಹೇಳಿಕೆಯಿಂದ ಆಕ್ರೋಶಗೊಂಡ ಪ್ರಗತಿಪರರು ಮತ್ತು ಪ್ರಜಾಪ್ರಭುತ್ವವಾದಿಗಳು ಅದೇ ದಿನ ಅದೇ ವಿಷಯದಲ್ಲಿ ನಾಗಪುರದಲ್ಲಿ ಕಾರ್ಯಕ್ರಮ ನಡೆಸಿಯೇ ತೀರಬೇಕು ಎಂದು ನಿರ್ಧರಿಸಿದರು. ಏಕೆಂದರೆ ಆರೆಸ್ಸೆಸ್/ ಬಿಜೆಪಿಯ ಒತ್ತಡದಿಂದಲೇ ಉಪಕುಲಪತಿಗಳು ಅದನ್ನು ಮುಂದೂಡಿದ್ದಾರೆ ಎಂಬ ಬಗ್ಗೆ ಯಾರಿಗೂ ಸಂದೇಹವಿರಲಿಲ್ಲ.

ಡಾ. ಬಾಬಾಸಾಹೇಬ್ ಅಂಬೇಡ್ಕರ್ ಕಾಲೇಜಿನ ಪ್ರಿನ್ಸಿಪಾಲರು ಅಂಬೇಡ್ಕರ್ ಅವರು ತಮ್ಮ ಲಕ್ಷಾಂತರ ಅನುಯಾಯಿಗಳೊಂದಿಗೆ ಬೌದ್ಧ ಧರ್ಮದ ದೀಕ್ಷೆ ತಗೊಂಡ ಚಾರಿತ್ರಿಕ ಮೈದಾನ ದೀಕ್ಷಾಭೂಮಿಯ ಸಮೀಪವೇ ಇರುವ ತಮ್ಮ ಕಾಲೇಜಿನ ಸಭಾಂಗಣವನ್ನು ಕಾರ್ಯಕ್ರಮಕ್ಕೆ ಒದಗಿಸಿದರು. ಇದು ಮಹಾರಾಷ್ಟ್ರದಾದ್ಯಂತ ಮಾತ್ರವಲ್ಲ ದೇಶದಾದ್ಯಂತವೂ ದೊಡ್ಡ ಸುದ್ದಿಯಾಯಿತು.


ಮಾರ್ಚ್ 18ರಂದು ನಗರದ ಪ್ರಗತಿಪರ ಶಕ್ತಿಗಳು ಯೆಚುರಿಯವರನ್ನು ಬರಮಾಡಿಕೊಂಡು ವಿಚಾರ ಸಂಕಿರಣವನ್ನು ನಡೆಸುವ ವರೆಗೆ ದಿನವಿಡೀ ವ್ಯಾಪಿಸಿದ ಕಾರ್ಯಕ್ರಗಳನ್ನು ಹಮ್ಮಿಕೊಂಡರು.

ಯೆಚುರಿಯವರು ಬರಬೇಕಾಗಿದ್ದ ವಿಮಾನ ಒಂದು ಗಂಟೆ ತಡವಾಗಿದ್ದರೂ **ಎಡಪಕ್ಷಗಳು, ರಿಪಬ್ಲಿಕನ್ ಪಕ್ಷದ ಎಲ್ಲ ಗುಂಪುಗಳು, ಕಾಂಗ್ರೆಸ್, ಆಮ್ ಆದ್ಮಿ ಪಕ್ಷ ಮುಂತಾದವುಗಳ ನೂರಾರು ಕಾರ್ಯಕರ್ತರು ವಿಮಾನ ನಿಲ್ದಾಣದಲ್ಲಿ ಕಾದಿದ್ದು ಯೆಚುರಿಯವರು ವಿಮಾನದಿಂದ ಇಳಿಯುತ್ತಿದ್ದಂತೆಯೇ ಲಾಲ್ ಸಲಾಮ್ ಮತ್ತು ಜೈಭೀಮ್ ಘೋಷಣೆಗಳೊಂದಿಗೆ ಅವರಿಗೆ ಭವ್ಯ ಸ್ವಾಗತ ನೀಡಿದರು. ಅವರನ್ನು 500ಕ್ಕೂ ಹೆಚ್ಚು ಮೋಟಾರು ಸೈಕಲ್‌ಗಳು ಮತ್ತು ಕಾರುಗಳಿದ್ದ ಮೆರವಣಿಗೆಯಲ್ಲಿ ಕಾರ್ಯಕ್ರಮದ ಸ್ಥಳದ ವರೆಗೂ ಕರೆದೊಯ್ಯರು.** ಮಾರ್ಗಮಧ್ಯದಲ್ಲಿ ಮಹಾತ್ಮ ಗಾಂಧಿ ಪ್ರತಿಮೆಗೆ ಮತ್ತು ನಂತರ ಸಂವಿಧಾನ ಚೌಕ್‌ದಲ್ಲಿ ಬಾಬಾಸಾಹೇಬರ ಪ್ರತಿಮೆಗೆ, ಮುಂದೆ ವಿಶ್ವ ವಿದ್ಯಾಲಯ ಆವರಣದಲ್ಲಿ ವಿದರ್ಭ ಪ್ರದೇಶದ ಪ್ರಖ್ಯಾತ ಸಾಮಾಜಿಕ ಸುಧಾರಕ ಡಾ.ಪಂಜಾಬ್‌ರಾವ್ ದೇಶಮುಖ್ ಪ್ರತಿಮೆಗೆ ಯೆಚುರಿಯವರಿಂದ ಮಾಲಾರ್ಪಣೆಯ ಕಾರ್ಯಕ್ರಮವನ್ನೂ ಏರ್ಪಡಿಸಲಾಗಿತ್ತು.

ಮೆರವಣಿಗೆ ದೀಕ್ಷಾಭೂಮಿ ತಲುಪಿದಾಗ ಅಲ್ಲಿ ಯೆಚುರಿಯವರು ನಮನ ಸಲ್ಲಿಸಿ ವಿಚಾರ ಸಂಕಿರಣ ನಡೆಯಲಿದ್ದ ಸಭಾಂಗಣ ತಲುಪಿದಾಗ ಮಾಧ್ಯಮಗಳ ದಂಡು ಅವರನ್ನು ಕಾದಿತ್ತು.

ವಿಚಾರ ಸಂಕಿರಣದ ಸಭಾಂಗಣ ಕಿಕ್ಕಿರಿದು ತುಂಬಿತ್ತು. ಜನ ಹೊರಗೆ ಮತ್ತು ಕಾಲೇಜು ಕಟ್ಟಡದ ಎಲ್ಲ ಅಂತಸ್ತುಗಳಲ್ಲೂ ನೆರೆದಿದ್ದರು. ಅವರಿಗಾಗಿ ಪ್ರತ್ಯೇಕ ಸ್ಕ್ರೀನುಗಳನ್ನೂ ಹಾಕಲಾಯಿತು.

ಕಾಲೇಜಿನ ಪ್ರಿನ್ಸಿಪಾಲ್ ಡಾ. ಪಿ.ಸಿ.ಪವಾರ್ ಅಧ್ಯಕ್ಷತೆ ವಹಿಸಿದರು. ಐತಿಹಾಸಿಕ ದೀಕ್ಷಾಭೂಮಿಯ ಬಳಿ ಉಪನ್ಯಾಸ ಕೊಡುವ ಅವಕಾಶ ತನಗೊಂದು ಗೌರವದ ಸಂಗತಿ ಎಂದು ಭಾಷಣ ಆರಂಭಿಸಿದ ಯೆಚುರಿ ಸಂವಿಧಾನದ ಮೂರು ಮೂಲತತ್ವಗಳಾದ ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತ್ವಕ್ಕೆ ಬೆದರಿಕೆ ಬಂದಿದೆ, ಈ ತತ್ವಗಳನ್ನು ಅರ್ಥಮಾಡಿಕೊಂಡು, ಸ್ವೀಕರಿಸಿ ಅಂಗೀಕರಿಸದಿದ್ದರೆ ಭಾರತದಲ್ಲಿ ಪ್ರಜಾಪ್ರಭುತ್ವಕ್ಕೆ ಬೆದರಿಕೆ ಹೆಚ್ಚುತ್ತಲೇ ಹೋಗುತ್ತದೆ ಎಂದರು. ಸಂವಿಧಾನದ ಆಶಯಗಳ ಬಗ್ಗೆ ಮಾತಾಡಿದರು. ಈಗ ಸಮಾನತೆ ಹಿಂದೆಂದಿಗಿಂತಲೂ ಹೆಚ್ಚಿರುವ ಸಂಗತಿಯತ್ತ ಗಮನ ಸೆಳೆದರು. ಅಸಮಾನತೆ ಇಂದು ಅತಿ ದೊಡ್ಡ ಸವಾಲು, ಯುವಜನರು ಇದರ ವಿರುದ್ಧ ಐಕ್ಯತೆಯಿಂದ ಹೋರಾಡಬೇಕು, ಭಾರತದಲ್ಲಿ ಪ್ರಜಾಪ್ರಭುತ್ವ ಸಾಯುವುದಿಲ್ಲ ಎಂಬ ಆಶಾಭಾವನೆಯನ್ನೂ ಅವರು ವ್ಯಕ್ತಪಡಿಸಿದರು.



ಅಂತಿಮವಾಗಿ ವಿಧಾನಸಭಾ ಚುನಾವಣೆಗಳ ನಂತರದ ಸನ್ನಿವೇಶವನ್ನು ಪ್ರಸ್ತಾಪಿಸುತ್ತ ಯೆಚುರಿ ಯೋಗಿ ಆದಿತ್ಯನಾಥರನ್ನು ಮುಖ್ಯಮಂತ್ರಿಯಾಗಿ ಪ್ರತಿಷ್ಠಾಪಿಸಿರುವುದು ಅಪಾಯಕಾರಿ ಸಂಕೇತ, ಇದನ್ನು ಎದುರಿಸಲು ಎಡ, ಜನವಾದಿ ಮತ್ತು ಜಾತ್ಯತೀತ ಶಕ್ತಿಗಳ ಒಂದು ಐಕ್ಯ ಹೋರಾಟ ಮುಂಬರುವ ದಿನಗಳಲ್ಲಿ ದೇಶಾದ್ಯಂತ ಮೂಡಿಬರುತ್ತದೆ ಎಂಬ ವಿಶ್ವಾಸವನ್ನು ವ್ಯಕ್ತಪಡಿಸಿದರು.

ಆರೆಸ್ಸೆಸ್‌ನ ಕೇಂದ್ರದಲ್ಲಿ ಅದರ ಕುಮ್ಮಕ್ಕಿನಿಂದ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ದಾಳಿ, ಅದಕ್ಕೆ ಪ್ರಗತಿಪರ ಪ್ರಜಾಪ್ರಭುತ್ವವಾದಿ ಶಕ್ತಿಗಳ ಪ್ರತ್ಯುತ್ತರವಾಗಿ ಯಶಸ್ವಿಯಾಗಿ ನಡೆದ ಈ ಕಾರ್ಯಕ್ರಮ ಇಂತಹ ವಿಶ್ವಾಸವನ್ನು ಬಲಗೊಳಿಸಿದೆ.

ಲಾಲ್ ಸಲಾಂ ! ಅಂಗನವಾಡಿ ಅವ್ವಂದಿರೇ !!
ಸೆಮಿ ಫೈನಲ್ ಗೆದ್ದಿದ್ದೀರಿ ! ಏಪ್ರಿಲ್ 10ರ ಫೈನಲ್ ಗೆಲ್ಲುತ್ತೀರಿ !!

ನಾಲ್ಕು ದಿನಗಳ ಕಾಲ ನಡೆದ ಕರ್ನಾಟಕ ಅಂಗನವಾಡಿ ಕಾರ್ಮಿಕರ 4 ದಿನಗಳ ಚಾರಿತ್ರಿಕ ಹೋರಾಟ ಕೊನೆಗೊಂಡಿದೆ. ಹಲವು ರೀತಿಗಳಲ್ಲಿ ಚಾರಿತ್ರಿಕವಾದ ಹೋರಾಟ ಇದು. ಈ ಹೋರಾಟದ ಪ್ರಮುಖ ವಿಷಯಗಳು, ಪ್ರಮುಖ ಹಂತಗಳ ಘಟನಾವಳಿ, ಇದಕ್ಕೆ ಹರಿದು ಬಂದ ಅಗಾಧ ಬೆಂಬಲದ ಒಂದು ಚಿತ್ರಣ ಇದೆ ಇಲ್ಲಿ. ಹೌದು! ಅಂಗನವಾಡಿ ಕಾರ್ಮಿಕರ ಬೇಡಿಕೆಗೆ ಮುಖ್ಯಮಂತ್ರಿಗಳ ಆಶ್ವಾಸನೆ ಸಿಕ್ಕಿದೆ. ಆದರೆ ನಾಲ್ಕು ದಿನಗಳ ಕಾಲ ನಡೆದ ರೀತಿ, ಹೋರಾಟ ಬೀರಿದ ಪರಿಣಾಮದ ಹಿನ್ನೆಲೆಯಲ್ಲಿ ಸರಕಾರ ಎಂದಿನಂತೆ ಕೊಟ್ಟ ಆಶ್ವಾಸನೆಯಿಂದ ಹಿಂದೆ ಸರಿಯುವುದು ಸುಲಭವಲ್ಲ. ಹಾಗೊಂದು ಬಾರಿ ಸರಿದರೆ ಮುಖ್ಯಮಂತ್ರಿಗಳ ಮನೆ ಎದುರೇ ಹೋರಾಟ ಮಾಡುತ್ತೇವೆ ಎಂಬ ಅವರ ಎಚ್ಚರಿಕೆ ಬರಿಯ ಬೆದರಿಕೆಯಲ್ಲ ಎಂಬ ಅನುಭವವಂತೂ ಮುಖ್ಯಮಂತ್ರಿಗಳಿಗೆ ಆಗಿದೆ. ಈ ಧೀರೋದಾತ್ತ ಹೋರಾಟಕ್ಕೆ ಅಂಗನವಾಡಿ ಕಾರ್ಮಿಕರಿಗೊಂದು ಲಾಲ್ ಸಲಾಂ! ನೀವು ಸೆಮಿ ಫೈನಲ್ ಗೆದ್ದಿದ್ದೀರಿ. ಏಪ್ರಿಲ್ 10ರ ಫೈನಲ್ ಗೆಲ್ಲುತ್ತೀರಿ ಎಂಬ ಭರವಸೆ ನಮಗಿದೆ.





ಘಟನಾವಳಿ

ದಿನ–1 (ಮಾರ್ಚ್ 20)

- ರಾಜ್ಯದ ಮೂಲೆಮೂಲೆಗಳಿಂದ ಬಂದ 20 ಸಾವಿರಕ್ಕೂ ಹೆಚ್ಚು ಅಂಗನವಾಡಿ ಕಾರ್ಮಿಕರು ಬೆಳಿಗ್ಗೆ ಸಿಟಿ ರೈಲ್ವೇ ನಿಲ್ದಾಣದಲ್ಲಿ
- ಸುಮಾರು 11 ಗಂಟೆಗೆ ಸಿಟಿ ರೈಲ್ವೇ ನಿಲ್ದಾಣದಿಂದ ವಿಧಾನಸೌಧದತ್ತ ಮೆರವಣಿಗೆ ಆರಂಭ
- ಶೇಷಾದ್ರಿ ರಸ್ತೆಯಲ್ಲಿ ಮಹಾರಾಣಿ ಕಾಲೇಜಿಗೆ ಬರುತ್ತಿದ್ದಂತೆ ಪೋಲಿಸರಿಂದ ತಡೆ
- ರಸ್ತೆಯ ಮೇಲೆ ಧರಣಿ ಕೂತ ಕಾರ್ಮಿಕರು, ರಸ್ತೆ ಬಂದ್
- ಸ್ಥಳಕ್ಕೆ ಧಾವಿಸಿ ಬಂದ ಪ್ರಿನ್ಸಿಪಲ್ ಸೆಕ್ರೆಟರಿ ಮತ್ತು ಮಹಿಳಾ–ಮಕ್ಕಳ ಇಲಾಖೆಯ ಡೈರೆಕ್ಟರ್,
- ರಸ್ತೆ ತೆರವು ಮಾಡಿ ಬೇರೆ ಕಡೆ ಧರಣಿ ಕೂರುವಂತೆ ಹಾಗೂ ಬೇಡಿಕೆಗಳಿಗೆ ಸ್ಪಂದಿಸುವ ಆಶ್ವಾಸನೆ
- ಬೇಡಿಕೆ ಈಡೇರುವವರೆಗೆ ಹೋಗಲ್ಲ ಅಂತ ಪಟ್ಟು ಹಿಡಿದ ಕಾರ್ಮಿಕರು, ನಾಯಕರು
- ಮಧ್ಯಾಹ್ನ ಮಂತ್ರಿ ಉಮಾಶ್ರೀ, ಪ್ರಿನ್ಸಿಪಲ್ ಸೆಕ್ರೆಟರಿ ಮತ್ತು ಮಹಿಳಾ–ಮಕ್ಕಳ ಇಲಾಖೆಯ ಡೈರೆಕ್ಟರ್ ಅವರುಗಳಿಂದ ರಸ್ತೆ ತೆರವು ಮಾಡುವಂತೆ ಮನವಿ, ಮುಖ್ಯಮಂತ್ರಿ ಅವರ ಜತೆ ಸಭೆ ಏರ್ಪಡಿಸುವ ಭರವಸೆ
- ಮುಖ್ಯಮಂತ್ರಿ ಜತೆ ನಾಯಕರ ಸಭೆಗೆ ಪ್ರಯತ್ನ ವಿಫಲ
- ಇಡೀ ದಿನ ಸುಡು ಬಿಸಿಲು, ಹಸಿವು, ಬಾಯಾರಿಕೆ, ಬಳಲಿಕೆಯಿಂದ ಬೆಂಡಾದರೂ ಘೋಷಣೆ, ಹಾಡು, ನಾಯಕರ ಭಾಷಣಗಳಿಂದ ಸ್ಥೈರ್ಯದಿಂದ ಇದ್ದ ಸಾವಿರಾರು ಕಾರ್ಮಿಕರು
- ಹಲವು ಕಾರ್ಮಿಕರು ಅಸ್ವಸ್ಥ, ಆಸ್ಪತ್ರೆಗೆ
- ರಸ್ತೆಯ ಮೇಲೆ ಅಹೋರಾತ್ರಿ ಧರಣಿ ಮುಂದುವರೆಸಲು ಕಾರ್ಮಿಕರ, ನಾಯಕರ ನಿರ್ಧಾರ
- ಸಾರ್ವಜನಿಕರಿಗೆ ತೊಂದರೆಯಾಗದಂತೆ ಮತ್ತು ತುರ್ತು ಅಗತ್ಯಗಳಿಗೆ ಒಂದು ವಾಹನ ಹೋಗುವಷ್ಟು ರಸ್ತೆ ತೆರವು
- ರಸ್ತೆಯ ಮೇಲೆ ಸಾವಿರಾರು ಮಹಿಳೆಯರು, ಮಕ್ಕಳು ಮಲಗಿದ ಹೃದಯ ವಿದ್ರಾವಕ ದೃಶ್ಯ

ದಿನ–2 (ಮಾರ್ಚ್ 21)

- ಪತ್ರಿಕೆ, ಟಿವಿ ಗಳಲ್ಲಿ ಅಂಗನವಾಡಿ ಕಾರ್ಮಿಕರು ಧರಣಿಗೆ ವ್ಯಾಪಕ ಸುದ್ದಿ, ಚರ್ಚೆ
- ಜೆಡಿ(ಎಸ್), ಬಿಜೆಪಿ ನಾಯಕರ ಭೇಟಿ
- ನಿಡುಮಾಮಿಡಿ ಸ್ವಾಮಿಜಿ ಮತ್ತು ಡಾ. ಕೆ. ಮರುಳಸಿದ್ದಪ್ಪ ಅವರುಗಳಿಂದ ಹೋರಾಟಕ್ಕೆ ಬೆಂಬಲ
- ಅವರ ಮಧ್ಯಸ್ಥಿಕೆಯಲ್ಲಿ ಮುಖ್ಯಮಂತ್ರಿಗಳ ಜತೆ ಚರ್ಚೆ
- ಕಾರ್ಮಿಕರ ಹೋರಾಟಕ್ಕೆ ವ್ಯಕ್ತಿಗಳ, ಸಂಘಟನೆಗಳ ಸೌಹಾರ್ದ ಬೆಂಬಲ
- ವಿಧಾನ ಸಭೆಯಲ್ಲಿ ಅಂಗನವಾಡಿ ಕಾರ್ಮಿಕರ ಪ್ರತಿಧ್ವನಿ
- ಬಿಜೆಪಿ ಸದಸ್ಯರು ಮತ್ತು ಮುಖ್ಯಮಂತ್ರಿ ನಡುವೆ ಬಿಸಿ ಬಿಸಿ ವಾಗ್ವಾದ
- ಟಿವಿ ವಾಹಿನಿಗಳಲ್ಲಿ ದಿನವಿಡೀ ವ್ಯಾಪಕ ಹೋರಾಟದ ಸುದ್ದಿ, ಚರ್ಚೆ
- ಮುಖ್ಯಮಂತ್ರಿ ಜತೆ ಕಾರ್ಮಿಕ ನಾಯಕರ ಚರ್ಚೆ
- ಉಪಚುನಾವಣೆಯ ಸಂದರ್ಭದ ಆಚಾರಸಂಹಿತೆ ಮತ್ತು ಬಜೆಟ್ ಅಧಿವೇಶನ ನಡೆಯುತ್ತಿರುವುದರಿಂದ ಘೋಷಣೆ ಸಾಧ್ಯವಿಲ್ಲ, ಏಪ್ರಿಲ್ 19ಕ್ಕೆ ಸಭೆಗೆ ಪತ್ರ : ಮುಖ್ಯಮಂತ್ರಿ
- ಅಂಗನವಾಡಿ ಕಾರ್ಮಿಕರು, ನಾಯಕರಿಂದ ಮುಖ್ಯಮಂತ್ರಿ ಪ್ರಸ್ತಾವ ತಿರಸ್ಕಾರ, ಅಹೋರಾತ್ರಿ ಧರಣಿ ಮುಂದುವರೆಸಲು ನಿರ್ಧಾರ
- ಹಲವು ಕಾರ್ಮಿಕರು ಅಸ್ವಸ್ಥ, ಆಸ್ಪತ್ರೆಗೆ
- ನೀರು, ಆಹಾರ ಪೂರೈಕೆ, ಶೌಚಾಲಯದ ಲಭ್ಯತೆಯಲ್ಲಿ ಸುಧಾರಣೆ
- ಆದರೂ ಹಸಿವು, ಬಾಯಾರಿಕೆ, ಬಳಲಿಕೆಯೊಂದಿಗೆ ಎರಡನೇ ದಿನವೂ ರಸ್ತೆಯಲ್ಲೇ ಮಲಗಿದ ಅಂಗನವಾಡಿ ಅವ್ವಂದಿರು

ದಿನ–3 (ಮಾರ್ಚ್ 22)

- ಪತ್ರಿಕೆ, ಟಿವಿ ಗಳಲ್ಲಿ ಧರಣಿನಿರತರ ಬವಣೆಗಳ ಬಗ್ಗೆ ಇನ್ನೂ ಹೆಚ್ಚಿನ ವ್ಯಾಪಕ ಸುದ್ದಿ, ಚರ್ಚೆ
- ಹಲವು ಸಾಹಿತಿ, ಕಲಾವಿದರ ಭೇಟಿ ಬೆಂಬಲ ಸೂಚನೆ
- ಹೋರಾಟಕ್ಕೆ ಇನ್ನೂ ಹೆಚ್ಚಿದ ವ್ಯಕ್ತಿಗಳ, ಸಂಘಟನೆಗಳ ಸೌಹಾರ್ದ ಬೆಂಬಲ
- ಟಿವಿ ವಾಹಿನಿಗಳಲ್ಲಿ ದಿನವಿಡೀ ವ್ಯಾಪಕ ಹೋರಾಟದ ಸುದ್ದಿ, ಚರ್ಚೆ
- ಅಂಗನವಾಡಿ ಕಾರ್ಮಿಕರ ಐಕ್ಯತೆ ಮುರಿಯುವ ಸರಕಾರದ ಪ್ರಯತ್ನ
- ಹೋರಾಟ ಸೇರಲು ಬೆಂಗಳೂರಿಗೆ ಹೊರಟ ಕಾರ್ಮಿಕರಿಗೆ ಪೋಲಿಸರ ತಡೆ
- ಎಐಟಿಯುಸಿ ಅಂಗನವಾಡಿ ಯೂನಿಯನ್ ಹೋರಾಟಕ್ಕೆ ಸೇರ್ಪಡೆ
- ಕೆಲವು 'ಸ್ವತಂತ್ರ' ಅಂಗನವಾಡಿ ಯೂನಿಯನ್ ನಾಯಕರು ಎಂದು ಹೇಳಿಕೊಳ್ಳುವವರ ಜತೆ ಮುಖ್ಯಮಂತ್ರಿ ಚರ್ಚೆ
- ರಾಜಕೀಯ ಪಕ್ಷಗಳು, ಸರಕಾರದ ಆಹಾರ, ವ್ಯವಸ್ಥೆ ಸ್ವೀಕರಿಸಲು ಹೋರಾಟನಿರತರ ನಿರಾಕರಣೆ
- ಹೋರಾಟದಲ್ಲಿ ಭಾಗವಹಿಸಿಯೇ ಇಲ್ಲದ ಈ ನಾಯಕರಿಂದ "ಹೋರಾಟ ಹಿಂತೆಗೆತದ" ಹಾಸ್ಯಾಸ್ಪದ ಘೋಷಣೆ
- ಅಂಗನವಾಡಿ ಕಾರ್ಮಿಕರು, ನಾಯಕರಿಂದ ಅಹೋರಾತ್ರಿ ಧರಣಿ ಮುಂದುವರೆಸಲು ನಿರ್ಧಾರ
- ಮೂರನೇ ದಿನವೂ ರಸ್ತೆಯಲ್ಲೇ ಮಲಗಿದ ಅಂಗನವಾಡಿ ಅವ್ವಂದಿರು

ದಿನ–4 (ಮಾರ್ಚ್ 23)

- ಪತ್ರಿಕೆ, ಟಿವಿ ಗಳಲ್ಲಿ ಧರಣಿನಿರತರ ಬವಣೆಗಳ ಬಗ್ಗೆ ಇನ್ನೂ ಹೆಚ್ಚಿನ ವ್ಯಾಪಕ ಸುದ್ದಿ, ಚರ್ಚೆ
- ಸರಕಾರದ ನಿರ್ಲಕ್ಷ್ಯ ಅಮಾನವೀಯ ಧೋರಣೆಗೆ ವ್ಯಾಪಕ ಖಂಡನೆ
- ಇನ್ನೂ ಹೆಚ್ಚಿನ ಸಾಹಿತಿ, ಕಲಾವಿದರ ಭೇಟಿ ಬೆಂಬಲ ಸೂಚನೆ
- ಹೋರಾಟಕ್ಕೆ ಇನ್ನೂ ಹೆಚ್ಚಿದ ವ್ಯಕ್ತಿಗಳ, ಸಂಘಟನೆಗಳ ಸೌಹಾರ್ದ ಬೆಂಬಲ
- ಅಂಗನವಾಡಿ, ಸಿಐಟಿಯು ಕಾರ್ಮಿಕ ನಾಯಕರು ಮತ್ತು ಸಿಪಿಐ(ಎಂ) ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿ ಅವರಿಗೆ ಮಾತುಕತೆಗೆ ಮುಖ್ಯಮಂತ್ರಿ ಆಹ್ವಾನ
- ಏಪ್ರಿಲ್ 10ಕ್ಕೆ ಸಭೆ ದಿನಾಂಕ ಬದಲಾವಣೆ, ವೇತನ ಹೆಚ್ಚಳ ಸೇರಿದಂತೆ ಬೇಡಿಕೆಗಳ ಗರಿಷ್ಠ ಪ್ರಮಾಣದ ಈಡೇರಿಕೆಗೆ ಮುಖ್ಯಮಂತ್ರಿ ಭರವಸೆ
- ಮುಖ್ಯಮಂತ್ರಿ ಭರವಸೆ ಮೇಲೆ ಹೋರಾಟ ಹಿಂಪಡೆಯಲು ಕಾರ್ಮಿಕರು, ನಾಯಕರ ನಿರ್ಧಾರ
- ಆಶ್ವಾಸನೆಗೆ ತಪ್ಪಿದರೆ ಮುಖ್ಯಮಂತ್ರಿ ಮನೆ ಎದುರೇ ಹೋರಾಟದ ಎಚ್ಚರಿಕೆ
- ರಾತ್ರಿ 8 ಗಂಟೆ ಹೊತ್ತಿಗೆ ಅಂಗನವಾಡಿ ಕಾರ್ಮಿಕರ ಚಾರಿತ್ರಿಕ ಹೋರಾಟ ಅಂತ್ಯ

ಬಯಲಾದ ಬಿಜೆಪಿ

ಅಂಗನವಾಡಿ ಸಮರಶೀಲ ಹೋರಾಟ ಕಂಡು ಇದು ವಿಜಯಿಯಾದರೆ ಅದರ ಕ್ರೆಡಿಟ್ ಬಾಚಿಕೊಳ್ಳಲು ಬಿಜೆಪಿ ಮುಂದಾಯಿತು. ಹೋರಾಟದ ಮೊದಲ ದಿನ ವಿಧಾನಸಭೆಯಲ್ಲಿ ಗದ್ದಲ ಎಬ್ಬಿಸಿತು. ಆದರೆ ಸದನದ ಒಳಗೂ, ಪತ್ರಿಕೆ–ಟಿವಿ ಚರ್ಚೆಗಳಲ್ಲೂ ಅದರ ಹೂರಣ ಬೇಗ ಬಯಲಾಯಿತು. ಬಿಜೆಪಿಯ ಕೂಗಾಟವನ್ನು ಅವರದೇ ಪಕ್ಷದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಕೇಂದ್ರ ಸಚಿವೆ ಬಯಲು ಮಾಡಿದ್ದಾರೆ. "ಅಂಗನವಾಡಿ ಕಾರ್ಯಕರ್ತೆಯರು ಕಾರ್ಮಿಕರೇ ಅಲ್ಲ. ಅವರ ಗೌರವಧನ ಹೆಚ್ಚು ಮಾಡುವ ಪ್ರಶ್ನೆಯೇ ಇಲ್ಲ" ಎಂದಿದ್ದಾರೆ.

"ಅಂಗನವಾಡಿ ಅವ್ವಂದಿರ ಬಗ್ಗೆ ಕಣ್ಣೀರು" ಸುರಿಸಿದ ಬಿಜೆಪಿ, ಅವರಿಗೆ ಕೊಟ್ಟ ಒದೆಗಳು ಇವು:

- ಮೋದಿ ಸರಕಾರ ಯುಪಿಎ ಸರಕಾರ ನಿಗದಿ ಮಾಡಿದ್ದ ರೂ. 3000 ಕಳೆದ 3 ಬಜೆಟ್ ಗಳಲ್ಲಿ ಒಂದು ಪೈಸಾನೂ ಹೆಚ್ಚಿಸಿಲ್ಲ
- 2014ರಲ್ಲಿ ನಡೆದ ತ್ರಿಪಕ್ಷೀಯ ಇಂಡಿಯನ್ ಲೇಬರ್ ಕಾಂಗ್ರೆಸ್ ಅಂಗನವಾಡಿ ಕಾರ್ಯಕರ್ತೆಯರನ್ನು 'ಕಾರ್ಮಿಕ'ರೆಂದು ಪರಿಗಣಿಸಿ ಕನಿಷ್ಠ ವೇತನ ಸೇರಿದಂತೆ ಎಲ್ಲಾ ಕಾರ್ಮಿಕ ಕಾನೂನುಗಳು ಅನ್ವಯವಾಗಬೇಕು ಎಂಬ ಶಿಫಾರಸನ್ನು ಜಾರಿ ಮಾಡಿಲ್ಲ.
- ಗಾಯದ ಮೇಲೆ ಬರೆ ಎಳೆಯುವಂತೆ ಮೋದಿ ಸರಕಾರ ಕಾರ್ಯಕರ್ತೆಯರ ಗೌರವಧನದಲ್ಲಿ ಕೇಂದ್ರ ಕೊಡುತ್ತಿದ್ದ ಶೇ. 90 ಅನುದಾನವನ್ನು ಶೇ. 60ಕ್ಕೆ ಇಳಿಸಿದೆ. ಉಳಿದ ಹೊರೆಯನ್ನು ರಾಜ್ಯಕ್ಕೆ ದಾಟಿಸಿದೆ.
- ಈಗ ಪ್ರಸ್ತಾವಿತ ರೂ. 7000 ದಲ್ಲಿ ಕೇಂದ್ರದ ಪಾಲು ರೂ. 1800 ಮಾತ್ರ ಅಂದರೆ ಶೇ. 90ರಿಂದ ಶೇ. 25.7ಕ್ಕೆ ಇಳಿದಿದೆ
- ಬಿಜೆಪಿ ರಾಜ್ಯ ಆಡಳಿತ ನಡೆಸಿದ ಅವಧಿಯಲ್ಲಿ ಸಹ ಒಂದು ಬಾರಿ ಮಾತ್ರ ರೂ. 500 ಏರಿಸಿತ್ತು







ಅಂಗನವಾಡಿ ಅಕ್ಕಂದಿರೊಡನೆ ನಾವು

ಅಂಗನವಾಡಿ ಅಕ್ಕಂದಿರ ಹೋರಾಟಕ್ಕೆ ಸಾಹಿತಿ, ಬುದ್ಧಿಜೀವಿ, ಕಲಾವಿದರ, ಸಹೃದಯರ ಬೆಂಬಲ ಹರಿದು ಬಂತು. ಹಲವರು – ರಹಮತ್ ತರಿಕೆರೆ, ಬಾನು ಮುಷ್ತಾಕ್, ಬಿ ಸುರೇಶ, ಚೆನ್ನಸ್ವಾಮಿ ಸೋಸಲೆ, ಡಿ ಉಮಾಪತಿ, ಹೆಚ್.ಎಸ್. ಅನುಪಮ, ಪೀರ್ ಬಾಶಾ, ಅರುಣ್ ಜೋಳದಕೂಡ್ಲಿಗಿ, ಕಿರಣ್ ಗಾಜನೂರು ಮುಂತಾದವರು ಸಂದೇಶ ಕಳಿಸಿದರು. ಇನ್ನೂ ಹಲವರು – ಸಾಲುಮರದ ತಿಮ್ಮಕ್ಕ, ಪ್ರಗತಿಪರ ನಟ ನಟ ಚೇತನ್, ಬಿಗ್ ಬಾಸ್ ಪ್ರಥಮ್, ಕಿರಿಕ್ ಕೀರ್ತಿ, ನಟಿ ಪ್ರಿಯಾ ಹಾಸನ್ ಹೋರಾಟದ ಸ್ಥಳಕ್ಕೆ ಬಂದು ಬೆಂಬಲ ವ್ಯಕ್ತಪಡಿಸಿದರು. ಅದರ ಕೆಲವು ಝಲಕ್ ಗಳು.



ಯಾಕೊ ಏನೊ, ಸಾವಿರಾರು ಅಂಗನವಾಡಿ ಕಾರ್ಯಕರ್ತೆಯರು ಬೆಂಗಳೂರಿನ ಬೀದಿಯಲ್ಲಿ ಮಲಗಿದ ದೃಶ್ಯವು ಯುದ್ಧಗ್ರಸ್ತ ರಣರಂಗವನ್ನೂ ನೆನಪಿಸಿತು; ಅದರೊಳಗೆ ಒಬ್ಬ ತಾಯಿ ಬೆರಳೆತ್ತಿ ಏನನ್ನೊ ಹೇಳುತ್ತ ಅಳುತ್ತಿರುವ ದೃಶ್ಯವು ಬದುಕುಳಿಯುವುದಕ್ಕೆ ಮಾಡುತ್ತಿರುವ ಕೊನೆಯ ಸೆಣಸಾಟದಂತೆ ಭಾಸವಾಯಿತು. ಸಾವಿರಾರು ಮಕ್ಕಳನ್ನು ಉಣಿಸಿ ಬೆಳೆಸುವ ತಾಯಂದಿರು, ತಾವೇ ಮಕ್ಕಳಾಗಿ ಅಳುವುದು ಕಂಡು ಮನಸ್ಸು ಕದಡಿದೆ. ಪ್ರಭುತ್ವ ಇವರ ಬೇಡಿಕೆಗಳಿಗೆ ಕೂಡಲೇ ಇದಕ್ಕೆ ಸ್ಪಂದಿಸಬೇಕು. ಸಂವೇದನೆ ಇರುವ ಸರ್ಕಾರ ಇಂತಹ ತಬ್ಬಲಿಗಳಿಗೆ ಮಿಡಿಯದೆ ಇನ್ನಾರಿಗೆ ಮಿಡಿಯಬೇಕು? ಈ ತಾಯಂದಿರ ಹೋರಾಟಕ್ಕೆ ಜಯಸಿಕ್ಕಿಯೇ ಅವರು ಊರಿಗೆ ಮರಳುವಂತಾಗಲಿ. ಅವರ ಜತೆಗೆ ನಾನಿರುವೆ.

~ ಡಾ.ರಹಮತ್ ತರೀಕೆರೆ,
ಪ್ರಾಧ್ಯಾಪಕರು, ಕನ್ನಡ ವಿಶ್ವವಿದ್ಯಾಲಯ ಹಂಪಿ

"ಮನೆಯೇ ಮೊದಲ ಪಾಠ ಶಾಲೆ..ಜನನಿ ತಾನೆ ಮೊದಲ ಗುರುವು.. ಜನನಿಯಿಂದ ಪಾಠ ಕಲಿತ ಜನರು ಧನ್ಯರು..." ಪದ್ಯ ಓದಿದ್ದೆವು ಶಾಲೆಯಲ್ಲಿ....ಅಂಗನವಾಡಿ ತಾಯಂದಿರು ಈ ಪದ್ಯ ನೆನಪಿಸಿದರು. ತಾಯಿ ಒಡಲು ಉರಿಯಬಾರದು....

– ಡಿ.ಉಮಾಪತಿ,
ಹಿರಿಯ ಪತ್ರಕರ್ತರು

ಇಂದು ತಮ್ಮ ಕಾನೂನಾತ್ಮಕ ವೇತನದ ಹಕ್ಕುಗಳಿಗಾಗಿ ಬೆಂಗಳೂರಿನ ಬೀದಿಯಲ್ಲಿ ನಿಂತು, ಮಳೆ, ಬಿಸಿಲೆನ್ನದೆ ಹೋರಾಡುತ್ತಿರುವ ಅಂಗನವಾಡಿ ತಾಯಂದಿರು, ಅವರ ಬೇಡಿಕೆಯ ಜೊತೆ ಜೊತೆಗೆ ಆಳದಲ್ಲಿ ಮಹಿಳೆಯರನ್ನು ದ್ವಿತೀಯ ದರ್ಜೆ ಪ್ರಜೆಗಳಾಗಿ ನೋಡುವ ನಮ್ಮ ಸಂಪ್ರದಾಯಿಕ ವ್ಯವಸ್ತೆ ರೂಢಿಸಿಕೊಂಡು ಬಂದ ಧೋರಣೆಯನ್ನು ಪ್ರಶ್ನಿಸುತ್ತಿದ್ದಾರೆ ಅನ್ನಿಸುತ್ತಿದೆ.

ಇನ್ನಾದರೂ ಪ್ರಭುತ್ವ ಎಚ್ಚೆತ್ತುಕೊಂಡು ತೊಡಕುಗಳನ್ನು ನಿವಾರಿಸಿ ಅವರ ಬೇಡಿಕೆಗೆ ಸ್ಪಂದಿಸಲೇಬೇಕಿದೆ. ಎಕೆಂದರೆ ನನಗೆ ಅವರಲ್ಲಿ ನಾವು ಸಂಪ್ರದಾಯಿಕವಾಗಿ ನೋಡುವ ಮಹಿಳೆ ಕಾಣುತ್ತಿಲ್ಲ ಬದಲಾಗಿ ತನ್ನ ವಿರುದ್ಧ ನಡೆಯುತ್ತಿರುವ ದೌರ್ಜನ್ಯದ ಸಂಪೂರ್ಣ ಅರಿವಿರುವ ದುಡಿಯುವ ವರ್ಗದ ಪ್ರತಿನಿಧಿಯಂತೆ ಕಾಣುತ್ತಿದ್ದಾಳೆ. ಆ ಪ್ರಜ್ಞೆಯನ್ನು ನಾವು ಅರ್ಥಮಾಡಿಕೊಳ್ಳಬೇಕಿದೆ.

ಇಂದು ನಮ್ಮ ನಾಗರಿಕ ಸಮುದಾಯ ಆಕೆಯೊಟ್ಟಿಗೆ ನಿಲ್ಲಬೇಕಿದೆ...

– ಡಾ. ಕಿರಣ್.ಎಂ ಗಾಜನೂರು,
ರಿಸರ್ಚ್ ಫೆಲೊ, ಕುವೆಂಪು ವಿ.ವಿ.



ಸರಕಾರ ಸಕಾರಾತ್ಮಕವಾಗಿ ಸ್ಪಂದಿಸಿದೆ ಸಂಬಳ ಸೇರಿದಂತೆ ಇತರೆ ಬೇಡಿಕೆಗಳನ್ನು ಈಡೇರಿಸುವ ಕುರಿತು ಒಪ್ಪಿಗೆ ಸೂಚಿಸಿದೆ. ಏಪ್ರಿಲ್ 19 ರ ಬದಲಾಗಿ ಏಪ್ರಿಲ್ 10 ಕ್ಕೆ ಸಭೆ ನಿಗದಿಯಾಗಿದೆ.

– ಜಿ.ವಿ.ಶ್ರೀರಾಮರೆಡ್ಡಿ,
ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ

ಕಾಮ್ರೇಡ್ಸ್,

ನಿಮ್ಮ ಹೋರಾಟದ ವರದಿಗಳು ನಿರಂತರವಾಗಿ ಬರುತ್ತಿವೆ. ಅಂಗನವಾಡಿ ಕಾರ್ಯಕರ್ತೆಯರ ಬೆಂಬಲಿಗರಲ್ಲಿ ನಾನೂ ಒಬ್ಬ.

ಎಲ್ಲಾ ಬೇಡಿಕೆಗಳೂ ಈಡೇರುವವರೆಗೆ ಹೋರಾಟ ಮುಂದುವರೆಸಿ. ನಾವು ನಿಮ್ಮೊಂದಿಗೆ ಇದ್ದೇವೆ..

ಬಿ.ಸುರೇಶ್,
ಸಿನೆಮಾ ನಿರ್ದೇಶಕರು

ಸಹಜವಾಗಿ ಅಂಗನವಾಡಿ ಕಾರ್ಯಕರ್ತೆಯರು ತಮ್ಮ ಬೇಡಿಕೆಗಳನ್ನು ಮುಂದಿಟ್ಟು ವರ್ಷಕ್ಕೆ ನಾಲ್ಕೈದು ಬಾರಿ ಸ್ಟ್ರೈಕ್ ಮಾಡುತ್ತಾರೆ. ಇದು ತಮ್ಮ ಬೇಡಿಕೆಗಳನ್ನು ಈಡೇರಿಸುವ ಹಕ್ಕೊತ್ತಾಯದ ನಿರಂತರ ಚಳವಳಿ. ಹೀಗೆ ನಿಲ್ಲದ ಹೋರಾಟ ಮಾಡಿದ ಫಲವೆಂದರೆ, ಸದ್ಯಕ್ಕೆ ಹುಸಿರಾಡುವಷ್ಟು ಸಂಬಳ ಸಿಗುತ್ತಿದೆ. ಇಂತಹ ಚಳವಳಿಗೆ ಬಾಲ್ಯದಲ್ಲಿ ಅವ್ವನ ಜತೆ ಹತ್ತಾರು ಬಾರಿ ಹೋಗಿದ್ದೇನೆ?. ಇವರನ್ನು 'ಅನುತ್ಪಾದಕ' ಎನ್ನುವ ಮಾರುಕಟ್ಟೆಯ ಪರಿಭಾಷೆಯಲ್ಲಿ ಕೇಂದ್ರ ಸರಕಾರ ಪರಿಭಾವಿಸುತ್ತಿರುವುದು ದೊಡ್ಡ ದುರಂತವಾಗಿದೆ. ಹಾಗಾಗಿ ಅಂಗನವಾಡಿ ಮಹಿಳೆಯರು ಇಂದು ದೇಶವ್ಯಾಪಿ ಬೆಸೆವ ದೊಡ್ಡ ಹೋರಾಟಗಳನ್ನು ತೀವ್ರಗೊಳಿಸಬೇಕಿದೆ. ಅವರ ಕನಸುಗಳನ್ನು ಜೀವಂತವಾಗಿಟ್ಟುಕೊಂಡೇ ಕೇಂದ್ರ ಸರಕಾರದ ಉತ್ಪಾದಕ ವ್ಯಾಖ್ಯಾನದ ಅಮಾನವೀಯತೆಯನ್ನು ಬಯಲು ಮಾಡಬೇಕಿದೆ. ಇದೀಗ ರಾಜ್ಯ ಸರಕಾರದ ಬಜೆಟ್ ಮಂಡನೆಯತ್ತ ಅಂಗನವಾಡಿ ನೌಕರರು ಆಸೆಗಣ್ಣುಗಳಿಂದ ಕಾಯುತ್ತಿದ್ದಾರೆ. ರಾಜ್ಯ ಸರಕಾರವಾದರೂ ಇವರನ್ನು ಗೌರವಿಸುವ ವೇತನ ಮತ್ತು ಸೌಲಭ್ಯಗಳನ್ನು ಒದಗಿಸುವಲ್ಲಿ ಮುಂದಾಗಲಿ.

– ಅರುಣ್ ಜೋಳದಕೂಡ್ಲಿಗಿ, ಹಂಪಿ ವಿವಿ

ಅಂಗನವಾಡಿಗ ಹೋಗುವವರು ಬಹುತೇಕ ಶೋಷಿತ ಸಮುದಾಯಗಳಿಗೆ ಸೇರಿದವರಾಗಿದ್ದಾರೆ. ಪ್ರತಿದಿನ ಮಕ್ಕಳನ್ನು ಪೋಷಿಸುವ ಜೊತೆಯಲ್ಲಿ ಜನಗಣತಿ,ಮಾರಕರೋಗಿಗಳ ಗಣತಿ. ನಿಯಂತ್ರಣ ಹಾಗು ತಿಳುವಳಿಕೆ ನೀಡುವ ಜವಬ್ದಾರಿ, ಬಾಣಂತಿ, ಬಸಿರು ಹೆಣ್ಣುಮಕ್ಕಳಿಗೆ ತಾಯಂದಿರಾಗಿ ಅಪೌಷ್ಠಿಕತೆಯ ಸಂಶೋಧಕರಾಗಿ ಸರಕಾರ ನೀಡುವ ಯಾವ ಕೆಲಸವನ್ನು ಕಿಂಚಿತ್ತು ಮುಜುಗರ ಪಟ್ಟಿಕೊಳ್ಳದೆ ದುಡಿಯುತ್ತಿರುವ ಅಂಗನವಾಡಿ ತಾಯಂದಿರು ಇಂದು ತಮ್ಮ ತುತ್ತಿನ ಚೀಲ ತುಂಬಿಸಿಕೊಳ್ಳಲು ಕೆಲವು ಬೇಡಿಕೆಗಳನ್ನು ಸರಕಾರದ ಮುಂದಿಟ್ಟು ಹೋರಾಟ ನಡೆಸುತ್ತಿರುವುದು ನಿಜಕ್ಕು ಶೋಚನೀಯ ಸಂಗತಿ. ಈ ಅಂಗನವಾಡಿ ತಾಯಂದಿರ ಹೋರಾಟಕ್ಕೆ ನನ್ನ ಹಾಗು ನನ್ನಂತವರ ಬೆಂಬಲವಿದೆಯಂದು ಹೇಳುತ್ತ ಇವರ ಹೋರಾಟ ಜಯವಾಗಲೆಂದು ಆಶಿಸುತ್ತೇನೆ

– ಡಾ. ಎನ್. ಚಿನ್ನಸ್ವಾಮಿ ಸೋಸಲೆ,
ಪ್ರಾಧ್ಯಾಪಕರು, ಕನ್ನಡ ವಿಶ್ವವಿದ್ಯಾಲಯ ಹಂಪಿ

ಅಂಗನವಾಡಿ ನೌಕರರ ಹೋರಾಟಕ್ಕೆ ಸ್ಪಂದಿಸಿದ ಸರ್ಕಾರ



ಅಂಗನವಾಡಿ ಕಾರ್ಯಕರ್ತೆಯರು ಕಳೆದ ಮೂರು ದಿನಗಳಿಂದ ಬಿಸಿಲಿನಲ್ಲಿ ಕರಗುತ್ತ ತಮ್ಮ ಮಾಸಿಕ ಋತು ಚಕ್ರದ ಬವಣೆಯನ್ನು ಎದುರಿಸುತ್ತ ಮತ್ತು ಎಳೆಯ ಕೂಸುಗಳನ್ನು ಕಟ್ಟಿಕೊಂಡು ಇಡುತ್ತಿರುವ ಬೇಡಿಕೆ ಪ್ರಭುತ್ವದ ಕಿವಿಗೆ ಕೇಳಿಸುತ್ತಿಲ್ಲವೇ? ಇನ್ನು ಹೇಗೆ ಕೇಳಿಸಬೇಕು? ಈ ದುರ್ಗತಿಯ ವ್ಯವಸ್ಥೆ ಇನ್ನು ಯಾವ ಮಟ್ಟಕ್ಕೆ ಇಳಿಯುತ್ತದೆ? ಪ್ರಭುತ್ವಕ್ಕೆ ಮಾನವೀಯತೆ ಒಂದಿಷ್ಟಾದರೂ ಇದೆ ಎನ್ನುವುದಾದಲ್ಲಿ ಕೂಡಲೇ ಅವರ ಅಳಲನ್ನು ನಿವಾರಿಸುವ ಕೆಲಸವಾಗಲಿ. ಅಂಗನವಾಡಿ ಅಮ್ಮಂದಿತ ಜೊತೆ ನಾನೂ ಇದ್ದೇನೆ.

ಬಾನು ಮುಷ್ತಾಕ್
ಸಾಹಿತಿಗಳು

ಅಂಗನವಾಡಿ ತಾಯಂದಿರ ವೇತನ ಹೆಚ್ಚಿಸುವ ನಿಟ್ಟಿನಲ್ಲಿ ಜನಪರ ಎಂದು ಹೇಳಿಕೊಳ್ಳುವ ಸರಕಾರ ಒಂದು ದಿನವೂ ತಡಮಾಡಬಾರದು. ಈ ವಿಷಯದಲ್ಲಾಗುವ ಒಂದು ನಿಮಿಷದ ವಿಳಂಬವೂ ಜನವಿರೋಧದ್ದಾಗುತ್ತದೆ. ನಿಜ ಕೇಂದ್ರ ಸರಕಾರ ತನ್ನ ಪಾಲಿನ ಹಣ ಕಡಿತಗೊಳಿಸಿದೆ. ಇದು ಅಮಾನವೀಯವಾದದ್ದು. ಆದರೆ ಕೇಂದ್ರ ನೀಡದ ಹೊರತು ತಾನು ನೀಡಲಾರೆ ಎಂಬ ತರ್ಕವೂ ಇನ್ನಷ್ಟು ಅಮಾನವೀಯದ್ದಾಗುತ್ತದೆ. ದಿನದ ಆರುತಾಸಿನ ದುಡಿಮೆ ಅರೆಕಾಲಿಕ ಎಂಬ ತರ್ಕ ಅರ್ಥಹೀನವಾದುದ್ದು. ಈ ಅವಧಿ ಮುಗಿಸಿ ಬೇರೆಡೆ ಕೂಲಿಗೆ ಹೋಗಲು ಸಾಧ್ಯವೇ? ಈ ಆರು ತಾಸಿನಂತೆ ತಿಂಗಳು ದುಡಿದು 10 ಸಾವಿರ ವೇತನ ಪಡೆಯಲು ಈ ಪರಿ ಅನ್ನ ನೀರಿಲ್ಲದೇ, ಶೌಚ ಸೌಲಭ್ಯವಿಲ್ಲದೇ ಹಸುಗೂಸುಗಳನ್ನು ಕಟ್ಟಿಕೊಂಡು ಹಗಲು ರಾತ್ರಿ ಬೀದಿಯಲ್ಲಿ ಕಳೆದು ಹೋರಟ ಮಾಡಬೇಕಾಗಿ ಬಂದಿರುವುದು ನಿಜಕ್ಕೂ ನಾಚಿಕೆಗೇಡು. ಸರ್ಕಾರ ಈ ಕೂಡಲೆ ಅಂಗನವಾಡಿ ತಾಯಂದಿರ ವೇತನ 10 ಸಾವಿರಕ್ಕೆ ಹೆಚ್ಚಿಸಬೇಕು ಮತ್ತಿತರ ಬೇಡಿಕೆಗಳನ್ನು ಈಡೇರಿಸಬೇಕು. ಇಲ್ಲದೇ ಹೋದರೆ ಈ ಸರ್ಕಾರ ಇನ್ನಷ್ಟು ತೀವ್ರ ಪ್ರತಿರೋಧ ತಂದುಕೊಳ್ಳುವುದರಲ್ಲಿ ಅನುಮಾನವಿಲ್ಲ.

ಬಿ. ಪೀರ್ ಬಾಷಾ
ಚಿಂತಕ

ಅಂಗನವಾಡಿ ಕಾರ್ಯಕರ್ತೆಯರು ಮೂಲಸೌಕರ್ಯಗಳು, ಸೌಲಭ್ಯಗಳು, ಆಯಾ ಕಾಲದ ಅಗತ್ಯಕ್ಕೆ ತಕ್ಕಂತೆ ಬದುಕುವ ವೇತನವೂ ಇಲ್ಲದೆ ಅತಿಯಾದ ದುಡಿತಕ್ಕೆ ಒಳಗಾಗಿದ್ದಾರೆ. ಉದ್ಯೋಗಭದ್ರತೆಯೂ ಇಲ್ಲದೆ ಸದಾ ಆತಂಕದಲ್ಲೇ ಬದುಕುತ್ತಿದ್ದಾರೆ. ಉದ್ಯೋಗ ಪ್ರತಿ ಪ್ರಜೆಯ ಹಕ್ಕು. ಸಾಮರ್ಥ್ಯಕ್ಕೆ ತಕ್ಕ ಉದ್ಯೋಗ ಮತ್ತು ಶ್ರಮಕ್ಕೆ ತಕ್ಕ ವೇತನ ಎಲ್ಲ ಉದ್ಯೋಗಸ್ಥರಿಗೂ ದೊರೆಯಬೇಕು. ಎಂದೇ ಈ ಮಹಿಳೆಯರಿಗೆ ಸೂಕ್ತ ವೇತನ ಹಾಗೂ ಆರೋಗ್ಯಕರ ಕೆಲಸದ ವಾತವರಣ ಸಿಗಲೇಬೇಕು ಎಂದು ಒತ್ತಾಯಿಸುತ್ತ, ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟವೂ ಅಂಗನವಾಡಿ ಸೋದರಿಯರ ಹೋರಾಟವನ್ನು ಬೆಂಬಲಿಸುತ್ತದೆ.

ಡಾ. ಅನುಪಮಾ. ಎಚ್.ಎಸ್.
ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ

ಸರಕಾರ ಸಕಾರಾತ್ಮಕವಾಗಿ ಒಪ್ಪಿಗೆ ಸೂಚಿಸಿರುವುದರಿಂದ ಅಂಗನವಾಡಿ ನೌಕರರ ಹೋರಾಟವನ್ನು ತಾತ್ಕಾಲಿಕವಾಗಿ ಹಿಂಡೆಯಲಾಗುತ್ತಿದೆ. ಏಪ್ರಿಲ್ 10 ಸಭೆಯಲ್ಲಿ ಸರಕಾರ ಒಪ್ಪಿಕೊಂಡಿದ್ದನ್ನು ಜಾರಿ ಮಾಡದೇ ಹೋದಲ್ಲಿ ರಸ್ತೆಯಲ್ಲಿ ನಡೆದ ಹೋರಾಟ ಮುಖ್ಯಮಂತ್ರಿಯವರ ಮನೆಗೆ ವಿಸ್ತರಣೆ ಆಗುತ್ತದೆ.

– ಎಸ್. .ವರಲಕ್ಷ್ಮಿ –
ಸಿಐಟಿಯು ರಾಜ್ಯಾಧ್ಯಕ್ಷರು

ಅಂಗನವಾಡಿ ತಾಯಂದಿರ ವೇತನದ ರಾಜಕೀಯ, ಅರ್ಥಶಾಸ್ತ್ರ

* ಐ.ಸಿ.ಡಿ.ಎಸ್. ಯೋಜನೆಯನ್ನು ಪೂರ್ವ ಪ್ರಾಥಮಿಕ ಶಿಕ್ಷಣದ ಒಂದು ಸಾಧನವಾಗಿ, ಅದರ ಜೊತೆಗೆ ಶಿಶು ಅಭಿವೃದ್ಧಿಯನ್ನು ಮೇಳವಿಸಿ ಒಂದು ಪೂರ್ಣ ಪ್ರಮಾಣದ ಯೋಜನೆಯಾಗಿ ಮಾಡದೆ ಕೇವಲ ಅಲ್ಪ ಸಮಯದ ಗೌರವಧನದ ಕೆಲಸವಾಗಿ ಪರಿಗಣಿಸಿದ್ದು ಅಂದಿನ ಕಾಂಗ್ರೆಸ್ ಕೇಂದ್ರ ಸರ್ಕಾರದ ಮೂಲ ಅಪರಾಧ.
* ಮುಂದೆ ಕೆಜಿ– ಕಿಂಡರ್ ಗಾರ್ಟನ್ ಶಿಕ್ಷಣ ಪ್ರಾಮುಖ್ಯತೆ ಪಡೆದುಕೊಂಡ ಮೇಲೂ ಮುಂದಿನ ಯಾವ ಕೇಂದ್ರ ಸರ್ಕಾರವೂ ಇದನ್ನು ಮಾರ್ಪಡಿಸದಿದ್ದದ್ದು ಬಡ ಮಕ್ಕಳ ಶಿಕ್ಷಣದ ಮೇಲಿನ ಅಲಕ್ಷ್ಯ ಮತ್ತು ಧಾಳಿ.
* 1957 ರ ಪ್ರಥಮ ಕಮ್ಯೂನಿಸ್ಟ್ ಸರ್ಕಾರ ಅಸ್ತಿತ್ವಕ್ಕೆ ಬಂದಾಗಿನಿಂದ ಕಮ್ಯೂನಿಸ್ಟ್ ಪಕ್ಷ, ನಂತರ 1967 ರಲ್ಲಿ ತಮಿಳುನಾಡಿನ ಡಿಎ–ಂಕೆ, 1983 ರ ನಂತರ ಕರ್ನಾಟಕದ ಜನತಾ ಪಕ್ಷ, ಆಂಧ್ರದ ತೆಲುಗುದೇಶಂ ಮೊದಲಾದ ಎಂಟು ರಾಜ್ಯ ಸರ್ಕಾರಗಳು, ಕಾಂಗ್ರೆಸ್, ಬಿಜೆಪಿ ಹೊರತಾಗಿ ಇತರೆಲ್ಕ ರಾಜಕೀಯ ಪಕ್ಷಗಳು ಜ್ಯೋತಿ ಬಸುರವರ ನೇತೃತ್ವದಲ್ಲಿ ಮಾಡಿದ ಒಕ್ಕೊರಲ ಒತ್ತಾಯ – ರಾಜ್ಯಗಳಿಗೆ ದೇಶದ ತೆರಿಗೆ ಸಂಪನ್ಮೂಲದಲ್ಲಿ ಶೇಕಡಾ 75 ಭಾಗ ರಾಜ್ಯಗಳಿಗೆ ನೀಡಬೇಕು. ಕೇಂದ್ರ ಪ್ರಾಯೋಜಿತ ಯೋಜನೆಗಳನ್ನು ಸಂಪನ್ಮೂಲಗಳ ಜೊತೆ–ಗೆ ರಾಜ್ಯಗಳಿಗೆ ವರ್ಗಾಯಿಸಬೇಕು ಎಂದು . ಅದನ್ನುಕಾಂಗ್ರೆಸ್ ಕೇಂದ್ರ ಸರ್ಕಾರ ತಿರಸ್ಕರಿಸಿತು.
* ಇತ್ತೀಚೆಗೆ ಜಾಗತೀಕರಣ ತಂದ ಕಾಂಗ್ರೆಸ್ ಹಾಗೂ ನಂತರದ ಬಿಜೆಪಿ ಸರ್ಕಾರಗಳು ರಾಜ್ಯ ಸರ್ಕಾರಗಳ ಅಧಿಕಾರ, ಸಂಪನ್ಮೂಲಗಳ ಮೇಲೆ ನಿತ್ಯ ಧಾಳಿ ನಡೆಸುತ್ತಾ ಬಂದಿವೆ. 1996 ರ ಸಂಯುಕ್ತ ರಂಗ ಸರ್ಕಾರ ಬಹಳ ಸ್ವಲ್ಪ ಮಾತ್ರ ಉತ್ತಮ ಪಡಿಸಲು ಪ್ರಯತ್ನಿಸಿತು.
* ಈಗಿನ ಮೋದಿ ಬಿಜೆಪಿ ಸರ್ಕಾರ ರಭಸದಿಂದ ರಾಜ್ಯಗಳ ಸಂಪನ್ಮೂಲಗಳನ್ನು ಕಸಿದುಕೊಳ್ಳುತ್ತಿದೆ. ಅದರ ಫಲವೇ 90: 10 ಪ್ರಮಾಣವನ್ನು 60:40 ಭಾಗವನ್ನಾಗಿ ಪರಿವರ್ತಿಸಿದ್ದು. ನೀತಿ ಆಯೋಗ ರದ್ದು, ಸರ್ವ ಶಿಕ್ಷಣ ಅಭಿಯಾನ ಮೊದಲಾದ ಅನೇಕ ಯೋಜನೆಗಳಲ್ಲಿ ಕಡಿತ ಮಾಡಿದೆ.
* ಇಂದು ದೊಡ್ಡ ಗದ್ದಲ ಮಾಡುತ್ತಿರುವ ರಾಜ್ಯದ ಬಿಜೆಪಿ ನಾಯಕರು, ಸಂಸದರು ಒಮ್ಮೆಯೂ ಈ ಯಾವ ಬಗ್ಗೆಯೂ ದನಿಯೆತ್ತಲಿಲ್ಲ.
* ಈ ಬಗ್ಗೆ ಕರ್ನಾಟಕ ರಾಜ್ಯ ಸರ್ಕಾರ ತಕ್ಷಣವೇ ದೃಢವಾಗಿ, ಬಲವಾಗಿ ವಿರೋಧಿಸಲಿಲ್ಲ. ಜನರಿಗೆ ಈ ಬಗ್ಗೆ ಸಾರಿ ಹೇಳಲಿಲ್ಲ. ಕೇಂದ್ರ ಸರ್ಕಾರಕ್ಕೆ ನಿಯೋಗಗಳನ್ನು ಕೊಂಡೊಯ್ದು ಪ್ರತಿಭಟಿಸಲಿಲ್ಲ . ರಾಷ್ಟ್ರೀಯ ಅಭಿವೃದ್ಧಿ ಪರಿಷತ್ತಿನ ಸಭೆಗಳಲ್ಲಿ ಪ್ರಬಲ ದನಿಯೆತ್ತಲಿಲ್ಲ. ರಾಜ್ಯದ ಜನತೆಯನ್ನು ಕೂಡ ಈ ಬಗ್ಗೆ ಹೋರಾಟಕ್ಕೆ ಇಳಿಸಬಹುದಾಗಿತ್ತು . ಇಳಿಸಲಿಲ್ಲ.
* ಇದರ ಅರ್ಥ ರಾಜ್ಯ ಸರ್ಕಾರ ಕೇಂದ್ರದ ಈ ಹೇರಿಕೆಯನ್ನು ಒಪ್ಪಿಕೊಂಡಿದೆ ಎಂದೇ ಅರ್ಥ. ಈ ಮೌನ ಒಪ್ಪಿಗೆ ನೀಡಿದ ಮೇಲೆ ಅದರಂತೆ ರಾಜ್ಯ ಸರ್ಕಾರವೇ ಹೊಣೆಯನ್ನು ಹೊರಬೇಕು.
* ಕಮ್ಯೂನಿಸ್ಟ್ ನೇತೃತ್ವದ ಎಡರಂಗ ಸರ್ಕಾರಗಳು ನಿರಂತರವಾಗಿ ಈ ಬಗ್ಗೆ ಪ್ರಬಲ ದನಿಯೆತ್ತಿವೆ. ಅಖಿಲ ಭಾರತ ಕಾರ್ಮಿಕ ಮುಷ್ಕರಗಳ ಒಂದು ಮುಖ್ಯ ಒತ್ತಾಯಗಳಲ್ಲಿ ಅಂಗನವಾಡಿಗಳಿಗೆ ಹಣ ಕಡಿತವೂ ಸೇರಿದೆ. ಕಾಂಗ್ರೆಸ್ ಪಕ್ಷ ವಿರೋಧ ಪಕ್ಷವಾಗಿಯೂ ಒಮ್ಮೆಯೂ ಈ ಪ್ರಯತ್ನಗಳನ್ನು ಬೆಂಬಲಿಸಲಿಲ್ಲ.
* ಆದರೂ ಕೇರಳ ಎಡರಂಗ ಸರ್ಕಾರ ಅಂಗನವಾಡಿ ನೌಕರರ ವೇತನ 10,000 ನೀಡುವುದರಲ್ಲಿ ವ ಪಡಿತರದಲ್ಲಿ ಅಕ್ಕಿ ಜೊತೆಗೆ ಬೇಳೆ, ಬೇಳೆಕಾಳುಗಳು, ಎಣ್ಣೆ, ಮೆಣಸಿನಕಾಯಿ ಮೊದಲಾದ ಅನೇಕ ಅಗತ್ಯ ವಸ್ತುಗಳನ್ನು ನೀಡುವುದರಲ್ಲಿ, ಮಾಸಿಕ ವೇತನಗಳನ್ನು 1000 ರೂಗಿಂತ ಹೆಚ್ಚಿಸುವುದರಲ್ಲಿ (ರಾಜ್ಯದಲ್ಲಿ ಕೇವಲ 500) ಕೇಂದ್ರದ ಮೇಲೆ ಹೊಣೆ ಹಾಕುತ್ತಾ ತಪ್ಪಿಸಿಕೊಳ್ಳುವ ಪ್ರಯತ್ನ ಮಾಡಿಲ್ಲ.
* ಕರ್ನಾಟಕಕ್ಕಿಂತ ಬಹಳ ಕಡಿಮೆ ಬಜೆಟ್ ಇರುವ ಕೇರಳದಲ್ಲಿ ಅಂಗನವಾಡಿಯವರಿಗೆ, ಇತರೆಲ್ಲಾ ದುಡಿವ ಜನರಿಗೆ, ಬಡ ಜನರಿಗೆ ಇರುವ ಪಾಲು ಕರ್ನಾಟಕ ಬಜೆಟ್ ನಲ್ಲಿ ಏಕಿಲ್ಲ?

ಕರ್ನಾಟಕದಲ್ಲಿ ಇರುವ ಹೆಚ್ಚಿನ ಸಂಪನ್ಮೂಲವನ್ನು ಬಳಸಿ ಹೆಚ್ಚು ಆದಾಯ ಏಕೆ ಪಡೆದುಕೊಳ್ಳುತ್ತಿಲ್ಲ.?

ಈ ಪ್ರಶ್ನೆಗಳನ್ನು ಎತ್ತಬೇಕಾಗಿದೆ. ಅಂಗನವಾಡಿಯ ತಾಯಂದಿರಿಗೆ ನ್ಯಾಯ ಸಲ್ಲಿಸಿ. ಕನಿಷ್ಠ 10,000 ರೂ ನೀಡಬೇಕು.

ಕರ್ನಾಟಕ ರಾಜ್ಯ ಸರ್ಕಾರ, ಮೋದಿ ಸರ್ಕಾರ ರಾಜ್ಯ ಸರ್ಕಾರಗಳ ಅಧಿಕಾರ ಕಸಿದುಕೊಳ್ಳುವ ಪ್ರಯತ್ನಗಳ ವಿರುದ್ಧ ಪ್ರಬಲ ದನಿಯೆತ್ತಲಿ. ಹೋರಾಟ ಮಾಡಲಿ. ನಾವೆಲ್ಲ ಬೆಂಬಲಿಸೋಣ.

– ಜಿ.ಎನ್. ನಾಗರಾಜ್

ಸಾರ್ವಜನಿಕ ವಲಯ ಉಳಿಸಿ, ಭಾರತ ಉಳಿಸಿ ಪುಟ 6 ರಿಂದ

ಮೇಲ್ಕಂಡ ಕೋಷ್ಟಕದಿಂದ ಸ್ಪಷ್ಟವಾಗುತ್ತದೆ. ಅದಲ್ಲದೆ, ಕೇಂದ್ರೋದ್ಯಮದ ಉದ್ಯೋಗಿಗಳು ಪಾವತಿಸಿದ ಆದಾಯ ತೆರಿಗೆ, ಅವರು ತಮ್ಮ ವೇತನದಿಂದ ಖರೀದಿಸಿದ ವಸ್ತುಗಳಿಗೆ ಪಾವತಿಸಿದ ತೆರಿಗೆಗಳನ್ನು ಸೇರಿಸಿದರೆ ಈ ಮೊತ್ತವು ಇನ್ನಷ್ಟು ಹೆಚ್ಚಾಗುತ್ತದೆ.

ಈ ಮೊತ್ತದ ಕೊಡುಗೆಯನ್ನು ಪ್ರತಿ ವರ್ಷವೂ ಸಾರ್ವಜನಿಕ ವಲಯದ ಉದ್ಯಮಗಳು ನೀಡುತ್ತಿವೆ ಎಂದರೆ, ಅಷ್ಟರ ಮಟ್ಟಿಗೆ ಸಾಮಾನ್ಯ ಜನತೆಗೆ ತೆ–ರಿಗೆಯ ಹೊರೆಯನ್ನು ಈ ಉದ್ಯಮಗಳು ಕಡಿಮೆ ಮಾಡುತ್ತಿವೆ ಎಂದು ತಿಳಿಯಬೇಕು. ಈ ಉದ್ಯಮಗಳು ಖಾಸಗಿ ಬಂಡವಾಳಗಾರರ ಪಾಲಾದರೆ, ಸರ್ಕಾರ–ಕ್ಕೆ ಈ ವರಮಾನವು ಲಭ್ಯವಾಗದು, ಹಾಗೂ ಆ ಪ್ರಮಾಣದಲ್ಲಿ ಶ್ರೀಸಾಮಾನ್ಯನ ತೆರೆಗೆ ಹೊರೆಯು ಹೆಚ್ಚಾಗುತ್ತದೆ.

ಬೆಮೆಲ್‌ನ್ನು ಮಾರಾಟಕ್ಕಿಡಲಾಗಿದೆ; ಬಿಇಎಲ್ ಮತ್ತು ಎಚ್‌ಎಎಲ್‌ನ್ನು ಬಿಡಿಯಾಗಿ ಬಿಕರಿ ಮಾಡಲು ಸರ್ಕಾರ ಸಿದ್ಧವಾಗಿದೆ

ರಕ್ಷಣಾ ಸಚಿವಾಲಯದಡಿಯಲ್ಲಿ ಬೆಮೆಲ್ ಸಂಸ್ಥೆಯನ್ನು 11.05.1964ರಂದು ಸ್ಥಾಪಿಸಲಾಯಿತು. ಮುಖ್ಯವಾಗಿ ಬೆಮೆಲ್ ರಕ್ಷಣಾ ಪಡೆಗಳಿಗೆ ಬೃಹತ್ ಟ್ರಕ್ಕುಗಳನ್ನು ನಿರ್ಮಿಸುತ್ತಿದೆ. ಗಣಿಗಾರಿಕೆಗೆ ಅಗತ್ಯವಿರುವ ಬೃಹತ್ ಯಂತ್ರೋಪಕರಣಗಳನ್ನು ಬೆಮೆಲ್ ನಿರ್ಮಿಸುತ್ತಿದೆ. ಭಾರತೀಯ ರೈಲ್ವೆಗೆ ಬೆಮೆಲ್ ರೈಲು ಗಾಡಿ ನಿರ್ಮಿಸುತ್ತಿರುವ ಪ್ರಮುಖ ಸಂಸ್ಥೆ. ಈಗ ವಿಶ್ವ ದರ್ಜೆಯ ಮೆಟ್ರೋ ಕೋಚ್‌ಗಳನ್ನೂ ಬೆಮೆಲ್ ಬೆಂಗಳೂರು ಮತ್ತು ದೆಹಲಿ ಮೆಟ್ರೋಗೆ ನಿರ್ಮಿಸಿಕೊಟ್ಟಿದೆ. ಬೆಮೆಲ್ ನಮ್ಮ ರಾಜ್ಯದಲ್ಲಿ ಕೈಗಾರಿಕೀಕರಣಕ್ಕೆ ವಾತಾವರಣವನ್ನು ನಿರ್ಮಿಸಿ, ದೇಶವು ಯಂತ್ರೋಪರಣವನ್ನು ಆಮದು ಮಾಡಿಕೊಳ್ಳುವ ಹಂಗಿನಿಂದ ಪಾರುಮಾಡಿದೆ. ಬೆಮೆಲ್‌ನ ನಾಲ್ಕು ಘಟಕಗಳು – ಬೆಂಗಳೂರು, ಮೈಸೂರು, ಕೆಜಿಎಫ್ ಮತ್ತು ಕೇರಳದ ಪಾಲಕ್ಕಾಡ್‌ನಲ್ಲಿದೆ.

ಕೇಂದ್ರ ಸಚಿವ ಸಂಪುಟವು ದಿನಾಂಕ 06.01.2017ರಂದು ಬೆಮೆಲ್‌ನ ಶೇ. 26ರಷ್ಟು ಷೇರು ಬಂಡವಾಳವನ್ನು ಇಡಿಯಾಗಿ ಒಬ್ಬ ಪಾಲುದಾರನಿಗೆ ಮಾರಾಟ ಮಾಡಲು ನಿರ್ಧರಿಸಿದೆ. 1990 ಮತ್ತು 2007ರಲ್ಲಿ ಕೈಗೊಳ್ಳಲಾದ ಬಂಡವಾಳ ಹಿಂಪಡೆತದ ಪರಿಣಾಮವಾಗಿ ಈಗಾಗಲೇ ಒಟ್ಟು ಬೆಮೆಲ್‌ನ ಶೇ.45.97ರಷ್ಟು ಷೇರು ಬಂಡವಾಳ ಖಾಸಗಿಯವರ ಪಾಲಾಗಿದೆ. ಈಗ ಕೇಂದ್ರ ಸರ್ಕಾರದ ಬಳಿ ಇರುವ ಶೇ. 54.03ರಲ್ಲಿ ಷೇರು ಬಂಡವಾಳವಿದ್ದು, ಸಂಸ್ಥೆಯ ಶೇ. 26ರಷ್ಟನ್ನು ಮಾರಾಟ ಮಾಡಿದರೆ, ಬೆಮೆಲ್ ಖಾಸಗಿ ಸಂಸ್ಥೆಯಾಗಿ ಮಾರ್ಪಾಡಾಗುತ್ತದೆ. ಕೇಂದ್ರದ ತೀರ್ಮಾನ ಜಾರಿಯಾದಲ್ಲಿ, ನಮ್ಮ ದೇಶದ ಸಾರ್ವಭೌಮತೆ ಮತ್ತು ದೇಶೀಯ ಉತ್ಪಾದನಾ ಸಾಮರ್ಥ್ಯಕ್ಕೆ ಕೊಡಲಿ ಪೆಟ್ಟು ನೀಡಿದಂತಾಗುತ್ತದೆ.

ಬೆಂಗಳೂರಿನ ಈ ಮೂರು ಉದ್ಯಮಗಳು – ಬಿಇಎಲ್, ಎಚ್‌ಎಎಲ್ ಮತ್ತು ಬೆಮೆಲ್ ಭಾರತ ಸರ್ಕಾರಕ್ಕೆ ವಿವಿಧ ರೂಪದಲ್ಲಿ 2015–16ನೇ ಸಾಲಿನಲ್ಲಿ ನೀಡಿದ ವರಮಾನದ ಸಂಕ್ಷಿಪ್ತ ವಿವರ ಈ ಕೆಳಕಂಡಂತಿದೆ.

ಮುಂದುವರಿದು, ಕೇಂದ್ರ ಸರ್ಕಾರವು ಭಾರತ ಉಕ್ಕು ಪ್ರಾಧಿಕಾರದಡಿಯಲ್ಲಿರುವ ಸರ್ ಎಂ. ವಿಶ್ವೇಶ್ವರಯ್ಯನವರು ಸ್ಥಾಪಿಸಿದ ಭಾರತದ ಮೊದಲ ಉಕ್ಕಿನ ಕಾರ್ಖಾನೆಯನ್ನೂ ಮಾರಾಟ ಮಾಡಲು ನಿರ್ಧರಿಸಿದೆ.

ಅಷ್ಟೇ ಅಲ್ಲದೆ, 2016ರಲ್ಲಿ ಆಗಸ್ಟ್‌ನಲ್ಲಿ ಬಿಇಎಲ್ ಸಂಸ್ಥೆಯ ಕಾಪು ನಿಧಿಯಿಂದ 2300 ಕೋಟಿ ರೂಗಳನ್ನು 'ಬಯ್‌ಬ್ಯಾಕ್' ಎಂಬ ವಿಚಿತ್ರ ಕ್ರಮದ ಮೂಲಕ ಕೇಂದ್ರ ಸರ್ಕಾರ ವಶಪಡಿಸಿಕೊಂಡಿದೆ. ಅಲ್ಲದೆ, ಬಿಇಎಲ್ ಸಂಸ್ಥೆಯ ಶೇ. 5ರಷ್ಟು ಷೇರು ಬಂಡವಾಳವನ್ನು ವಿನಿಮಯ ವ್ಯಾಪಾರ ನಿಧಿ(ಇಟಿಎಫ್) ಎಂಬ ಅಪಮಾರ್ಗದ ಮೂಲಕ 1670 ಕೋಟಿ ರೂಗಳನ್ನು ಪಡೆದುಕೊಂಡಿದೆ. ಈ ನಿಧಿಯ ಯಜಮಾನಿಕೆಯನ್ನು ರಿಲಾಯನ್ಸ್ ಗೆ ನೀಡಲಾಗಿದೆ.

ಅದೇ ರೀತಿಯಲ್ಲಿ ಎಚ್.ಎ.ಎಲ್ ಸಂಸ್ಥೆಯ ಕಾಪು ನಿಧಿಯಿಂದ ಈಗಾಗಲೇ 5184 ಕೋಟಿ ರೂಗಳನ್ನು ದೋಚಲಾಗಿದೆ. ಮುಂಬರುವ ತಿಂಗಳುಗಳಲ್ಲಿ ಎಚ್.ಎ.ಎಲ್‌ನ ಷೇರು ಬಂಡವಾಳವನ್ನು ಇನ್ನಷ್ಟು ಮಾರಾಟ ಮಾಡಲಾಗುವುದೆಂದು ತಿಳಿದು ಬಂದಿದೆ.

ಎಲ್ಲಾ ಮೌಲ್ಯಗಳು ಕೋಟಿ ರೂಗಳಲ್ಲಿ					
ವರ್ಷ 2015–16	ವಹಿವಾಟು	ವಿವಿಧ ತೆರಿಗೆ ಬಾಬ್ತುಗಳ ಮೂಲಕ	ಲಾಭಾಂಶ	ಲಾಭಾಂಶದ ಮೇಲಿನ ತೆರಿಗೆ	ತೆರಿಗೆ–ಪೂರ್ವ ಲಾಭ
ಬಿಎಇಲ್	7521	451	408	83	1809
ಬೆಮೆಲ್	3426	11.62	16.66	3.39	64.27
ಎಚ್.ಎ.ಎಲ್	16,736	1634	627.32	128	3,288

ಜನತೆಯ ಆಸ್ತಿಯನ್ನು ಮಾರಾಟ ಮಾಡಲು ಸರ್ಕಾರಕ್ಕೆ ಯಾವುದೇ ಹಕ್ಕಿಲ್ಲ

ನಿಜಾರ್ಥದಲ್ಲಿ ಭಾರತ ಸರ್ಕಾರವು ಸಾರ್ವಜನಿಕ ವಲಯದ ಮಾಲೀಕನಲ್ಲ. ಸಾರ್ವಜನಿಕ ವಲಯದ ಉದ್ಯಮಗಳು ಜನತೆಯ ಆಸ್ತಿ. ಹೆಚ್ಚೆಂದರೆ ಸರ್ಕಾರವು ಅದರ ಸ್ಥಾಪಕ ಮತ್ತು ವಾರಸುದಾರನಷ್ಟೇ. ನಮ್ಮ ದೇಶದ ಜನತೆ ವಿಶೇಶವಾಗಿ, ದುಡಿಯುವ ವರ್ಗ ಮಾತ್ರವೇ ಸಾರ್ವಜನಿಕ ಉದ್ಯಮದ ಋಜು ಮಾಲೀಕರಾಗಲು ಸಾಧ್ಯ. ಈ ಉದ್ಯಮಗಳನ್ನು ನಡೆಸಿ, ಸರ್ಕಾರ ತನ್ನ ಖರ್ಚಿಗೆ ಅವುಗಳ ಉತ್ಪತ್ತಿಯನ್ನು ಬಳಿಸಿಕೊಳ್ಳಬಹುದು. ಅಂದರೆ ಸರ್ಕಾರ ಈ ಉದ್ಯಮಗಳ ಗೇಣಿದಾರನಷ್ಟೇ; ಗೇಣಿದಾರನು ಉತ್ಪಾದನೆಯನ್ನು ಮಾರಿಕೊಳ್ಳಬಹುದೇ ಹೊರತು, ಜಮೀನಿನನ್ನೇ ಮಾರಾಟ ಮಾಡಲು ಸಾಧ್ಯವಿಲ್ಲ.

ಸಾರ್ವಜನಿಕರ ಆಸ್ತಿಯನ್ನು ವಿವೇಚನೆಯಿಲ್ಲದೆ ಲೂಟಿ ಮಾಡುತ್ತಿರುವ ಸರ್ಕಾರದ ಈ ದುಷ್ಟ ಹುನ್ನಾರವನ್ನುಈ ಸಮಾವೇಶವು ಖಂಡಿಸುತ್ತದೆ. ಮತ್ತು ಜನವಿರೋಧಿ ಮತ್ತು ರಾಷ್ಟ್ರವಿರೋಧಿಯಾಗಿರುವ ಸರ್ಕಾರದ ಅನೀತಿಯನ್ನು ಸೋಲಿಸಲು ಶತಾಯ–ಗತಾಯ ಶ್ರಮಿಸಲು ಕಟಿಬದ್ಧವಾಗಿದೆ. ಸಾರ್ವಜನಿಕರ ಆಸ್ತಿಯ ಖಾಸಗೀಕರಣವು ನಮ್ಮ ಭಾರತದ ಸಂವಿಧಾನದಲ್ಲಿ ಅಂತಃಗತವಾಗಿರುವ ಸಾಮಾಜಿಕ ನ್ಯಾಯದ ಪರಿಕಲ್ಪನೆಯ ಮೇಲೆ ಎಸಗಿದ ನೇರ ದಾಳಿಯಾಗಿದೆ. ಆದ್ದರಿಂದ, ನಮ್ಮ ದೇಶದ ಜನತೆ, ಕಾರ್ಮಿಕರು, ಮಹಿಳೆಯರು, ಯುವಕರು – ಪ್ರತಿಯೊಬ್ಬರೂ ಸರ್ಕಾರದ ಈ ನೀತಿಯನ್ನು ವಿರೋಧಿಸಿ, ನಮ್ಮ ಹೋರಾಟವನ್ನು ಬೆಂಬಲಿಸಬೇಕೆಂದು ಈ ಸಮಾವೇಶವು ಕರೆ ನೀಡುತ್ತದೆ.

ಈ ಸಮಾವೇಶದ ಕರೆಯನ್ನು ಸಾಕ್ಷಾತ್ಕಾರಗೊಳಿಸಲು, ಜನತೆಯ ಆಸ್ತಿಯನ್ನು ಸಂರಕ್ಷಿಸಲು – ದೇಶದ ಜನರೆಲ್ಲರೂ ಬೆಂಬಲಿಸಿ, ಎಲ್ಲಾ ಹೋರಾಟದ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಬೇಕೆಂದು ಈ ಮೂಲಕ ವಿನಂತಿಸುತ್ತೇವೆ. **ಸಾರ್ವಜನಿಕ ವಲಯ ಉಳಿಸಿ : ಭಾರತ ಉಳಿಸಿ** ಸಮಾವೇಶದ ತೀರ್ಮಾನದ ಪ್ರಕಾರ ಈ ಕೆಳಕಂಡ ಹೋರಾಟದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ :


1. 2017ರ ಏಪ್ರಿಲ್ 1ರಿಂದ ಬೆಂಗಳೂರು ಮಹಾನಗರದ 198 ವಾರ್ಡುಗಳಲ್ಲಿ ಮತ್ತು ಕೋಲಾರ, ಮೈಸೂರು, ಮತ್ತು ಶಿವಮೊಗ್ಗದ ಎಲ್ಲಾ ತಾಲೂಕುಗಳಲ್ಲಿ ಜನ–ಜಾಗೃತಿ ಪ್ರಚಾರಾಂದೋಳನ.
2. **"ಸಾರ್ವಜನಿಕ ವಲಯ ಉಳಿಸಿ, ಭಾರತ ಉಳಿಸಿ"** ವಿಷಯ ಕೇಂದ್ರೀಕರಿಸಿ, ಎಲ್ಲಾ ಜನವಿಭಾಗಗಳನ್ನು ತೊಡಗಿಸಿ 2017ರ ಮೇ ದಿನವನ್ನು ಆಚರಿಸುವುದು; ಬೆಂಗಳೂರು ಮತ್ತು ಕರ್ನಾಟಕದ ಎಲ್ಲಾ ನಗರ–ಪಟ್ಟಣಗಳಲ್ಲಿ ಬೃಹತ್ ಮೆರವಣಿಗೆ.
3. **"ಸಾರ್ವಜನಿಕ ವಲಯ ಉಳಿಸಿ, ಭಾರತ ಉಳಿಸಿ"** ಸಂದೇಶ ಸಾರುವ ವಾಹನ ಜಾಥಾ ಮೇ 3ರಿಂದ ಮೇ15ರವರೆಗೆ.
4. ಎಲ್ಲಾ ಕೈಗಾರಿಕೆಗಳಲ್ಲಿ ಮೇ 10ರಂದು ಮುಷ್ಕರದ ನೋಟಿಸ್ ಜಾರಿ ಮಾಡುವುದು.
5. ಬೆಂಗಳೂರು, ಮೈಸೂರು, ಕೆಜಿಎಫ್, ಮತ್ತು ಶಿವಮೊಗ್ಗದಲ್ಲಿ ಮೇ 25ರಂದು ಬೃಹತ್ ಹರತಾಳ ಮತ್ತು ಸಾರ್ವತ್ರಿಕ ಪ್ರತಿಭಟನೆ.

ಬಿಬಿಎಂಪಿ : ಎಲ್ಲದರಲ್ಲೂ ಕಳಪೆ ಪ್ರಗತಿ



ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು (ಬಿಬಿಎಂಪಿ) ಮಾರ್ಚ್ 25ರಂದು 2017–18ನೇ ಸಾಲಿನ ಬಜೆಟ್ ಮಂಡಿಸಲು ಸಿದ್ಧತೆ ನಡೆಸುತ್ತಿರುವಾಗಲೇ, ಎಲ್ಲಾ ರಂಗಗಳಲ್ಲೂ ಕಳಪೆ ಪ್ರಗತಿಯ ಚಿತ್ರಣ ಎದುರಾಗುತ್ತಿದೆ. ಒಟ್ಟಾರೆ ಸಂಪನ್ಮೂಲ ಕ್ರೋಢೀಕರಣದಲ್ಲಿ, ಆಸ್ತಿ ತೆರಿಗೆ ಸಂಗ್ರಹದಲ್ಲಿ, ಅದರ ಬಳಕೆಯಲ್ಲಿ, ಕಲ್ಯಾಣ . ಕಾರ್ಯಕ್ರಮಗಳ ಜಾರಿಯಲ್ಲಿ, ಗುತ್ತಿಗೆದಾರರ ಬಾಕಿ ಪಾವತಿಯಲ್ಲಿ ಹೀಗೆ ಎಲ್ಲಾ ರಂಗಗಳಲ್ಲೂ ಹಿಂದೆ ಬಿದ್ದಿದೆ.

ಬಿಬಿಎಂಪಿಯು 2016–17ನೇ ಸಾಲಿನಲ್ಲಿ 9,353.1 ಕೋಟಿ (ಪರಿಷ್ಕೃತ ಅಂದಾಜಿನ ಪ್ರಕಾರ) ಗಾತ್ರದ ಬಜೆಟ್ ಮಂಡಿಸಿತ್ತು. 9351.03 ಕೋಟಿ ಆದಾಯ ನಿರೀಕ್ಷೆ ಮಾಡಲಾಗಿತ್ತು. ಆದ–ರೆ, ಇದುವರೆಗೆ 6 ಸಾವಿರ ಕೋಟಿಯಷ್ಟು ಸಂಪನ್ಮೂಲ ಕ್ರೋಢೀಕರಣ ಮಾತ್ರ ಸಾಧ್ಯವಾಗಿದೆ. ಇದರಲ್ಲಿ ರಾಜ್ಯ ಸರ್ಕಾರ ಮಂಜೂರು ಮಾಡಿರುವ 3,800 ಕೋಟಿ ಅನುದಾನವೂ ಸೇರಿದೆ. 'ರಾಜ್ಯ ಸರ್ಕಾರ ಎರಡು ವರ್ಷಗಳಿಗೆ (2016–17 ಹಾಗೂ 2017–18ನೇ) 7,300 ಕೋಟಿ ಅನುದಾನ ನೀಡುವುದಾಗಿ ಭರವಸೆ ನೀಡಿದೆ. ಆದರೆ, ಪಾಲಿಕೆಗೆ ಇದುವರೆಗೆ ಬಿಡುಗಡೆಯಾಗಿರುವುದು 1,327 ಕೋಟಿ ಮಾತ್ರವಂತೆ. ಈ ವರ್ಷ 2,100 ಕೋಟಿ ಆಸ್ತಿ ತೆರಿಗೆ ಸಂಗ್ರಹವಾಗಿದೆ. ಇದರಲ್ಲಿ ಕಳೆದ ಸಾಲಿನ ಬಾಕಿ ತೆರಿಗೆ ಹಾಗೂ ಸೆಸ್ ಕೂಡಾ ಸೇರಿದೆ. ಈ ವರ್ಷದ ಆಸ್ತಿ ತೆರಿಗೆಯ ಪಾಲು – 1,900 ಕೋಟಿ ಮಾತ್ರ ಎಂದು ವರದಿಯಾಗಿದೆ.



ಕಳೆದ ಸಾಲಿನ ಬಜೆಟ್ನಲ್ಲಿ ಮೀಸಲಿಟ್ಟಿದ್ದ ಅನುದಾನಗಳ ಪೈಕಿ ಶೇ 40ರಷ್ಟೂ ಬಳಕೆಯಾಗಿಲ್ಲ. ಪೌರ ಕಾರ್ಮಿಕರಿಗೆ ಬಿಸಿಯೂಟ ಕಾರ್ಯಕ್ರಮವೊಂದನ್ನು ಹೊರತುಪಡಿಸಿ ಬಹುತೇಕ ಕಲ್ಯಾಣ ಕಾರ್ಯಕ್ರಮಗಳು ಇನ್ನೂ ಆರಂಭವಾಗಿಲ್ಲ. ಆರಂಭವೇ ಆಗದ ಕಾರ್ಯಕ್ರಮಗಳ ಪಟ್ಟಿ ದೊಡ್ಡದಿದೆ – ಕೆರೆಗಳ ಅಭಿವೃದ್ಧಿ ಮತ್ತು ನಿರ್ವಹಣೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ವಸತಿ ಒದಗಿಸುವ 'ನಮ್ಮ ಮನೆ' ಕಾರ್ಯಕ್ರಮ, ಹಿರಿಯ ನಾಗರಿಕರಿಗೆ ಮನೆ ನಿರ್ಮಿಸಿಕೊಡುವ 'ಸಂಧ್ಯಾ ಕುಟೀರ' ಕಾರ್ಯಕ್ರಮ, ಮಹಿಳೆಯರಿಗಾಗಿ ವಿಶೇಷ ಅಭಿವೃದ್ಧಿ ಕಾರ್ಯಕ್ರಮ, ಬೀದಿ ವ್ಯಾಪಾರಿಗಳಿಗಾಗಿ ಪ್ರತ್ಯೇಕ ಮಾರುಕಟ್ಟೆ ವಲಯ, ಬಿಬಿಎಂಪಿ ಶಾಲೆಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ ಇತ್ಯಾದಿ.

ಬಳಕೆಯಾದ ಅನುದಾನದಲ್ಲಿ ಶೇ. 62ರಷ್ಟು (ಅಂದರೆ ಸುಮಾರು 2282 ಕೋಟಿ ರೂ.) ಬಾಕಿ ಇರುವ ಗುತ್ತಿಗೆದಾರರ ಬಿಲ್ ಪಾವತಿಗೆ ಖರ್ಚು ಮಾಡಲಾಗಿದೆ. ಇದರಲ್ಲಿ ಕೇವಲ ಶೇ. 14ರಷ್ಟು ಮಾತ್ರ 2016–17ರ ಕಾಮಗಾರಿಗಳಿಗೆ ಖರ್ಚು ಮಾಡಲಾಗಿದೆ. ಇದಾದ ಮೇಲೂ ಸುಮಾರು 1700 ಕೋಟಿ ರೂ.ಗಳಷ್ಟು ಗುತ್ತಿಗೆದಾರರ ಬಿಲ್ ಪಾವತಿ ಇನ್ನೂ ಬಾಕಿ ಇದೆ, ಎಂದು ಜನಾಗ್ರಹ ವೆಬ್ ಸೈಟಿನಲ್ಲಿ ಹಾಕಲಾಧ ಬಿಲ್ ರಿಜಿಸ್ಟರ್ ನ ವಿಶ್ಲೇಷಣೆ ಮಾಡಿ ಹೇಳಿದೆ.

ಇವು ಬಿಬಿಎಂಪಿಯ ಅಧಿಕೃತ ಅಂಕಿಸಂಖ್ಯೆಗಳ ಮೇಲೆ ಆಧಾರಿತವಾದವುಗಳಲ್ಲ. ಆದರೆ ವಾಸ್ತವಕ್ಕೆ ಹತ್ತಿರವಾಗಿರುವಂತಹುದು. ಬಿಬಿಎಂಪಿಯ ಬಜೆಟ್ ಹೊರ ಬಿದ್ದ ಮೇಲೇನೇ ಪೂರ್ಣ ಚಿತ್ರ ಸಿಗಲಿದೆ.

ಕಾವೇರಿ : 2,000 ಕ್ಯುಸೆಕ್ ನೀರು ಬಿಡಲು ಸುಪ್ರೀಂ ಆದೇಶ

ಕರ್ನಾಟಕದಿಂದ ತಮಿಳುನಾಡಿಗೆ ನಿತ್ಯ 2,000 ಕ್ಯುಸೆಕ್ ನೀರು ಹರಿಸುವಂತೆ ಕಳೆದ ಜ.4ರಂದು ನೀಡಿರುವ ಆದೇಶವನ್ನು ಮುಂದುವರಿಸುವಂತೆ ಸುಪ್ರೀ ಕೋರ್ಟು ಸೂಚಿಸಿತು. ಮಾರ್ಚ್ 21ರಂದು ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಮೂರ್ತಿ ದೀಪಕ್ ಮಿಶ್ರಾ ನೇತೃತ್ವದ ತ್ರಿಸದಸ್ಯ ಪೀಠ, ಈ ಆದೇಶ ನೀಡಿದೆ.

"ಕರ್ನಾಟಕ ಕಾವೇರಿ ಕಣಿವೆ ವ್ಯಾಪ್ತಿಯಲ್ಲಿ ಏತ ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಂಡಿದ್ದು, ಅವುಗಳಿಗೂ ತಡೆ ನೀಡಬೇಕು. ಕರ್ನಾಟಕವು ನಿತ್ಯ 2,000 ಕ್ಯುಸೆಕ್ ನೀರು ಬಿಡುವಂತೆ ಕೋರ್ಟ್ ನೀಡಿರುವ ಆದೇಶ ಪಾಲಿಸಿಲ್ಲ. ಕುಡಿಯುವ ನೀರಿನ ಸಮಸ್ಯೆ ಇರುವುದರಿಂದ ಏಪ್ರಿಲ್ ಮಧ್ಯಭಾಗದಲ್ಲಿ ನೀರು ಹರಿಸುವಂತೆ ಸೂಚಿಸಬೇಕು" ಎಂದು ತಮಿಳುನಾಡು ಪರ ವಕೀಲ ಶೇಖರ್ ನಾಫಡೆ ಕೋರ್ಟ್ಗೆ ಮನವಿ ಮಾಡಿದರು.

"ಕೋರ್ಟ್ ಆದೇಶವನ್ನು ಕರ್ನಾಟಕ ಪಾಲಿಸಿದೆ. ತೀವ್ರ ಬರ ಆವರಿಸಿದೆ. ಕುಡಿಯಲು ನಮಗೇ ನೀರಿಲ್ಲ. ಹೀಗಿರುವಾಗ ತಮಿಳುನಾಡಿಗೆ ನೀರು ಹರಿಸುವುದು ಅಸಾಧ್ಯ" ಎಂದು ಕರ್ನಾಟಕ ಪರ ವಕೀಲ ಫಾಲಿ ನಾರಿಮನ್ ವಿವರಿಸಿದರು.

ಕಾವೇರಿ ಜಲವಿವಾದ ನ್ಯಾಯಮಂಡಳಿ ನೀಡಿರುವ ಐತೀರ್ಪನ್ನು ಪ್ರಶ್ನಿಸಿ ಕಣಿವೆ ವ್ಯಾಪ್ತಿಯ ರಾಜ್ಯಗಳು ಸಲ್ಲಿಸಿರುವ ಸಿವಿಲ್ ಅರ್ಜಿಗಳ ಅಂತಿಮ ವಿಚಾರಣೆಯನ್ನು ಜುಲೈ 11ರಿಂದ ಆರಂಭಿಸಲು ಸಹ ಸುಪ್ರೀಂ ಕೋರ್ಟ್ ನಿರ್ಧರಿಸಿದೆ.




ಆರೋಗ್ಯ ಇಲಾಖೆಗೆ 'ಯಶಸ್ವಿನಿ' ಸೇರಿಸಲು ವಿರೋಧ

ಸಹಕಾರ ಇಲಾಖೆಯಲ್ಲಿ ಈಗ ಇದ್ದು ಚೆನ್ನಾಗಿ ನಡೆಯುತ್ತಿರುವ 'ಯಶಸ್ವಿನಿ' ಆರೋಗ್ಯ ಯೋಜನೆಯನ್ನು ಆರೋಗ್ಯ ಇಲಾಖೆಯ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಅಡಿಯಲ್ಲಿ ತರುವ ಸರಕಾರದ ನಿರ್ಣಯಕ್ಕೆ ತೀವ್ರ ವಿರೋಧ ವ್ಯಕ್ತವಾಗಿದೆ. 'ಯಶಸ್ವಿನಿ' ಯೋಜನೆಯ ಫಲಾನುಭವಿಗಳಾದ ರೈತರು, ಸಹಕಾರಿ ಸಂಘಗಳು, ಸಹಕಾರ ಇಲಾಖೆ ಮತ್ತು ಹಲವು ಶಾಸಕರು ಸಹ ಈ ನಡೆಯನ್ನು ವಿರೋಧಿಸಿದ್ದಾರೆ.

ಸಹಕಾರ ಇಲಾಖೆಯಲ್ಲಿ 2003ರಿಂದ ಚೆನ್ನಾಗಿ ನಡೆಯುತ್ತಿರುವ ಮತ್ತು ಲಕ್ಷಾಂತರ ರೈತರಿಗೆ ಪ್ರಯೋಜನ ವಾಗಿರುವ ದೇಶದ ಅತಿ ದೊಡ್ಡ ಯಶಸ್ವಿ ಮಾದರಿ ಯೋಜನೆ ಆಗಿರುವ 'ಯಶಸ್ವಿನಿ' ಯನ್ನು ಇಷ್ಟು ತರಾತುರಿಯಲ್ಲಿ ಆರೋಗ್ಯ ಇಲಾಖೆಯ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಅಡಿಯಲ್ಲಿ ತರುವ ಅಗತ್ಯವೇನು ಎಂದು ಅವರು ಪ್ರಶ್ನಿಸುತ್ತಿದ್ದಾರೆ. ಕಳೆದ 3 ವರ್ಷಗಳಲ್ಲಿ ಸದಸ್ಯರ ಸಂಖ್ಯೆ 40.4 ಲಕ್ಷದಿಂದ 43.71 ಲಕ್ಷಕ್ಕೆ ಏರಿದೆ. ಯಶಸ್ವಿನಿ ಸದಸ್ಯರ ಮೇಲೆ ಮಾಡಿದ ಖರ್ಚು 162.7 ಕೋಟಿ ರೂ.ನಿಂದ 293.4 ಕೋಟಿ ರೂ. ಗೆ ಏರಿತ್ತು.

ಯಶಸ್ವಿನಿ 823 ರೀತಿಯ ಶಸ್ತ್ರಚಿಕಿತ್ಸೆಗಳಿಗೆ ಕುಟುಂಬವೊಂದಕ್ಕೆ ರೂ. 2 ಲಕ್ಷ ಕ್ಯಾಶ್ ಲೆಸ್ ಚಿಕಿತ್ಸೆ ಒದಗಿಸುವ ಯೋಜನೆ. ಕುಟುಂಬದ ಸದಸ್ಯರೊಬ್ಬರಿಗೆ ರೂ. 300 ಸದಸ್ಯತ್ವ ಶುಲ್ಕವಿರುವ ಈ ಯೋಜನೆ ಜನಪ್ರಿಯವಾಗಿದೆ. ಆದ್ದರಿಂದ ಅದರ ಸದಸ್ಯತ್ವ ಏರುತ್ತಲೇ ಇದೆ.

ಆದರೆ ಆರೋಗ್ಯ ಇಲಾಖೆಯಡಿಯಲ್ಲಿ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಅಡಿಯಲ್ಲಿ ನಡೆಯುತ್ತಿರುವ ಯೋಜನೆಗಳು ಹಲವು ಸಮಸ್ಯೆಗಳನ್ನು ಎದುರಿಸುತ್ತಿವೆ. ಇವುಗಳಲ್ಲಿ – ಬಿಪಿಎಲ್ ಕುಟುಂಬಗಳಿಗೆ ಇರುವ ವಾಜಪೇಯಿ ಆರೋಗ್ಯಶ್ರೀ, ಎಪಿಎಲ್ ಕುಟುಂಬಗಳಿಗೆ ಇರುವ ರಾಜೀವ್ ಆರೋಗ್ಯ ಭಾಗ್ಯ, ಸರಕಾರಿ ನೌಕರರಿಗೆ ಇರುವ ಜ್ಯೋತಿ ಸಂಜೀವಿನಿ, ಅಫಘಾತಕ್ಕೆ ಬಲಿಯಾದವರಿಗೆ ಇರುವ ಮುಖ್ಯಮಂತ್ರಿ ಸಾಂತ್ವನ, ಕೇಂದ್ರದ ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನಾ ಸೇರಿವೆ. ಕಳೆದ ಕೆಲವು ತಿಂಗಳುಗಳಿಂದ ಕೆಲವು ಆಸ್ಪತ್ರೆಗಳು ಸರಕಾರದಿಂದ ಹಣ ಪಾವತಿ ವಿಳಂಬವಾಗುತ್ತಿದೆ ಎಂದು ಆಪಾದಿಸಿ ಈ ಯೋಜನೆಯಡಿ ರೋಗಿಗಳನ್ನು ಆಸ್ಪತ್ರೆಗೆ ಸೇರಿಸುತ್ತಿಲ್ಲ. ಈ ಯೋಜನೆಗಳ ಬಿಕ್ಕಟ್ಟಿಗೂ, ಯಶಸ್ವಿನಿ ಬಗೆಗೆ ಈ ನಡೆಗೂ ಏನಾದರೂ ಸಂಬಂಧವಿದೆಯೇ ಎಂದು ಹಲಲವರು ಸಂಶಯ ಪಡುತ್ತಿದ್ದಾರೆ.




ಕೃಪೆ: ಪಿ. ಮಹಮ್ಮದ್, ವಿಜಯಕರ್ನಾಟಕ

"ನಮ್ಮ ಕ್ಯಾಂಟೀನ್" ಇಸ್ಕಾನ್ ಗೆ?



ಜೂನ್ 1 ರಿಂದ ಆರಂಭವಾಗಬೇಕಿರುವ "ನಮ್ಮ ಕ್ಯಾಂಟೀನ್" ಇಸ್ಕಾನ್ ಗೆ ನಡೆಸಲು ಕೊಡಲಿದೆಯಂತೆ. ಈಗಾಗಲೇ ಈ ಬಗ್ಗೆ ಮಾತುಕತೆ ನಡೆಯುತ್ತಿದೆ. ಕೆಲವು ಶರತ್ತುಗಳಿಗೆ ಸರಕಾರ ಒಪ್ಪಿದರೆ ಇಸ್ಕಾನ್ "ನಮ್ಮ ಕ್ಯಾಂಟೀನ್" ನಡೆಸಲು ಒಪ್ಪಿಕೊಂಡಿದೆಯಂತೆ. ಬಿಸಿಯೂಟದ ಖಾಸಗೀಕರಣದ ಸ್ಕೆಚ್ ನಲ್ಲಿ ಭಾಗವಹಿಸಿರುವ ಇಸ್ಕಾನ್ ಗೆ ತಲೆ ಹಾಕಿರುವುದು ಆಶ್ಚರ್ಯಕರವೇನಲ್ಲ. ಬಿಸಿಯೂಟದ ಸರಕಾರಿ ಅನುದಾನವನ್ನೂ ಗುಳುಂ ಮಾಡಿ, ಬಡ ಶಾಲಾ ಮಕ್ಕಳಿಗೆ ಉಚಿತ ಊಟ ಹಾಕುತ್ತೇವೆಂದು ವಿದೇಶಗಳಿಂದ ಹಣ ಸಂಗ್ರಹಿಸುವಂತೆ, ಇಸ್ಕಾನ್ "ನಮ್ಮ ಕ್ಯಾಂಟೀನ್" ಗೂ ಬಡಜನರಿಗೆ ಕಡಿಮೆ ಖರ್ಚಿನಲ್ಲಿ ಆಹಾರ ಕೊಡುತ್ತೇವೆಂದು ಸ್ಕೆಚ್ ಹಾಕಿದ್ದರೆ ಆಶ್ಚರ್ಯವಿಲ್ಲ. ಸಿದ್ಧರಾಮಯ್ಯ ಸರಕಾರ "ನಮ್ಮ ಕ್ಯಾಂಟೀನ್" ಇಸ್ಕಾನ್ ಗೆ ಯಾಕೆ, ಬಿಜೆಪಿ ಕೇಂದ್ರ ಮಂತ್ರಿ ಅನಂತ್ ಕುಮಾರ್ ಅವರ "ಅದಮ್ಯ ಫೌಂಡೇಶನ್" ಗೆ ವಹಿಸಿ ಕೊಟ್ಟರೂ ಆಶ್ಚರ್ಯ ಪಡಬೇಕಾಗಿಲ್ಲ !

'ಸಾಲ ಶಿಸ್ತು' ರೈತರಿಗೆ ಮಾತ್ರ, ಉದ್ಯಮಿಗಳಿಗೆ ಬೇಕಿಲ್ಲ! ಕಾರ್ಪೊರೇಟ್ ಸಾಲಬಾಕಿಯ ಹೊರೆ ಬ್ಯಾಂಕ್ ನೌಕರರ ಮೇಲೆ!



ವೇದರಾಜ ಎನ್.ಕೆ.

ಈ ವಾರದ ಎರಡು ಸುದ್ದಿಗಳನ್ನು ಗಮನಿಸಿ. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ(ಎಸ್‌ಬಿಐ)ದ ಅಧ್ಯಕ್ಷೆ ರೈತರ ಸಾಲ ಮನ್ನಾ 'ಸಾಲ ಶಿಸ್ತ'ನ್ನು ಛಿದ್ರಗೊಳಿಸುತ್ತದೆ ಎಂದು ಮುಂಬೈಯಲ್ಲಿ ಉದ್ದಿಮೆದಾರರ ಒಂದು ಸಭೆಯಲ್ಲಿ ಹೇಳಿದ್ದಾರೆ. ಅದೇ ವೇಳೆಯಲ್ಲಿ ಎನ್‌ಪಿಎಗಳ, ಅಂದರೆ ದೊಡ್ಡ ಕಾರ್ಪೊರೇಟ್‌ಗಳು ಬೇಕೆಂದೇ ಹಿಂದಿರುಗಿಸದ ಸಾಲಗಳ ಹೊರೆಯಿರುವ ಸಾರ್ವಜನಿಕ ವಲಯದ ಬ್ಯಾಂಕುಗಳು ನೌಕರರ ಸಂಘಗಳು ಮತ್ತು ಐಬಿಎ(ಭಾರತೀಯ ಬ್ಯಾಂಕರುಗಳ ಸಂಘ) ನಡುವೆ ಬ್ಯಾಂಕ್ ಉದ್ದಿಮೆ ಮಟ್ಟದಲ್ಲಿ ಸಹಿ ಹಾಕಿದ ಇತ್ಯರ್ಥಗಳ ಅಡಿಯಲ್ಲಿ ನೌಕರರಿಗೆ ಲಭ್ಯವಿರುವ ಸೌಲಭ್ಯಗಳನ್ನು ಕಡಿತ ಮಾಡಬೇಕು ಎಂದು ಕೇಂದ್ರ ಹಣಕಾಸು ಇಲಾಖೆ 10 ಸಾರ್ವಜನಿಕ ವಲಯದ ಬ್ಯಾಂಕುಗಳಿಗೆ ಇತ್ತೀಚೆಗೆ ಒಂದು ಸಂದೇಶ ಕಳಿಸಿದೆ,

ದೇಶದ 23 ರಾಜ್ಯಗಳಲ್ಲಿ 1.7 ಕೋಟಿ ರೈತರು ಸದಸ್ಯರಾಗಿರುವ ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್)ದ ಪ್ರಧಾನ ಕಾರ್ಯದರ್ಶಿ ಹನ್ನನ್ ಮೊಲ್ಲ ಎಸ್‌ಬಿಐ ಅಧ್ಯಕ್ಷರಿಗೆ ಒಂದು ಬಹಿರಂಗ ಪತ್ರ ಬರೆದು ಎಸ್‌ಬಿಐ ಅಧ್ಯಕ್ಷೆ ಐದು ರಾಜ್ಯಗಳ ವಿಧಾನಸಭಾ ಚುನಾವಣೆಗಳ ಫಲಿತಾಂಶಗಳ ಬೆನ್ನಲ್ಲೇ ಈ ಹೇಳಿಕೆ ನೀಡಿರುವುದು ಪ್ರಧಾನ ಮಂತ್ರಿಗಳನ್ನು ಪಾರು ಮಾಡಲಿಕ್ಕಾಗಿರಬಹುದೇ ಎಂಬ ಸಂದೇಹವನ್ನು ವ್ಯಕ್ತಪಡಿಸಿದ್ದಾರೆ. ಏಕೆಂದರೆ ಮೋದಿ ಮತ್ತು ಅವರ ಪಕ್ಷ ಉತ್ತರಪ್ರದೇಶದಲ್ಲಿ ಅಧಿಕಾರಕ್ಕೆ ಬಂದರೆ ಕೃಷಿಸಾಲಗಳನ್ನು ಮನ್ನಾ ಮಾಡಲಾಗುವುದು ಎಂದು ಭರವಸೆ ಕೊಟ್ಟಿದ್ದರು. (ಆಗಲೇ, ಕೇಂದ್ರ ಹಣಕಾಸು ಮಂತ್ರಿಗಳು ರೈತರ ಸಾಲಮನ್ನಾಕ್ಕೆ ಕೇಂದ್ರದ ನೆರವು ಇಲ್ಲ ಎಂದು ಸ್ಪಷ್ಟಪಡಿಸಿದ್ದಾರೆ!)

ಇನ್ನೊಂದೆಡೆಯಲ್ಲಿ, ಕಾರ್ಪೊರೇಟ್‌ಗಳಿಂದಾಗಿ ಬ್ಯಾಂಕ್‌ಗಳಿಗೆ ಆಗಿರುವ ನಷ್ಟಗಳ ಹೊರೆಯನ್ನು ನೌಕರರ ಮೇಲೆ ದಾಟಿಸುವ ಹುನ್ನಾರ ಸರಕಾರದ್ದು ಎಂದು ಬ್ಯಾಂಕ್ ಎಂಪ್ಲಾಯೀಸ್ ಫೆಡರೇಶನ್‌ಆಫ್ ಇಂಡಿಯ(ಬಿಇಎಫ್‌ಐ) ಪ್ರಧಾನ ಕಾರ್ಯದರ್ಶಿ ಪ್ರದೀಪ್ ಬಿಸ್ವಾಸ್ ಹೇಳಿಕೆಯೊಂದರಲ್ಲಿ ತಿಳಿಸಿದ್ದಾರೆ.

ರೈತರು ಸಾಲಬಲೆಗೆ ಸಿಲುಕಿರುವುದು ತಮ್ಮ ತಪ್ಪಿನಿಂದಾಗಿ ಅಲ್ಲ, ಬದಲಾಗಿ ಸರಕಾರದ ಮತ್ತು ಆರ್‌ಬಿಐ ಮತ್ತು ಎಸ್‌ಬಿಐ ಮುಂತಾದ ಹಣಕಾಸು ಸಂಸ್ಥೆಗಳ ಧೋರಣೆಗಳಿಂದಾಗಿಯೇ ಎಂಬ ಸಂಗತಿಯತ್ತ ಎಐಕೆಎಸ್ ಪ್ರಧಾನ ಕಾರ್ಯದರ್ಶಿಗಳು ಎಸ್‌ಬಿಐ ಅಧ್ಯಕ್ಷರ ಗಮನ ಸೆಳೆದಿದ್ದಾರೆ. ಆದ್ದರಿಂದ ಬೆವರು ಸುರಿಸಿ ದೇಶಕ್ಕೆಲ್ಲ ಆಹಾರ ಉತ್ಪಾದಿಸಿ ಕೊಡುವ ರೈತಾಪಿಗಳನ್ನು ಕಾಪಾಡುವುದು ಅವರು ಆರಿಸಿರುವ ಸರಕಾರದ ಹೊಣೆಗಾರಿಕೆ. ಆದರೆ ಅದರ ಬದಲಾಗಿ ಅವರ 'ಹಣಕಾಸು ಮಾರುಕಟ್ಟೆ ಸುಧಾರಣೆ'ಗಳು ದೊಡ್ಡ ಉದ್ಯಮಿಗಳಿಗೆ ಮತ್ತು ವ್ಯಾಪಾರಸ್ಥರ ಪರವಾಗಿದ್ದು ರೈತರ ವಿರೋಧಿಯಾಗಿವೆ. ತಮ್ಮ ಉತ್ಪಾದನೆಗಳಿಗೆ ಉತ್ಪಾದನಾ ಖರ್ಚುಗಳ ಎಷ್ಟೋ ಪಟ್ಟು ಹೆಚ್ಚು ಬೆಲೆಯಿಡುವಉದ್ಯಮಿಗಳು ಮತ್ತು ಅವನ್ನು ಮಾರಿ ಲಾಭ ಪೇರಿಸುವ ವ್ಯಾಪಾರಸ್ಥರು ರೈತರಿಗೆ ಮಾತ್ರ ಅವರ ಉತ್ಪನ್ನಗಳಿಗೆ ಉತ್ಪಾದನಾ ವೆಚ್ಚವನ್ನೂ ಭರಿಸದ ಬೆಲೆಗಳನ್ನು ಕೊಟ್ಟು ಶೋಷಿಸಲು ಅವಕಾಶವಾಗಿದೆ ಎಂದು ಅವರು ನೆನಪಿಸಿದ್ದಾರೆ.

ಅವರು ಎಂಎಸ್ ಸ್ವಾಮಿನಾಥನ್ ಆಯೋಗದ ಶಿಫಾರಸುಗಳತ್ತವೂ ಎಸ್‌ಬಿಐ ಅಧ್ಯಕ್ಷೆಯ ಗಮನ ಸೆಳೆದಿದ್ದಾರೆ. ಈ ಆಯೋಗ ರೈತರಿಗೆ ಅವರ ಬೇಸಾಯದ ಖರ್ಚಿಗಿಂತ 50% ಹೆಚ್ಚು ಕನಿಷ್ಟ ಬೆಂಬಲ ಬೆಲೆಯನ್ನು ಲಭ್ಯಗೊಳಿಸಲೇ ಬೇಕು ಎಂದು ಖಡಾಖಂಡಿತವಾಗಿ ಹೇಳಿದೆ. 2014ರ ಲೋಕಸಭಾ ಚುನಾವಣೆಗಳ ಘೋಷಣಾ ಪತ್ರದಲ್ಲಿ ಬಿಜೆಪಿ **ಈ ಶಿಫಾರಸನ್ನು ಜಾರಿಗೆ ತರುವ ಭರವಸೆಯನ್ನೂ ನೀಡಿತ್ತು. ಆದರೆ ಈಗ ಎರಡೂವರೆ ವರ್ಷ ಕಳೆದರೂ ಅದರ ಜಾರಿಯ ಬಗ್ಗೆ ಮಾತಾಡುತ್ತಿಲ್ಲ. ರೈತರಿಗೆ ತಮ್ಮ ಕಠಿಣ ಶ್ರಮಕ್ಕೆ ಪ್ರತಿಫಲವಂತೂ ದೂರ, ಅವರಿಗಾಗಿರುವ ಖರ್ಚುಗಳೂ ಸಿಗುತ್ತಿಲ್ಲ. ಇಂತಹ ಪರಿಸ್ಥಿತಿಗಳಲ್ಲಿ ಈ ರೈತರು ಎಂತಹ ಸಾಲಶಿಸ್ತನ್ನು ಅನುಸರಿಸಬೇಕು ಎಂದು ಹನ್ನನ್ ಮೊಲ್ಲ ಎಸ್‌ಬಿಐ ಅಧ್ಯಕ್ಷೆ ಅರುಂಧತಿ ಭಟ್ಟಾಚಾರ್ಯರನ್ನು ಪ್ರಶ್ನಿಸಿದ್ದಾರೆ.**

ಅಷ್ಟೇ ಅಲ್ಲ, ಅವರ ಎಸ್‌ಬಿಐ ಸೇರಿದಂತೆ 29 ಸರ್ಕಾರಿ ಒಡೆತನದ ಬ್ಯಾಂಕುಗಳು 2013ರಿಂದ 2015ರ ಹಣಕಾಸು ವರ್ಷಗಳಲ್ಲಿ ದೊಡ್ಡ ಉದ್ಯಮಿಗಳ ಬಹುದೊಡ್ಡ ಸಾಲಗಳಲ್ಲಿ ಒಟ್ಟು 1.14 ಲಕ್ಷ ಕೋಟಿ ರೂ.ಗಳಷ್ಟು ಮೊತ್ತದ ಸಾಲಗಳನ್ನು ಮನ್ನಾ ಮಾಡಿವೆ. **ಆಗೇಕೆ ನೀವು ಮೌನವಾಗಿದ್ದಿರಿ, ಸಾಲಶಿಸ್ತಿನ ನೆನಪು ಆಗೇಕೆ ನಿಮಗೆ ಆಗಲಿಲ್ಲ ಎಂದು ಎಐಕೆಎಸ್ ಪ್ರಧಾನ ಕಾರ್ಯದರ್ಶಿಗಳು ಎಸ್‌ಬಿಐ ಅಧ್ಯಕ್ಷೆಯನ್ನು ಖಾರವಾಗಿ ಪ್ರಶ್ನಿಸಿದ್ದಾರೆ.**

ಎಸ್‌ಬಿಐ ಅಧ್ಯಕ್ಷರು ಕ್ಷಮೆ ಕೋರಬೇಕು

ರೈತಾಪಿಗಳು, ಅದರಲ್ಲೂ ಬಡ ಮತ್ತು ಸಣ್ಣ ರೈತರು ಸಾಲದ ಹೊರೆಯಿಂದ ದಿವಾಳಿಯಾಗುತ್ತಿದ್ದಾರೆ, ದೊಡ್ಡ ಸಂಖ್ಯೆಯಲ್ಲಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ, ಗ್ರಾಮೀಣ ಪ್ರದೇಶಗಳಿಂದ ನಗರಗಳತ್ತ ದೊಡ್ಡ ಪ್ರಮಾಣದಲ್ಲಿ ವಲಸೆ ಹೋಗುತ್ತಿದ್ದಾರೆ, ಇನ್ನೊಂದೆಡೆಯಲ್ಲಿ ಬಡವರು ಮತ್ತು ಶ್ರೀಮಂತರ ನಡುವಿನ ಆದಾಯ ಕಂದರ ಆಳಗೊಳ್ಳುತ್ತಿದೆ. ಆದರೂ ರೈತರಿಗೆ ಸಾಕಷ್ಟು ಸಾಂಸ್ಥಿಕ ಸಾಲಗಳು ಸಿಗುತ್ತಿಲ್ಲ, ಅವರು ಲೇವಾದೇವಿಗಾರರ ವಿಪರೀತ ಬಡ್ಡಿಗಳ ಸಾಲಗಳಲ್ಲಿ ಸಿಲುಕಬೇಕಾಗುತ್ತಿದೆ.

"ಇಂತಹ ಸನ್ನಿವೇಶದಲ್ಲಿ ಬಡ ಮತ್ತು ಸಣ್ಣ ರೈತರು ಬದುಕುಳಿಯಲು, ಸಾಲಬಲೆಯಿಂದ ಮುಕ್ತವಾಗಲು ಬೆಂಬಲ ಬೇಕಾಗಿದೆ. ಅದರ ಬದಲು ದೇಶದ ಅತಿ ದೊಡ್ಡ ಹಣಕಾಸು ಸಂಸ್ಥೆಯ ಮುಖ್ಯಸ್ಥೆಯಾಗಿ ತಮ್ಮ ವೈಷಮ್ಯಭರಿತ ಟಿಪ್ಪಣಿ ಅತ್ಯಂತ ಆಕ್ಷೇಪಣೀಯ. ಅದನ್ನು ಹಿಂತೆಗೆದುಕೊಳ್ಳಬೇಕಾಗಿದೆ. ನೀವು ಮಾಡಬಹುದಾದ ಕನಿಷ್ಟ ಕೆಲಸವೆಂದರೆ ಈ ಹೇಳಿಕೆಗೆ ಕ್ಷಮೆ ಕೋರುವುದು" ಎಂದು ಎಐಕೆಎಸ್ ಪ್ರಧಾನ ಕಾರ್ಯದರ್ಶಿಗಳು ಎಸ್‌ಬಿಐ ಅಧ್ಯಕ್ಷೆಗೆ ಬರೆದ ಬಹಿರಂಗ ಪತ್ರದಲ್ಲಿ ಹೇಳಿದ್ದಾರೆ.

ಹಣಕಾಸು ಸಂಸ್ಥೆಗಳು ನಮ್ಮ ರೈತರನ್ನು ಉಳಿಸಲು ಮತ್ತು ನಮ್ಮ ಕೃಷಿಯನ್ನು ಮುನ್ನಡೆಸಲು ಹಾಗೂ ನಾವಿಂದು ಕಾಣುತ್ತಿರುವ ಆತ್ಮಹತ್ಯೆಗಳ ಅಲೆಯಿಂದ ರೈತರನ್ನು ಮುಕ್ತಗೊಳಿಸಲು ಸಾಧ್ಯವಿರುವ ಈ ಯುಗದಲ್ಲಿ, ನಾವಂತೂ ನಮ್ಮ ಕೃಷಿಯನ್ನು ಸಮರ್ಥಗೊಳಿಸಲು, ಫಲದಾಯಕಗೊಳಿಸಲು ಮತ್ತು ಲೇವಾದೇವಿಗಾರರ ಅನಗತ್ಯ ಸಾಲಗಳ ಹೊರೆಯಿಂದ ಮುಕ್ತವಾಗಲು ನಮ್ಮ ಹೋರಾಟಗಳನ್ನು ತೀವ್ರಗೊಳಿಸುತ್ತೇವೆ ಎಂದು ಎಐಕೆಎಸ್ ಪ್ರಧಾನ ಕಾರ್ಯದರ್ಶಿಗಳು ಎಸ್‌ಬಿಐ ಅಧ್ಯಕ್ಷರಿಗೆ ಬರೆದ ಬಹಿರಂಗ ಪತ್ರದಲ್ಲಿ ಸ್ಪಷ್ಟಪಡಿಸಿದ್ದಾರೆ.

ಕಾರ್ಪೊರೇಟ್‌ಗಳು ಹಿಂದಿರುಗಿಸದ ಸಾಲಗಳ ಹೊರೆಯನ್ನು ಬ್ಯಾಂಕ್ ನೌಕರರ ಮೇಲೆ ಹೊರಿಸುವ ಹುನ್ನಾರವೂ ಸಾಗದು ಎಂದು ಬಿಇಎಫ್‌ಐನ ಪ್ರಧಾನ ಕಾರ್ಯದರ್ಶಿಗಳು ಕೂಡ ಎಚ್ಚರಿಸಿದ್ದಾರೆ.

ಕಾರ್ಪೊರೇಟ್‌ಗಳ ಸಾಲಬಾಕಿಯನ್ನು ವಸೂಲು ಮಾಡುವ ಯೋಚನೆ ಈ ಸರಕಾರಕ್ಕೆ ಇದ್ದಂತಿಲ್ಲ. ಬದಲಿಗೆ ಅವರಿಗೆ 'ಪುನರ್ರಚನೆ'ಯ ಹೆಸರಲ್ಲಿ ಮತ್ತಷ್ಟು ಸಾಲ ಕೊಡಿಸಲು ಯೋಚಿಸುತ್ತಿದೆ ಎಂದು ಅದರ 'ಇಂದ್ರಧನುಷ್' ಶಿಫಾರಸಿನಿಂದ ತಿಳಿಯುತ್ತದೆ.

ಬ್ಯಾಂಕ್ ನೌಕರರ ಐಕ್ಯತಾ ವೇದಿಕೆ (ಯುಎಫ್‌ಬಿಯು) ಉದ್ದೇಶಪೂರ್ವಕವಾಗಿಯೇ ಸಾಲ ಮರುಪಾವತಿ ಮಾಡದ ವಿಜಯ ಮಲ್ಯ ಮುಂತಾದವರನ್ನು 'ಉದ್ದೇಶಪೂರ್ವಕ ಸುಸ್ತಿದಾರರು' ಎಂದರೆ, ಸರಕಾರದ ಆಗಸ್ಟ್ 2015ರ ಈ ದಸ್ತಾವೇಜು ಅವರನ್ನು 'ಸಹಕರಿಸದ ಸಾಲಗಾರರು' ಎಂದು ಬಹಳ ಸೌಮ್ಯಪದಗಳಲ್ಲಿ ವರ್ಣಿಸಿದೆ ಎಂಬ ಸಂಗತಿಯತ್ತ ಬಿಇಎಫ್‌ಐ ಪ್ರಧಾನ ಕಾರ್ಯದರ್ಶಿ ಪ್ರದೀಪ್ ಬಿಸ್ವಾಸ್ ನೀಡಿರುವ ಹೇಳಿಗೆ ಗಮನ ಸೆಳೆದಿದೆ.

ಈಗಾಗಲೇ ವರದಿಯಾಗಿರುವಂತೆ ಈ ಎನ್‌ಪಿಎಗಳ ಮೊತ್ತ ಮಾರ್ಚ್ 31, 2015 ಮತ್ತು ಮಾರ್ಚ್ 31, 2016ರ ನಡುವೆ ಒಂದೇ ವರ್ಷದಲ್ಲಿ 92.63ಶೇ. (2,78,877 ಕೋಟಿ ರೂ.ಗಳಿಂದ ರೂ. 5,39,956 ಕೋಟಿರೂ.ಗಳಿಗೆ) ಏರಿದೆ. ಮಾರ್ಚ್ 31, 2016 ರ ವೇಳೆಗೆ ಸಾರ್ವಜನಿಕ ವಲಯದ ಬ್ಯಾಂಕುಗಳ ನಿವ್ವಳ ಲಾಭ 1,36,926 ಕೋಟಿ ರೂ. ಇತ್ತು. ಆದರೆ ಮುಖ್ಯವಾಗಿ ಎನ್‌ಪಿಎ ಗಳಿಗಾಗಿ ರೂ. 1,54,100 ಕೋಟಿ ತೆಗೆದಿರಿಸಿದ ಮೇಲೆ ಈ ಬ್ಯಾಂಕುಗಳು ರೂ. 17,992 ಕೋಟಿ ನಷ್ಟಕ್ಕೆ ಇಳಿಯುವಂತಾಗಿದೆ.

ಇಂತಹ ನಷ್ಟಗಳನ್ನು ಹೊಂದಿಸುವ ಹೆಸರಲ್ಲಿ ನೌಕರರ ಸೌಲಭ್ಯಗಳಿಗೆ ಕತ್ತರಿ ಹಾಕಲು ಮೋದಿ ಸರಕಾರ ಯುನೈಟೆಡ್ ಬ್ಯಾಂಕ್, ಯುಕೊ ಬ್ಯಾಂಕ್, ಅಲಹಾಬಾದ್ ಬ್ಯಾಂಕ್, ಇಂಡಿಯನ್ ಓವರ್‌ಸಿಸ್ ಬ್ಯಾಂಕ್, ವಿಜಯ ಬ್ಯಾಂಕ್, ಬ್ಯಾಂಕ್ ಆಫ್ ಇಂಡಿಯ, ಸೆಂಟ್ರಲ್ ಬ್ಯಾಂಕ್, ಆಂಧ್ರ ಬ್ಯಾಂಕ್, ಬ್ಯಾಂಕ್ ಆಫ್ ಮಹಾರಾಷ್ಟ್ರ ಮತ್ತು ದೇನಾ ಬ್ಯಾಂಕ್ ಈ ಹತ್ತು ಬ್ಯಾಂಕುಗಳಿಗೆ ಪತ್ರ ಕಳಿಸಿದೆ ಎಂದು ವರದಿಯಾಗಿದೆ.

ಈ ಮೂಲಕ ಜನಧನ ಖಾತೆಗಳನ್ನು ತೆರೆಯುವಲ್ಲಿ ಮತ್ತು ಇತ್ತೀಚೆಗೆ ನೋಟು ರದ್ಧತಿಯ ಹಿನ್ನೆಲೆಯಲ್ಲಿ ರದ್ದಾದ ನೋಟುಗಳ ವಿನಿಮಯದ ಕೆಲಸದಲ್ಲಿ ಅಗಾಧ ಸೇವೆ ಸಲ್ಲಿಸಿದ ಬ್ಯಾಂಕ್ ನೌಕರರನ್ನು ಕಾರ್ಪೊರೇಟ್‌ಗಳ ಅಪರಾಧಕ್ಕಾಗಿ ಶಿಕ್ಷಿಸಲು ಮುಂದಾಗಿದೆ.

ಆದರೆ ಈ ಹಿಂದೆ ಇಂತಹ ದಾಳಿಗಳನ್ನು ಹಿಮ್ಮೆಟ್ಟಿಸಿರುವ ಅನುಭವ ಇರುವ ಬ್ಯಾಂಕ್ ನೌಕರರ ಆಂದೋಲನ ಈ ದಾಳಿಯನ್ನೂ ಎದುರಿಸುತ್ತದೆ ಎಂದು ಪ್ರದೀಪ್ ಬಿಸ್ವಾಸ್ ಹೇಳಿದ್ದಾರೆ.

ಮಾರ್ಚ್ 21ರಂದು ಪ್ರಕಟವಾಗಿರುವ 2016ರ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಭಾರತದ ಸ್ಥಾನ ಕಳೆದ ವರ್ಷದ 130ರಿಂದ 131 ಕ್ಕೆ ಇಳಿದಿದೆ. ಅದು ಪಾಕಿಸ್ತಾನ, ಕಾಂಗೊ ಮತ್ತು ನಮೀಬಿಯಾಗಳೊಂದಿಗೆ 'ಮಧ್ಯಮ ಮಾನವ ಅಬಿವೃದ್ಧಿ'ಯ ವಿಧದಲ್ಲಿ ಇದೆ. ಸಾರ್ಕ್ ದೇಶಗಳಲ್ಲಿ ಎರಡು ದೇಶಗಳು ಭಾರತಕ್ಕಿಂತ ಮೇಲಿವೆ–ಶ್ರೀಲಂಕ–73 ಮತ್ತು ಮಾಲ್ದೀವ್ಸ್–105. ಇವೆರಡೂ 'ಉನ್ನತ ಮಾನವ ಅಭಿವೃದ್ಧಿ' ವಿಧದಲ್ಲಿವೆ.

–ಸುದ್ದಿ



ವ್ಯಂಗ್ಯಚಿತ್ರ: ಗೋಕುಲ್, ಡೆಕ್ಕನ್ ಕ್ರಾನಿಕಲ್

ಭಗತ್‌ಸಿಂಗ್ ಹೆಸರಿಡಿ ಎಂದ ವಿದ್ಯಾರ್ಥಿ–ಯುವಜನರಿಗೆ ಹುತಾತ್ಮ ದಿನದ ಪೋಲೀಸ್ ದೊಣ್ಣೆಯೇಟು

ಮಾರ್ಚ್ 23ರಂದು, ಪ್ರಧಾನ ಮಂತ್ರಿಗಳು 86 ವರ್ಷಗಳ ಹಿಂದೆ ಬ್ರಿಟಿಶರ ನೇಣುಗಂಬಗಳನ್ನೇರಿದ ಭಗತ್‌ಸಿಂಗ್, ರಾಜಗುರು ಮತ್ತು ಸುಖ್ಯಯದೇವ್ ಅವರನ್ನು ನೆನಪಿಸಿಕೊಳ್ಳುತ್ತ ಅವರ ಧೈರ್ಯ ಮತ್ತು ತ್ಯಾಗವನ್ನು ಭಾರತ ಎಂದೂ ಮರೆಯಲು ಸಾಧ್ಯವಿಲ್ಲ ಎಂದು ಟ್ವೀಟ್ ಮಾಡುತ್ತಿದ್ದರೆ, ಅತ್ತ ಹರ್‍ಯಾಣದಲ್ಲಿ ಅವರ ಪಕ್ಷದ ಸರಕಾರದ ಪೋಲೀಸರು ಚಂಡೀಗಡ ವಿಮಾನ ನಿಲ್ದಾಣಕ್ಕೆ ಭಗತ್ ಸಿಂಗ್ ಹೆಸರಿಡಿ ಎಂದು ಆಗ್ರಹಿಸುತ್ತಿದ್ದ ವಿದ್ಯಾರ್ಥಿ–ಯುವಜನರ ಮೇಲೆ ಲಾಠೀ ಪ್ರಹಾರ ಮಾಡಿದೆ.

ಚಂಡೀಗಡದ ವಿಮಾನ ನಿಲ್ದಾಣಕ್ಕೆ ಶಹೀದ್–ಎ–ಆಲಂ ಭಗತ್‌ಸಿಂಗ್ ವಿಮಾನ ನಿಲ್ದಾಣ ಎಂದು ಹೆಸರಿಡಬೇಕು ಎಂಬುದಕ್ಕೆ ಪಂಜಾಬ್ ಸರಕಾರ ಒಪ್ಪಿತ್ತು. ಆದರೆ ಹರ್ಯಾಣ ಸರಕಾರ ಇದ–ಕ್ಕೆ ಒಪ್ಪಿರಲಿಲ್ಲ. ಅದು ಈ ಬಹಳೇನೂ ಪರಿಚಿತರಲ್ಲದ ಆರೆಸ್ಸೆಸ್ ಮುಖಂಡರೊಬ್ಬರ ಹೆಸರು ಇಡಬಯಸುತ್ತಿದೆ. ಚಂಡೀಗಡ ಅವಿಭಜಿತ ಪಂಜಾಬ್ ರಾಜ್ಯದ ರಾಜಧಾನಿಯಾಗಿದ್ದು, ಈಗ ಈ ಎರಡೂ ರಾಜ್ಯಗಳ ರಾಜಧಾನಿ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಎಸ್‌ಎಫ್‌ಐ ಮತ್ತು ಡಿವೈಎಫ್‌ಐನ 'ಶಹೀದ್ ಸಂಘರ್ಷ್ ಜಾಥಾ' ಕಳೆದ ಕೆಲವು ದಿನಗಳಿಂದ ಉತ್ತರ ಭಾರತದ ಪಂಜಾಬ್, ಹರ್ಯಾಣ, ರಾಜಸ್ತಾನ ಮತ್ತು ಹಿಮಾಚಲ ಪ್ರದೇಶದಲ್ಲಿ ಸಂಚರಿಸಿ ತೀವ್ರ ಪ್ರಚಾರಾಂದೋಲನ ನಡೆಸುತ್ತಿದೆ. ಅದು ಚಂಡೀಗಡ ತಲುಪಿದಾಗ ಚಂಡೀಗಡ ಮತ್ತು ಹರ್ಯಾಣದ 500 ಪೋಲಿಸರು ಜಲ ಫಿರಂಗಿ ಮತ್ತು ದೊಣ್ಣೆಗಳೊಂದಿಗೆ 'ಸ್ವಾಗತಿಸಿದರು'!

ಮಾರ್ಚ್ 23ರಂದು ಸಿಪಿಐ(ಎಂ)ನ ರಿತಬೃತ ಬ್ಯಾನರ್ಜಿ ಈ ವಿಷಯುವನ್ನು ರಾಜ್ಯಸಭೆಯಲ್ಲಿ ಎತ್ತಿದರು. ಪ್ರತಿಪಕ್ಷಗಳ ಸದಸ್ಯರು ಅವರನ್ನು ಬೆಂಬಲಿಸಿದಾಗ ಸಂಸದೀಯ ವ್ಯವಹಾರಗಳ ರಾಜ್ಯಮಂತ್ರಿಗಳು ಭಗತ್‌ಸಿಂಗ್ ಹೆಸರಿಡಬಾರದು ಎಂದು ಯಾರೇನೂ ಹೇಳಿಲ್ಲ ಎಂದರು. ಹಾಗಿದ್ದರೆ ಚಂಡೀಗಡ ವಿಮಾನ ನಿಲ್ದಾಣದ ನಾಮಕರಣಕ್ಕೆ ಅಷ್ಟೊಂದು ವಿಳಂಬವೇಕೆ ಎಂದು ಮಾತ್ರ ಹೇಳಲಿಲ್ಲ.

ಮಾರ್ಚ್ 20ರಂದು ಪ್ರಕಟವಾದ ಜಾಗತಿಕ ಆನಂದ ಸೂಚ್ಯಂಕದಲ್ಲಿ ಭಾರತದ ಸ್ಥಾನ 155 ದೇಶಗಳಲ್ಲಿ 122ನೆಯದ್ದು. ಕಳೆದ ವರ್ಷ ಇದು 118 ಇತ್ತು. ಯುದ್ಧಗ್ರಸ್ತ ಅಫಘಾನಿಸ್ತಾನವನ್ನು ಬಿಟ್ಟು ಬೇರೆಲ್ಲ ನಮ್ಮ ನೆರೆ ದೇಶಗಳು ಈ ಸೂಚ್ಯಂಕದಲ್ಲಿ ಭಾರತಕ್ಕಿಂತ ಮೇಲಿವೆ. ಪಾಕಿಸ್ತಾನ ಕ್ಕೆ 80ನೇ ಸ್ಥಾನ, ಭೂತಾನ–97, ನೇಪಾಳ–99, ಬಾಂಗ್ಲಾದೇಶ್–110 ಮತ್ತು ಶ್ರೀಲಂಕ–120.

–ಸುದ್ದಿ



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ ಫೇಸ್‌ಬುಕ್

ಬಡತನ ನಿವಾರಣೆಗಾಗಿ ಇನ್ನು ಶ್ರೀಮಂತರಿಗೆ 'ಸಹಾಯ ಹಸ್ತ'!
ಮೋದಿ ಸರಕಾರದ ಇನ್ನೊಂದು ತಿರುವು-ಮುರುವು ತರ್ಕ



ಬಡವರಿಗೆ 'ಸಹಾಯ ಹಸ್ತ' ಚಾಚುವ 'ಕಲ್ಯಾಣ ಕ್ರಮಗಳ ಖರ್ಚುಗಳು ಬಡವರ ಸಬಲೀಕರಣಕ್ಕೆ ಅಡ್ಡಿ ಎಂದು ಬಿಂಬಿಸುವ ಪ್ರಧಾನಿಯವರ ಮಾತುಗಳಿಗೆ ಸೈದ್ಧಾಂತಿಕ ಆಧಾರವಿಲ್ಲ. ಅದರ ಬದಲು ಕಾರ್ಪೊರೇಟ್‌ಗಳಿಗೆ 'ಸಹಾಯ ಹಸ್ತ' ಚಾಚಿ ಬಡವರ ಸಬಲೀಕರಣ ಮಾಡಬಹುದು ಎಂಬ ಅವರ ಇಂಗಿತ ಯಾವುದು ತನಗೆ ಹಿತವೋ ಅದರಲ್ಲೇ ಎಲ್ಲರ ಹಿತವೂ ಇದೆ ಎಂಬ ಹಣಕಾಸು ಬಂಡವಾಳದ ಸಿದ್ಧಾಂತವನ್ನು ಅವರು ಸಂಪೂರ್ಣವಾಗಿ ಒಪ್ಪಿಕೊಂಡಿರುವುದನ್ನೂ ತೋರಿಸುತ್ತದೆ.
ಇಂತಹ ತಿರುವುಮುರುವುಗೊಳಿಸಿದ ತರ್ಕಗಳು ನೋಟುರದ್ಧತಿಯೊಂದಿಗೆ ಆರಂಭವಾಗಿವೆ, ಮುಂದಿನ ದಿನಗಳಲ್ಲಿ ಇನ್ನಷ್ಟು ಬರಲಿವೆ.-ಪ್ರೊ. ಪ್ರಭಾತ್ ಪಟ್ನಾಯಕ್

ಇಲ್ಲಿಯುವರೆಗೂ ಬಡವರಿಗೆ 'ಸಹಾಯ ಹಸ್ತ' ಚಾಚುವುದು ಸರ್ಕಾರದ ನೀತಿಯಾಗಿತ್ತು. ಅದರ ಬದಲಾಗಿ, ಇನ್ನುಮುಂದೆ ಬಡವರ 'ಸಬಲೀಕರಣ'ದ ಅವಕಾಶ ಕಲ್ಪಿಸುವುದೇ ತಮ್ಮ ಸರ್ಕಾರದ ನೀತಿಯಾಗಿರುತ್ತದೆ ಎಂಬುದಾಗಿ, ಐದು ರಾಜ್ಯಗಳ ಚುನಾವಣಾ ಫಲಿತಾಂಶದ ಬಳಿಕ ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ನರೇಂದ್ರ ಮೋದಿ ಘೋಷಿಸಿದ್ದಾರೆ. ಪತ್ರಿಕೆಗಳು ಈ ಅಂಶವನ್ನು ಒತ್ತಿಹೇಳುವ ಜೊತೆಗೆ ಇದು 'ಕಲ್ಯಾಣ' ಪರಿಕಲ್ಪನೆಯಿಂದ 'ಅಭಿವೃದ್ಧಿ'ಯತ್ತ ಹೊರಳುವ ಸೂಚನೆ ಎಂದು ಶ್ಲಾಘಿಸಿವೆ. ಸರ್ಕಾರದ ನೀತಿ ಇನ್ನುಮುಂದೆ ಬದಲಾಗುವ ಲಕ್ಷಣಗಳಿರುವುದರಿಂದ ಅದರ ಪರಿಣಾಮಗಳ ಪರಿಶೀಲನೆ ಅಗತ್ಯ.

ಅಭಿವೃದ್ಧಿಗೆ ಬದಲಾಗಿ 'ಸಹಾಯ ಹಸ್ತ' ಚಾಚುವುದನ್ನು ಅದರತ್ತ ಕೈಯೊಡ್ಡಬೇಕಾದವರೂ ಇಷ್ಟಪಡುವುದಿಲ್ಲ ಮತ್ತು ಅದನ್ನು ಸಮರ್ಥಿಸುವವರಿಗೂ ಅದು ಮೊದಲನೆಯ ಆಯ್ಕೆಯಲ್ಲ. ಯಾವ ರೀತಿಯ ಅಭಿವೃದ್ಧಿಯ ಮೂಲಕವಾಗಿ ಬಡವರು ನಿಜಕ್ಕೂ ಏಳಿಗೆ ಹೊಂದುವಂತಹ ಅವಕಾಶಗಳನ್ನು ಕಲ್ಪಿಸಬಹುದು ಎಂಬುದೇ ಮುಖ್ಯವಾದ ವಿಷಯ. ಏಕೆಂದರೆ, ಕಳೆದ ಎರಡು ದಶಕಗಳಿಂದ ಜಾರಿಯಲ್ಲಿರುವ ನವ-ಉದಾರ ಆರ್ಥಿಕ ನೀತಿಗಳಿಂದಾಗಿ ಕೃಷಿಯೂ ಸೇರಿದಂತೆ ಕಿರು ಉತ್ಪಾದನೆ ನಶಿಸುತ್ತಿದೆ. ಮೂರು ಲಕ್ಷಕ್ಕೂ ಹೆಚ್ಚು ಮಂದಿ ರೈತರ ಆತ್ಮಹತ್ಯೆಗೆ ಕಾರಣವಾಗಿರುವ ಈ ಆರ್ಥಿಕ ನೀತಿಗಳಿಂದ ಸಿಡಿದು ಹೊರ ಬರದ ಹೊರತು ಬಡವರಿಗೆ ಹೆಚ್ಚಿನ ಉದ್ಯೋಗಾವಕಾಶ ಒದಗಿಸುವ ನಿರೀಕ್ಷೆ ಅರ್ಥವಿಲ್ಲದ್ದು. ನವ-ಉದಾರ ಆರ್ಥಿಕ ನೀತಿಗಳ ಫಲಾನುಭವಿಗಳಾದ ಕಾರ್ಪೊರೇಟ್ ಕುಳಗಳೊಂದಿಗೆ ಆಪ್ತ ಸಂಬಂಧ ಹೊಂದಿರುವ ಮೋದಿಯವರು ಈ ನೀತಿಗಳಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ. ಈ ಕಾರ್ಪೊರೇಟ್ ಕುಳಗಳಿಗೆ ಮೋದಿಯವರ ಬಗ್ಗೆ ಅದೆಷ್ಟು ಭರವಸೆ ಇದೆಯೆಂಬುದು ಚುನಾವಣಾ ಫಲಿತಾಂಶದ ನಂತರ ಷೇರು ಸೂಚ್ಯಂಕದ ಭಾರಿ ಏರಿಕೆಯಲ್ಲಿ ವ್ಯಕ್ತವಾಯಿತು.

ಕೃಷಿಗೆ ಸಂಬಂಧಿಸಿದಂತೆ, ಸಣ್ಣ ರೈತರ ಸಾಲ ಮನ್ನಾ ಮತ್ತು ಉಳಿದವರಿಗೆ ಬಡ್ಡಿ ರಹಿತ ಕೃಷಿ ಸಾಲ ಒದಗಿಸುವ ಎರಡು ಆಶ್ವಾಸನೆಗಳನ್ನು ಮೋದಿ ಕೊಟ್ಟಿದ್ದಾರೆ. ಅವೆರಡನ್ನೂ ಈಡೇರಿಸುತ್ತಾರೆಂದು ಭಾವಿಸಿ, ಅದರ ಬಗ್ಗೆ ಪರಿಶೀಲಿಸಬಹುದು. ಆದರೆ ಒಂದೇ ಒಂದು ಸಲ ಸಣ್ಣ ರೈತರ ಸಾಲ ಮನ್ನಾ ಮಾಡುವುದರಿಂದ ಕೃಷಿ ವಹಿವಾಟು ಚೇತರಿಸಿಕೊಳ್ಳುವುದಿಲ್ಲ. ಅದು ಚೇತರಿಸಿಕೊಳ್ಳಬೇಕು ಎಂದಾದರೆ, ಬೇಸಾಯ ಲಾಭದಾಯಕವಾಗುವ ಪರಿಸ್ಥಿತಿ ಮರಳಿಬರುವಂತೆ ನೋಡಿಕೊಳ್ಳಬೇಕು. ಜಾಗತಿಕ ಮಟ್ಟದಲ್ಲಿ ಬೆಲೆ ಏರಿಳಿತಗಳಿಂದಾಗಿ ಕೃಷಿ ಉತ್ಪನ್ನಗಳು ಆಮದಾಗುತ್ತಿವೆ. ಈ ಆಮದುಗಳಿಂದ ರೈತರಿಗೆ ರಕ್ಷಣೆ ಒದಗಿಸಬೇಕು. ಈ ಹೊತ್ತಿನಲ್ಲಿ, ಮೋದಿಯವರ ತವರು ರಾಜ್ಯದಲ್ಲಿ ಅವರದೇ ಪಕ್ಷದ ಸರ್ಕಾರ, ಅವರೇ ಆರಿಸಿದ ಮುಖ್ಯಮಂತಿ ಇದ್ದಾಗಲೂ ಶೇಂಗಾ ಬೆಲೆ ಕುಸಿದಿದೆ. ಒಂದೇ ಒಂದು ಸಲ ಸಣ್ಣ ಪ್ರಮಾಣದ ಸಾಲ ಮನ್ನಾಮಾಡುವುದರಿಂದ ಅವರಿಗೆ ಸ್ವಲ್ಪ ನೆಮ್ಮದಿ ಸಿಗಬಹುದಲ್ಲದೆ ಕೃಷಿ ಸಮಸ್ಯೆ ಬಗೆಹರಿಯುವುದಿಲ್ಲ. ಹಿಂದೆ ಇದ್ದ ಯುಪಿಎ ಸರ್ಕಾರವೂ ಒಂದು ದೊಡ್ಡ ಪ್ರಮಾಣದ ಕೃಷಿ ಸಾಲ ಮನ್ನಾ ಮಾಡಿತ್ತು. ಅದರಿಂದಾಗಿ ಕೃಷಿ ಬಿಕ್ಕಟ್ಟು ನಿಂತಿಲ್ಲ. ಆಗಿದ್ದೇನೆಂದರೆ, 2011-12ರ ನಂತರದಲ್ಲಿ ಆಹಾರ ಧಾನ್ಯಗಳ ತಲಾ ಉತ್ಪಾದನೆಯ ಇಳಿಕೆ.



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ

ಇನ್ನು ಬಡ್ಡಿ ರಹಿತ ಸಾಲದ ಬಗ್ಗೆ ಹೇಳುವುದಾದರೆ, ವಿದೇಶಿ ಬ್ಯಾಂಕ್‌ಗಳು ಮತ್ತು ಖಾಸಗಿ ಬ್ಯಾಂಕ್‌ಗಳು ಈಗ ಜಾರಿಯಲ್ಲಿರುವ ಆದ್ಯತಾ ವಲಯದ ಕೃಷಿಗೆ ಇಂತಿಷ್ಟು ಸಾಲ ಮಂಜೂರು ಮಾಡಬೇಕೆಂಬ ಕಟ್ಟುಪಾಡುಗಳನ್ನೇ ಯಾವ ಭಯವೂ ಇಲ್ಲದೆ ಉಲ್ಲಂಘಿಸುತ್ತಿವೆ. ಇನ್ನು ಅವು ಬಡ್ಡಿ ರಹಿತ ಸಾಲ ಕೊಡುವ ಮಾತೇ ಇಲ್ಲ. ಬಡ್ಡಿ ರಹಿತ ಸಾಲ ಕೊಡುವಂತೆ ಸಾರ್ವಜನಿಕ ವಲಯದ ಬ್ಯಾಂಕ್‌ಗಳ ಮೇಲೆ ಸರ್ಕಾರ ಒತ್ತಡ ಹಾಕಬಹುದು. ಆದರೆ, ಸರ್ಕಾರದಲ್ಲಿರುವವರ ಪ್ರೀತಿ ಪಾತ್ರ ಕಂಪೆನಿಗಳು ಕೈಗೊಂಡಿರುವ ಮೂಲಸೌಕರ್ಯ ಅಭಿವೃದ್ಧಿ ಯೋಜನೆಗಳಿಗೆ, ಸರ್ಕಾರದ ಒತ್ತಡದಿಂದಾಗಿ ಕೊಟ್ಟ ಬೃಹತ್ ಪ್ರಮಾಣದ ಸಾಲಗಳು (ಸುಮಾರು ಏಳು ಲಕ್ಷ ಕೋಟಿ ರೂಪಾಯಿಗಳು) ವಸೂಲಾಗದ ಸ್ಥಿತಿಯಲ್ಲಿವೆ. ಅದೇ ರೀತಿಯಲ್ಲಿ, ರೈತರಿಗೆ ಬಡ್ಡಿ ರಹಿತ ಸಾಲ ಕೊಡುವಂತೆ ಒತ್ತಾಯಿಸಿದರೆ ಬ್ಯಾಂಕುಗಳ ಆರ್ಥಿಕ ಪರಿಸ್ಥಿತಿ ಹದಗೆಡುತ್ತದೆ. ಅದೇ ಒಂದು ದೊಡ್ಡ ವಿಷಯವಾಗಬಾರದು. ಸರ್ಕಾರ ಬ್ಯಾಂಕುಗಳಿಗೆ ಹಣ ಒದಗಿಸಬೇಕು. ಆದರೆ, ಸಾರ್ವಜನಿಕ ವಲಯದ ಬ್ಯಾಂಕ್‌ಗಳಲ್ಲಿ ಖಾಸಗಿಯವರ ಬಂಡವಾಳದ ಪಾಲನ್ನು ಹೆಚ್ಚಿಸುವ ತರಾತುರಿಯಲ್ಲಿರುವ ಈ ಸರ್ಕಾರ, ಬ್ಯಾಂಕುಗಳ ಹದಗೆಟ್ಟ ಆರ್ಥಿಕ ಪರಿಸ್ಥಿತಿಯನ್ನು ಮುಂದಿಟ್ಟು, ಅವುಗಳನ್ನು ಖಾಸಗಿಯವರಿಗೆ ವಹಿಸಿಕೊಡುವ ಹುನ್ನಾರದಲ್ಲಿದೆ. ಅದು ನೆರವೇರಿದರೆ, ಬಡ್ಡಿ ರಹಿತ ಸಾಲಗಳು ಹೇಳ ಹೆಸರಿಲ್ಲದಂತಾಗುತ್ತವೆ. ರೈತರಿಗೆ ಬಡ್ಡಿ ಇಲ್ಲದೆ ಸಾಲ ಕೊಡುವ ಮೋದಿಯವರ ಆಶ್ವಾಸನೆ ಸ್ವಾಗತಾರ್ಹವಾಗಿದ್ದರೂ, ಈ ಆಶ್ವಾಸನೆಯು ಬಾಲದ ತುದಿಯಲ್ಲಿರುವ ಮುಳ್ಳಿನಂತಿದೆ.

ಇದನ್ನೇ ಇನ್ನೂ ಸರಳವಾಗಿ ಹೇಳುವುದಾದರೆ, ಬೇಸಾಯ ಲಾಭದಾಯಕವಾಗುವ ಪರಿಸ್ಥಿತಿ ಮರಳುವಂತೆ ಮಾಡದ ಹೊರತು, ಬೆಲೆ ಏರಿಳಿತಗಳಿಂದ ರೈತರಿಗೆ ರಕ್ಷಣೆ ಸಿಗದ ಹೊರತು, ಕಿರು ಉತ್ಪಾದನೆ ಮತ್ತು ಕೃಷಿ ವಲಯಗಳಲ್ಲಿ ಚೇತರಿಕೆಯಾಗುವುದಿಲ್ಲ ಮತ್ತು ಅವು ಚೇತರಿಸಿಕೊಳ್ಳದ ಹೊರತು ಈ ವಲಯಗಳಲ್ಲಿ ಉದ್ಯೋಗಾವಕಾಶಗಳು ಸೃಷ್ಟಿಯಾಗುವ ಪ್ರಶ್ನೆಯೇ ಇಲ್ಲ. ಬೇಸಾಯ ಲಾಭದಾಯಕವಾಗುವುದು, ಬೆಲೆ ಏರಿಳಿತಗಳಿಂದ ರೈತರಿಗೆ ರಕ್ಷಣೆ ಕೊಡುವುದು ಮತ್ತು ರೈತರಿಗೆ ಬಡ್ಡಿ ರಹಿತ ಸಾಲ ಕೊಡುವ ಕ್ರಮಗಳು ಕೃತಿಗಿಳಿಯಬೇಕಾದರೆ, ನವ-ಉದಾರ ಆರ್ಥಿಕ ನೀತಿಗಳ ಆಳ್ವಿಕೆಯ ಹಿಡಿತದಿಂದ ಬಿಡಿಸಿಕೊಳ್ಳಬೇಕಾಗುತ್ತದೆ. ಆ ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯ ಮೋದಿ ಸರ್ಕಾರಕ್ಕಿಲ್ಲ.

ಕಿರು ಉತ್ಪಾದನೆ ಮತ್ತು ಕೃಷಿ ವಲಯಗಳು ಚೇತರಿಕೆಯಾಗುವಂತೆ ಮಾಡುವುದರ ಬದಲು ನೋಟು ರದ್ದತಿಯ ಮೂಲಕ ಮೋದಿ ಸರ್ಕಾರವು ಈ ವಲಯಗಳಿಗೆ ಮಾರಣಾಂತಿಕ ಪೆಟ್ಟು ಕೊಟ್ಟಿದೆ. ಬಿಜೆಪಿ ಉತ್ತರ ಪ್ರದೇಶದಲ್ಲಿ ಗೆದ್ದಿರುವುದರಿಂದ ನೋಟು ರದ್ದತಿಯ ಆಘಾತ ಇರಲಿಲ್ಲವೆಂದಲ್ಲ. ಅದೇ ರೀತಿಯಲ್ಲಿ, ಜಿಡಿಪಿ ಬೆಳವಣಿಗೆ ದರ ಇಳಿದಿಲ್ಲ ಎಂದು ಸರ್ಕಾರದ ಅಂಕಿ ಅಂಶಗಳು ಹೇಳಿದರೆ ನೋಟು ರದ್ದತಿಯ ಆಘಾತ ಇರಲಿಲ್ಲವೆಂದಲ್ಲ. ನೋಟು ರದ್ದತಿ ಉಂಟುಮಾಡಿದ ರಾಜಕೀಯ ಅಡ್ಡ ಪರಿಣಾಮಗಳು ಹೆಚ್ಚಿಗೆ ಇತ್ತೊ ಅಥವಾ ಕಡಿಮೆ ಇತ್ತೊ ಎಂಬುದಕ್ಕಿಂತಲೂ ಮುಖ್ಯವಾಗಿ ಕಿರು ಉತ್ಪಾದನೆ ಮತ್ತು ಕೃಷಿ ವಲಯಗಳ ಮೇಲೆ ಅದು ನಿಸ್ಸಂಶಯವಾಗಿಯೂ ಬಲವಾದ ಪೆಟ್ಟು ಕೊಟ್ಟಿದೆ. ಮೋದಿಯವರ ತವರು ರಾಜ್ಯದಲ್ಲೇ ರೈತರು ನೋಟು ರದ್ದತಿಯ ವಿರುದ್ಧವಾಗಿ ಬೀದಿಗಿಳಿದು ಪ್ರತಿಭಟಿಸಿ ಪೋಲೀಸರ ದಬ್ಬಾಳಿಕೆ ತುತ್ತಾಗಿದ್ದಾರೆ.

ಈ ಪರಿಸ್ಥಿತಿಯಲ್ಲಿ, ಬಡವರಿಗೆ ಸಬಲೀಕರಣದ ಅವಕಾಶಗಳನ್ನು ಕಲ್ಪಿಸುವುದಾಗಿ ಮೋದಿಯವರು ಹೇಳುವಾಗ, ಅವರು ಮುಖ್ಯವಾಗಿ ಕಾರ್ಪೊರೇಟ್ ವಲಯದ ವಿಸ್ತರಣೆಯ ಮೂಲಕ ಉದ್ಯೋಗಾವಕಾಶ ಒದಗಿಸುವ ಗುರಿ ಇಟ್ಟುಕೊಂಡಿರುವುದು ಕಾಣುತ್ತದೆ. ಸಾರ್ವಜನಿಕ ವಲಯದ ವಿಸ್ತರಣೆ ಆಗಬಹುದಾದ ಯಾವ ಪ್ರಸ್ತಾಪವೂ ಈಗ ಇಲ್ಲದಿರುವುದರಿಂದ, ಮೋದಿಯವರ ನಿರೀಕ್ಷೆಯಂತೆ ಉದ್ಯೋಗಾವಕಾಶಗಳ ಸೃಷ್ಟಿ ಕಾರ್ಪೊರೇಟ್ ವಲಯದಲ್ಲೇ ಆಗಬೇಕಾಗುತ್ತದೆ. ಕಾರ್ಪೊರೇಟ್ ವಲಯದ ಮೇಲೆ ಸರ್ಕಾರ ಈ ನಿರೀಕ್ಷೆ ಇಟ್ಟುಕೊಂಡಾಗ, ಕಾರ್ಪೊರೇಟ್‌ಗಳು ಸರ್ಕಾರದಿಂದ ಹೆಚ್ಚುವರಿ 'ಪ್ರೋತ್ಸಾಹ ಧನ'(incentives) ನಿರೀಕ್ಷಿಸುತ್ತವೆ. ಬಡವರಿಗೆ 'ಸಹಾಯಹಸ್ತ' ಚಾಚುವ ಪದ್ಧತಿಯನ್ನು ಬದಲಾಯಿಸುವ ಮೋದಿಯವರ ಮಾತುಗಳ ಅರ್ಥವು ಈಗ ಬಡವರ ಕಲ್ಯಾಣ ಕಾರ್ಯಕ್ರಮಗಳಿಗೆ ಸರ್ಕಾರ ಮಾಡುತ್ತಿರುವ ಖರ್ಚನ್ನು ನಿಲ್ಲಿಸಿ ಅದೇ ಹಣವನ್ನು ಕಾರ್ಪೊರೇಟ್ ಕುಳಗಳಿಗೆ ಹಸ್ತಾಂತರಿಸುವುದೇ ಆಗುತ್ತದೆ. ಮೋದಿಯವರ ವಿಚಾರ ಚೌಕಟ್ಟು ಮತ್ತು ಆರ್ಥಿಕ ವ್ಯವಹಾರ ಕೌಶಲ್ಯಗಳ ದೃಷ್ಟಿಕೋನದ ಮೂಲಕ ಅವರ ಈ ಮಾತುಗಳನ್ನು ಗಮನಿಸಿದಾಗ ಅವರ ನಿರ್ಧಾರದ ಬಗ್ಗೆ ಯಾರಿಗಾದರೂ ಹೊಳೆಯುವ ಅನ್ನಿಸಿಕೆ ಇದೊಂದೇ.

'ಸಹಾಯಹಸ್ತ' ಚಾಚುವ ವೆಚ್ಚದ ಹಣವನ್ನು ಕಾರ್ಪೊರೇಟ್‌ಗಳಿಗೆ ಹಸ್ತಾಂತರಿಸುವ ಬಗ್ಗೆ ಇನ್ನೂ ಸ್ವಲ್ಪ ವಿವರವಾಗಿ ಪರಿಶೀಲಿಸಬಹುದು. ಇಂತಹ ಒಂದು ತಿರೋಗಾಮಿ ವರ್ಗಾವಣೆ ಆಗುತ್ತದೆ ಎಂದು ಊಹಿಸಿಕೊಳ್ಳೋಣ. ಆಗ, ಬಡವರಿಗೆ ಉದ್ಯೋಗಾವಕಾಶಗಳು ಹೆಚ್ಚುತ್ತವೆಯೇ? ಮೋದಿಯವರ ಯೋಚನೆ ಸಾಕಾರಗೊಳ್ಳಬೇಕು ಎಂದಾದರೆ, ಕಾರ್ಪೊರೇಟ್‌ಗಳು ವರ್ಗಾವಣೆಯಾಗಿ ಪಡೆದ ಹಣವನ್ನು ಉತ್ಪಾದನಾ ಚಟುವಟಿಕೆಗಳಲ್ಲಿ ಹೂಡಿಕೆ ಮಾಡಬೇಕು. ಆದರೆ, ಖಾಸಗಿ ಕಾರ್ಪೊರೇಟ್‌ಗಳು ಯಾವುದೇ ವಲಯದಲ್ಲಿ ಮಾಡುವ ಹೂಡಿಕೆಯು ಆ ವಲಯದ ಉತ್ಪನ್ನಗಳಿಗೆ ಎಷ್ಟು ಬೇಡಿಕೆ ಉಂಟಾಗಬಹುದು ಎಂಬ ಅವರ ನಿರೀಕ್ಷೆಯ ಮೇಲೆ ಅವಲಂಬಿತವಾಗಿರುತ್ತದೆ. (ಒಂದು ವೇಳೆ, ಖಾಸಗಿ ಕಾರ್ಪೊರೇಟ್‌ಗಳು ಕಿರು ಉತ್ಪಾದನೆ ಮತ್ತು ಕೃಷಿ ವಲಯಗಳನ್ನು ಅತಿಕ್ರಮಿಸಿ ಅಲ್ಲಿ ಹೂಡಿಕೆಮಾಡಿದರೆ, ಈ ವಲಯದಲ್ಲಿರುವ ಉದ್ಯೋಗಗಳು ನಾಶವಾಗುತ್ತವೆ. ಬಡವರ ಪರಿಸ್ಥಿತಿ ಇನ್ನಷ್ಟು ಹಾಳಾಗುತ್ತದೆ. ಈ ಪರಿಸ್ಥಿತಿಯನ್ನು ವಸಾಹತುಶಾಹಿಯ ಕಾಲದಲ್ಲಿ ಉಂಟಾಗಿದ್ದ deindustrialisation, ಅಂದರೆ ಅಕೈಗಾರೀಕರಣದ ಪರಿಸ್ಥಿತಿಗೆ ಹೋಲಿಸಬಹುದು) ಬಡವರ ಕಲ್ಯಾಣ ಯೋಜನೆಗಳಿಗೆ ಮೀಸಲಾಗಿರುವ ಹಣವನ್ನು ಪ್ರೋತ್ಸಾಹ ಧನದ ಹೆಸರಿನಲ್ಲಿ ಕಾರ್ಪೊರೇಟ್‌ಗಳಿಗೆ ವರ್ಗಾಯಿಸುವ ಕ್ರಮದಿಂದಲೇ ಮಾರುಕಟ್ಟೆ ವಿಸ್ತಾರಗೊಳ್ಳುವುದಿಲ್ಲ. ಬದಲಿಗೆ, ಕುಗ್ಗುತ್ತದೆ. ಏಕೆಂದರೆ, ಒಟ್ಟಾರೆ ಬಳಕೆ(ಉಪಭೋಗ) ಕಡಿಮೆಯಾಗಿರುತ್ತದೆ. ಹಾಗಾಗಿ, ಕಾರ್ಪೊರೇಟ್‌ಗಳು ಈ ಪ್ರೋತ್ಸಾಹ ಧನವನ್ನು ನೀಟಾಗಿ ಜೇಬಿಗಿಳಿಸುತ್ತಾರೆ, ಯಾವುದೇ ಹೆಚ್ಚುವರಿ ಹೂಡಿಕೆಯನ್ನೇ ಮಾಡದೆ.

ವಾಸ್ತವವಾಗಿ, 'ಸಹಾಯಹಸ್ತ' ಮತ್ತು 'ಅಭಿವೃದ್ಧಿ' ಇವೆರಡೂ ಬೇರೆ ಬೇರೆಯೇ ಎಂದು ತಿಳಿಯುವುದೇ ಒಂದು ತಪ್ಪು. ಅವು ಬೇರೆ ಬೇರೆಯೇ ಎಂದು ಕಾರ್ಪೊರೇಟ್ ಬಂಡವಾಳ ಮತ್ತು ಅದರ ಹಿಡಿತದಲ್ಲಿರುವ ಮಾಧ್ಯಮಗಳು ತುತ್ತೂರಿ ಊದುತ್ತವೆ. ಅದೇ ಹಾಡನ್ನು ಚಾಚೂತಪ್ಪದೆ ಮೋದಿಯವರೂ ಹಾಡುತ್ತಿದ್ದಾರೆ. ಏಕೆಂದರೆ, ಅವರು ಬಡವರಿಗೆ ಸಿಗುತ್ತಿರುವ ಸಹಾಯದ್ರವ್ಯನ್ನು ಪ್ರೋತ್ಸಾಹಧನದ ಹೆಸರಿನಲ್ಲಿ ಬಂಡವಾಳಗಾರರಿಗೆ ವರ್ಗಾಯಿಸಲು ಹೊರಟಿದ್ದಾರೆ.

ಬೇಡಿಕೆ ಹೆಚ್ಚಿದಾಗ ಮಾತ್ರ ಅರ್ಥವ್ಯವಸ್ಥೆಯಲ್ಲಿ ಹೂಡಿಕೆ ಏರುತ್ತದೆ. ಬಡವರ ಕಲ್ಯಾಣದ ಖರ್ಚುಗಳು ಬೇಡಿಕೆ ಹೆಚ್ಚಿಸುವ ಪಾತ್ರ ನಿರ್ವಹಿಸುತ್ತವೆ. ಜನ ಕಲ್ಯಾಣದ ಖರ್ಚು ಅರ್ಥವ್ಯವಸ್ಥೆಯಲ್ಲಿ ಬೇಡಿಕೆ ಹೆಚ್ಚಿಸುವಂತಹ ಒಂದು ಸಾಧನ. ಬೇಡಿಕೆ ಹೆಚ್ಚಿದಾಗ ಹೂಡಿಕೆಯೂ ಏರುತ್ತದೆ ಮತ್ತು ಬೆಳವಣಿಗೆಯೂ ಉನ್ನತ ಮಟ್ಟದಲ್ಲಿರುತ್ತದೆ. ಜನ ಕಲ್ಯಾಣದ ಖರ್ಚು ಬೆಳವಣಿಗೆಯ ಹಾದಿಯಲ್ಲಿ ಅಡ್ಡ ನಿಲ್ಲುವುದಿಲ್ಲ. ಬೆಳವಣಿಗೆ ತರುವಲ್ಲಿ ಅದೊಂದು ಸಾಧನವಾಗುತ್ತದೆ. ಆದ್ದರಿಂದ, ಜನ ಕಲ್ಯಾಣದ ಖರ್ಚುಗಳು, ಉದ್ಯೋಗ ಸೃಷ್ಟಿಸುವ ಒಂದು ಸಾಧನ. ಅದರಿಂದಾಗಿ ಬಡವರಿಗೆ ಅವಕಾಶಗಳು ಒದಗುತ್ತವೆ.

'ಬಡವರಿಗೆ ಅವಕಾಶಗಳನ್ನು ಒದಗಿಸುವುದು' ಮತ್ತು ಅವರ ಕಲ್ಯಾಣಕ್ಕಾಗಿ ಮಾಡುವ ಖರ್ಚುಗಳು, ಈ ಎರಡರಲ್ಲಿ ವ್ಯತ್ಯಾಸವಿದೆ ಎಂದು ಹೇಳುವ ಮೋದಿಯವರು ಒಂದರ ವಿರುದ್ಧ ಇನ್ನೊಂದನ್ನು ಎತ್ತಿ ಕಟ್ಟುತ್ತಿದ್ದಾರೆ. ಕಲ್ಯಾಣ ಖರ್ಚುಗಳು ಬಡವರಿಗೆ ಅವಕಾಶ ಒದಗಿಸುವಲ್ಲಿ ಅಡ್ಡ ಬರುತ್ತವೆ ಎಂದು ಹೇಳುವ ಅವರ ಮಾತುಗಳಿಗೆ ಸೈದ್ಧಾಂತಿಕ ಆಧಾರವಿಲ್ಲ. ಇದು, ಅವರಿಗೆ ಅರ್ಥಶಾಸ್ತ್ರದ ಅರಿವಿಲ್ಲ ಎಂಬುದನ್ನೂ ಮತ್ತು ಯಾವುದು ತನಗೆ ಹಿತವೋ ಅದರಲ್ಲೇ ಎಲ್ಲರ ಹಿತವೂ ಇದೆ ಎಂಬ ಹಣಕಾಸು ಬಂಡವಾಳದ ಸಿದ್ಧಾಂತವನ್ನು ಅವರು ಸಂಪೂರ್ಣವಾಗಿ ಒಪ್ಪಿಕೊಂಡಿರುವುದನ್ನೂ ತೋರಿಸುತ್ತದೆ.

ವಿಚಾರಗಳನ್ನು ತಲೆ ಕೆಳಗು ಮಾಡಿ ತರ್ಕದಲ್ಲಿ ತೊಡಗುವುದು ಮೋದಿ ಸರ್ಕಾರದ ಸ್ವಭಾವದ ಹೆಗ್ಗುರುತು. ಈ ಪರಿಸ್ಥಿತಿ ಮುಂದುವರೆಯುತ್ತಿದೆ. ಅನೌಪಚಾರಿಕ ವಲಯ ಮತ್ತು ಬಡವರಿಗೆ ಹೇಳತೀರದ ಉಪಟಳಕೊಟ್ಟ ನೋಟು ರದ್ದತಿಯು ಕ್ರಮವು ಶ್ರೀಮಂತರ ವಿರುದ್ಧವಾಗಿದೆ ಎಂದು ಬಿಂಬಿಸಲಾಯಿತು. ಕೆಲವು ಪತ್ರಿಕೆಗಳು ಅದನ್ನು ಶ್ರೀಮಂತರ ವಿರುದ್ಧ ಹೂಡಿದ 'ವರ್ಗ ಸಮರ' ಎಂದೂ ಬಣ್ಣಿಸಿದವು. ಅದೇ ರೀತಿಯಲ್ಲಿ, ಸರ್ಕಾರವು ಬಡವರ ಏಳಿಗೆಗಾಗಿ ಮಾಡುತ್ತಿರುವ ತೀರಾ ಕಡಿಮೆ ಮಟ್ಟದ ಕಲ್ಯಾಣ ಖರ್ಚುಗಳನ್ನೂ ಕತ್ತರಿಸಿ, ಅದನ್ನು ಶ್ರೀಮಂತರಿಗೆ ವರ್ಗಾವಣೆ ಮಾಡ ಬಯಸುವ ಕ್ರಮವನ್ನು 'ಬಡವರಿಗೆ ಅವಕಾಶ ಒದಗಿಸುವ ಕ್ರಮ'ವೆಂದು ವರ್ಣಿಸಲಾಗುತ್ತದೆ. ಮುಂಬರುವ ದಿನಗಳಲ್ಲಿ, ತಿರುವು-ಮುರುವಿನ ತರ್ಕಗಳು ಹೆಚ್ಚಿನ ಮಟ್ಟದಲ್ಲಿ ಎದುರಾಗಲಿವೆ. ನಾವದಕ್ಕೆ ತಯಾರಾಗಿರಬೇಕು.

(Inversion of Reason:Eradicating Poverty with Doles for the Rich ಲೇಖನದ ಭಾವಾನುವಾದ)

ತೆಲಂಗಾಣ: ಸಮತೆ ಮತ್ತು ಸಾಮಾಜಿಕ ನ್ಯಾಯದ 'ಸಮರ ಸಮ್ಮೇಳನ'



ತೆಲಂಗಾಣದಲ್ಲಿ 154 ದಿನಗಳ ಕಾಲ ರಾಜ್ಯವನ್ನೆಲ್ಲ ಸುತ್ತಿದ 'ಮಹಾಜನ ಪಾದಯಾತ್ರ' ಮಾರ್ಚ್ 19ರಂದು ಹೈದರಾಬಾದಿನಲ್ಲಿ ಒಂದು ಬೃಹತ್ ಮೆರವಣಿಗೆ ಮತ್ತು ನಂತರ ಲಕ್ಷಾಂತರ ಮಂದಿ ಭಾಗವಹಿಸಿದ್ದ ಒಂದು 'ಸಮರ ಸಮ್ಮೇಳನ'ದೊಂದಿಗೆ ಮುಕ್ತಾಯಗೊಂಡಿದೆ. ಇದರೊಂದಿಗೆ ರಾಜ್ಯದಲ್ಲಿ ಸಮತೆ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ಸಮರದ ಕಹಳೆಯನ್ನು ಮೊಳಗಿಸಿದೆ.

ಸಿಪಿಐ(ಎಂ) ತೆಲಂಗಾಣ ರಾಜ್ಯ ಕಾರ್ಯದರ್ಶಿ ತಮ್ಮಿನೇನಿ ವೀರಭದ್ರಂ ನೇತೃತ್ವದಲ್ಲಿ 'ಮಹಾಜನ ಪಾದಯಾತ್ರೆ' ಸುಮಾರು 4200 ಕಿ.ಮೀ. ಸಂಚರಿಸಿ ರಾಜ್ಯದ ಎಲ್ಲ ಜಿಲ್ಲೆಗಳ 1500ಕ್ಕೂ ಹೆಚ್ಚು ಹಳ್ಳಿಗಳ ಮೂಲಕ ಹಾದು ಹೈದರಾಬಾದ್ ತಲುಪಿತು.

ಮಾರ್ಚ್ 19ರಂದು ಸುಂದರಯ್ಯ ವಿಜ್ಞಾನ ಕೇಂದ್ರಂನಿಂದ ಬೃಹತ್ ಮೆರವಣಿಗೆ ಆರಂಭವಾಯಿತು. ಇದರಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಯೊಂದಿಗೆ ಪಕ್ಷದ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಕೂಡ ಭಾಗವಹಿಸಿದರು. ಮೆರವಣಿಗೆ ಸಾಗಿದ 10ಕಿ.ಮೀ. ಉದ್ದಕ್ಕೂ 'ಜೈಭೀಮ್' ಮತ್ತು 'ಲಾಲ್ ಸಲಾಮ್' ಘೋಷಣೆಗಳು ಮುಗಿಲು ಮುಟ್ಟಿದವು. ಮೆರವಣಿಗೆ 'ಸಮರ ಸಮ್ಮೇಳನ'ದ ಸರೂರ್‌ನಗರ್ ಹೊರಾಂಗಣ ಸ್ಟೇಡಿಯಂನಲ್ಲಿ ತಲುಪಿದಾಗ ಹಬ್ಬದ ವಾತಾವರಣ ಏರ್ಪಟ್ಟಿತ್ತು. ಅಲ್ಲಿ ಬೃಹತ್ ಬಹಿರಂಗ ಸಭೆ ಸುಮಾರು ಏಳು ಗಂಟೆಗಳ ಕಾಲ ರಾತ್ರಿ 10ರ ವರೆಗೂ ನಡೆಯಿತು.

ಸೀತಾರಾಮ್ ಯೆಚೂರಿ, ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್, ತಮ್ಮಿನೇನಿ ವೀರಭದ್ರಂ, ಸಿಪಿಐ ರಾಜ್ಯ ಕಾರ್ಯದರ್ಶಿ ಚಡ ವೆಂಕಟ ರೆಡ್ಡಿ, ಸಿಪಿಐ(ಎಂ) ಶಾಸಕ ಸುನ್ನಂ ರಾಜಯ್ಯ ಅವಿಭಜಿತ ಆಂಧ್ರಪ್ರದೇಶದ ನಿವೃತ್ತ ಮುಖ್ಯ ಕಾರ್ಯದರ್ಶಿ ಕೆ.ಮಾಧವ ರಾವ್, ಚಿಂತಕ ಪ್ರೊ. ಕಾಂಚ ಇಳಯ್ಯ ಸಭೆಯನ್ನುದ್ದೇಶಿಸಿ ಮಾತನಾಡಿದರು. ಶಿಕ್ಷಣ ತಜ್ಞ ಚುಕ್ಕ ರಾಮಯ್ಯ ಪಾದಯಾತ್ರೆಯ ವೇಳೆ ಜನಗಳ ನಿರ್ದಿಷ್ಟ ಸಮಸ್ಯೆಗಳ ಬಗ್ಗೆ ಮುಖ್ಯಮಂತ್ರಿಗಳಿಗೆ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಗಳು ಬರೆದ ಪತ್ರಗಳನ್ನೊಳಗೊಂಡ ಕಿರು ಹೊತ್ತಗೆಯನ್ನು ಬಿಡುಗಡೆ ಮಾಡಿದರು. ಹಲವು ರಾಜಕೀಯ ಪಕ್ಷಗಳ ಮುಖಂಡರು, ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾರ್ಯಕರ್ತರು ಈ ಬೃಹತ್ ಸಭೆಯಲ್ಲಿ ಭಾಗವಹಿಸಿದ್ದರು.

ಕೆಂಪು ಮತ್ತು ನೀಲಿ ಬಾವುಟಗಳ ಐಕ್ಯತೆಯೊಂದಿಗೆ 'ಲಾಲ್ ಸಲಾಮ್' ಮತ್ತು 'ಜೈಭೀಮ್' ಘೋಷಣೆಗಳಿಂದ ನಾವು 'ಇಂಕ್‌ಲಾಬ್ ಜಿಂದಾಬಾದ್' ಘೋಷಣೆಯತ್ತ ಸಾಗಬೇಕು ಎಂದ ಯೆಚೂರಿಯವರು ನಲವತ್ತರ ದಶಕದಲ್ಲಿ ಭೂಸುಧಾರಣೆಯನ್ನು ದೇಶದ ಅಜೆಂಡಾಕ್ಕೆ ತಂದ ತೆಲಂಗಾಣದ ರೈತರ ಮಹಾ ಸಮರದ ನಂತರ ಈಗ ಸಾಮಾಜಿಕ ನ್ಯಾಯ ಮತ್ತು ಸಮಗ್ರ ಅಭಿವೃದ್ಧಿಯ ಹೊಸದೊಂದು ರಾಜಕೀಯ ಪ್ರವೃತ್ತಿ ಮೂಡಿ ಬಂದಿದೆ ಎಂದರು.

ಸುವರ್ಣ ತೆಲಂಗಾಣ ನಿರ್ಮಿಸುವ ಮುಖ್ಯಮಂತ್ರಿಗಳ ಮಾತು ಟೊಳ್ಳಾಗಿದೆ, ಹಳೆಯ ಧೋರಣೆಗಳನ್ನು ಬದಲಿಸದೆ ಇದು ಸಾಧ್ಯವೂ ಇಲ್ಲ, ಮಹಾಜನ ಪಾದಯಾತ್ರೆಯ ವೇಳೆ ವೀರಭದ್ರಂ ಬರೆದ ಪತ್ರಗಳನ್ನು ಪರಿಶೀಲಿಸಿದರೆ ಮುಖ್ಯಮಂತ್ರಿಗಳಿಗೆ ರಾಜ್ಯದ ಜನಗಳ ಸಮಸ್ಯೆಗಳನ್ನು ಪರಿಹರಿಸಲು ನೇರವಾಗಬಹುದು ಎಂದು ಯೆಚುರಿ ಸಲಹೆ ನೀಡಿದರು. ಈ ನಿಟ್ಟಿನಲ್ಲಿ ಅವರ ಮೇಲೆ ಒಟ್ಟಾಗಿ ಒತ್ತಡ ಹಾಕಬೇಕು ಎಂದು ರಾಜ್ಯದ ಎಡಪಕ್ಷಗಳು ಮತ್ತು ವಿವಿಧ ಸಾಮಾಜಿಕ ಸಂಘಟನೆಗಳಿಗೆ ಅವರು ಕರೆ ನೀಡಿದರು.



ಮಂಗಳೂರಿನ ಸಂಘ ಪರಿವಾರದ ಚಾಳಿಯನ್ನು ಅನುಸರಿಸಿ ಹೈದರಾಬಾದಿನ ಒಬ್ಬ ಬಿಜೆಪಿ ಶಾಸಕ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಭಾಗವಹಿಸಿದರೆ ಈ ಸಭೆ ಹೇಗೆ ನಡೆಸುತ್ತೀರೋ ನೋಡುತ್ತೇನೆ ಎಂದು ಸವಾಲು ಹಾಕಿದ್ದ, ರಾಜ್ಯ ಸರಕಾರ ಈ ಸಭೆಗೆ ಅನುಮತಿ ನೀಡಬಾರದು ಎಂದೂ ಆಗ್ರಹಿಸಿದ್ದ. ಆದರೆ ಪಾದಯಾತ್ರೆಗೆ ಅಡ್ಡಪಡಿಸಿ ಎಂದು ಕರೆ ನೀಡಿ ಮೂರ್ಖರಾಗಬೇಕಾಗಿ ಬಂದ ರಾಜ್ಯ ಆಳುವ ಪಕ್ಷ ಆ ಧೈರ್ಯ ತೋರಲಿಲ್ಲ. ಪಿಣರಾಯಿ ವಿಜಯನ್ ಲಕ್ಷಾಂತರ ಜನರನ್ನುದ್ದೇಶಿಸಿ ಸಾಮಾಜಿಕ ನ್ಯಾಯದ ಪ್ರಶ್ನೆಯಿಂದ ಕೇಂದ್ರ ಮತ್ತು ತೆಲಂಗಾಣ ಸರಕಾರಗಳ ಕಾರ್ಪೊರೇಟ್-ಪರ, ಜನ-ವಿರೋಧಿ ಧೋರಣೆಗಳ ವರೆಗೆ ಹಲವು ವಿಷಯಗಳ ಮೇಲೆ ದೀರ್ಘವಾಗಿ ಮಾತಾಡಿದರು. ದೇಶದ ಜನತೆ ಒಟ್ಟಾಗಿ ನಿಂತರೆ ಬಿಜೆಪಿ ಮತ್ತು ಸಂಘ ಪರಿವಾರ ಅಜೇಯ ಎಂಬ ಮಿಥ್ಯೆಯನ್ನು ಒಡೆಯುವುದು ಕಷ್ಟವೇನಲ್ಲ, ಅವರಿಗೆ 2014ರಲ್ಲಿ ದೊರೆತದ್ದು 31ಶೇ. ಮತಗಳು ಮಾತ್ರ, ಉತ್ತರಪ್ರದೇಶದಲ್ಲೂ ಸಿಕ್ಕಿದ್ದು 39.7ಶೇ. ಮತಗಳು, ಗೋವ ಮತ್ತು ಮಣಿಪುರದಲ್ಲಿ ಅವರು ಸೋತಿರುವುದು ಸ್ಪಷ್ಟ, ಪಂಜಾಬಿನಲ್ಲಿ ಕೇವಲ 3 ಶಾಸಕರೊಂದಿಗೆ ನಾಲ್ಕನೇ ಸ್ಥಾನಕ್ಕೆ ಇಳಿದಿದೆ ಎಂದು ನೆನಪಿಸಿದರು.

ಪ್ರತ್ಯೇಕ ತೆಲಂಗಾಣ ರಾಜ್ಯ ರಚನೆಯಾದ ಮೇಲೂ ಜನಗಳ ಪರಿಸ್ಥಿತಿ ಹಾಗೆಯೇ ಉಳಿದಿದೆ. ಆದ್ದರಿಂದ ಕೆಂಪು ಮತ್ತು ನೀಲಿ ಬಾವುಟಗಳ ಹೋರಾಟಗಳು ಸಾಮಾಜಿಕ ನ್ಯಾಯ ಮತ್ತು ಸಮಗ್ರ ಅಭಿವೃದ್ಧಿ ನಡೆಯುವವ ವರೆಗೆ ನಿಲ್ಲುವುದಿಲ್ಲ ಎಂದ ತಮ್ಮಿನೇನಿ ವೀರಭದ್ರಂ ಎಡಪಕ್ಷಗಳು, ಜಾತಿ ಸಂಘಟನೆಗಳು, ಬುದ್ಧಿಜೀವಿಗಳು, ಸಾಮೂಹಿಕ ಸಂಘಟನೆಗಳು ಮತ್ತು ವಿವಿಧ ಪಕ್ಷಗಳೊಂದಿಗೆ ಸಮಾಲೋಚಿಸಿ ಜನತೆಯ ಸಮಸ್ಯೆಗಳನ್ನೆತ್ತಿಕೊಂಡು ನೇರ ಕಾರ್ಯಾಚರಣೆಯ ಒಂದು ಯೋಜನೆಯನ್ನು ರೂಪಿಸಲಾಗುವುದು ಎಂದು ಪ್ರಕಟಿಸಿದರು.

ಸಾರಧ ಮತ್ತು ನಾರದ: ಟಿಎಂಸಿ ಮುಖಂಡರನ್ನು ಬಂಧಿಸಿ, ಮುಖ್ಯಮಂತ್ರಿಗಳನ್ನು ಸಿಬಿಐ ತನಿಖೆಗೆ ಒಳಪಡಿಸಿ–ಸಿಪಿಐ(ಎಂ) ಆಗ್ರಹ

ಸಾರಧ ಹಗರಣ ಮತ್ತು ಆ ಕುರಿತ ನಾರದ ಕುಟುಕು ಕಾರ್ಯಾಚರಣೆ ಕುರಿತ ಸಿಬಿಐ ತನಿಖೆಯಲ್ಲಿ ಆಪಾದಿತ ಟಿಎಂಸಿ ಮುಖಂಡರನ್ನು ತಕ್ಷಣವೇ ಬಂಧಿಸಬೇಕು ಮತ್ತು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಯವರನ್ನೂ ತನಿಖೆಯ ವ್ಯಾಪ್ತಿಗೆ ಒಳಪಡಿಸಬೇಕು ಎಂದು ಸಿಪಿಐ(ಎಂ) ಪಶ್ಚಿಮ ಬಂಗಾಳ ರಾಜ್ಯ ಕಾರ್ಯದರ್ಶಿ ಸೂರ್ಯಕಾಂತ ಮಿಶ್ರ ಆಗ್ರಹಿಸಿದ್ದಾರೆ.

ಸಾರಧ ಹಗರಣದಲ್ಲಿ ಆಳುವ ತೃಣಮೂಲ ಕಾಂಗ್ರೆಸ್ ಪಕ್ಷದ ಕೆಲವಾರು ಮುಖಂಡರು ಹಣ ಸ್ವೀಕರಿಸಿರುವುದನ್ನು ತೋರಿಸಿರುವ ನಾರದ ಸುದ್ದಿ ಸಂಸ್ಥೆಯ ಕುಟುಕು ಕಾರ್ಯಾಚರಣೆಯ ಪ್ರಾಥಮಿಕ ತನಿಖೆಯನ್ನು ಸಿಬಿಐ ಮಾಡಬೇಕು ಎಂದು ಕಳೆದ ವಾರ ಕಲ್ಕತ್ತ ಹೈಕೋರ್ಟ್ ಆದೇಶಿಸಿತ್ತು. ಇದರ ವಿರುದ್ಧ ಪಶ್ಚಿಮ ಬಂಗಾಲ ಸರಕಾರ ಸುಪ್ರಿಂ ಕೋರ್ಟ್‌ಗೆ ಮನವಿ ಸಲ್ಲಿಸಿತ್ತು. ಆದರೆ ಸುಪ್ರಿಂ ಕೋರ್ಟ್ ಹೈಕೋರ್ಟಿನ ಆದೇಶವನ್ನು ಎತ್ತಿ ಹಿಡಿದಿದೆ.

ಇಂತಹ ತನಿಖೆ ನಡೆಯಬೇಕು ಎಂಬುದು ಸಿಪಿಐ(ಎಂ) ಮತ್ತು ರಾಜ್ಯದ ಇತರ ಪ್ರಜಾಪ್ರಭುತ್ವವಾದಿ ಶಕ್ತಿಗಳ ಬಹುದಿನಗಳ ಬೇಡಿಕೆಯಿದ್ದು ಟಿಎಂಸಿ ಸರಕಾರ ಅದನ್ನು ವಿರೋಧಿಸುತ್ತ ಬಂದಿತ್ತು.

ಹೈಕೋರ್ಟಿನ ಆದೇಶದ ಹಿನ್ನೆಲೆಯಲ್ಲಿ ಸಿಬಿಐ ಕಚೇರಿ ಎದುರು ಎಡರಂಗ ಏರ್ಪಡಿಸಿದ್ದ ಸಾರ್ವಜನಿಕ ಸಭೆಯಲ್ಲಿ ಸೂರ್ಯಕಾಂತ್ ಮಿಶ್ರ ಮಾತಾಡುತ್ತ ಸಿಬಿಐ ಈ ತನಿಖೆಯಲ್ಲಿ ತಾನೇ ಮುತುವರ್ಜಿ ವಹಿಸಿ ಕೆಲಸ ಮಾಡಬೇಕು, ರಾಜ್ಯದ ಸಂಪುಟದ ಸದಸ್ಯರು ಮತ್ತು ಇತರ ಆಳುವ ಪಕ್ಷದ ಸದಸ್ಯರು ಇದರಲ್ಲಿ ಆಪಾದಿತರಾಗಿರುವುದರಿಂದ ತನಿಖೆಯ ವ್ಯಾಪ್ತಿಯೊಳಕ್ಕೆ ರಾಜ್ಯದ ಮುಖ್ಯಮಂತ್ರಿಗಳನ್ನೂ ತರಬೇಕು ಎಂದು ಆಗ್ರಹಿಸಿದರು. ಮಣಿಪುರದಲ್ಲಿ ಜನಾದೇಶಕ್ಕೆ ವಿರುದ್ಧವಾಗಿ ಸರಕಾರ ರಚಿಸಲು ಬಿಜೆಪಿಗೆ ಅಲ್ಲಿ ಆಯ್ಕೆಯಾದ ಟಿಎಂಸಿ ಶಾಸಕನೂ ನೆರವಾಗಿದ್ದಾರೆ, ದೀದಿಬಾಯಿ ಮತ್ತು ಮೋದಿಭಾಯಿ ನಡುವೆ ರಾಜಕೀಯ ಮ್ಯಾಚ್‌ಫಿಕ್ಸಿಂಗ್ ಈ ಸಿಬಿಐ ತನಿಖೆಯ ಮೇಲೆ ಪರಿಣಾಮ ಬೀರುವುದಿಲ್ಲ, ಸಿಬಿಐ ಮುಕ್ತವಾಗಿ ಕೆಲಸ ಮಾಡಲು ಬಿಡಲಾಗುತ್ತದೆ ಎಂದು ಮಿಶ್ರ ಅವರು ಆಶಿಸಿದರು.

ಈ ನಡುವೆ ನಾರದ ನ್ಯೂಸ್‌ನ ಮುಖ್ಯಸ್ಥ ಮ್ಯಾಥ್ಯೂ ಸ್ಯಾಮುವೆಲ್ ಕೆಲವರು ತನ್ನ ಬೆನ್ನು ಬಿದ್ದಿದ್ದಾರೆ ಎಂದು ಪೋಲಿಸ್‌ಗೆ ದೂರು ಕೊಟ್ಟಿರುವುದಾಗಿ ವರದಿಯಾಗಿದೆ..

ಮಣಿಪುರದಲ್ಲಿ ಸಶಸ್ತ್ರ ಪಡೆಗಳ ವಿಶೇಷ ಅಧಿಕಾರಗಳ ಕಾಯ್ದೆ ಎಎಫ್‌ಎಸ್‌ಪಿಎ ಯನ್ನು ರದ್ದುಪಡಿಸಬೇಕೆಂದು ಸುಮಾರು ಎರಡು ದಶಕಗಳಿಂದ ಹೋರಾಡುತ್ತಿರುವ ಪ್ರಖ್ಯಾತ ಮಹಿಳೆ ಇರೋಮ್ ಶರ್ಮಿಳ ಇದಕ್ಕೆ ದೇಶಾದ್ಯಂತ ಬೆಂಬಲ ಅಣಿನೆರೆಸುವ ಪ್ರಯತ್ನದ ಭಾಗವಾಗಿ ಈ ವಾರ ತಿರುವನಂತಪುರಕ್ಕೆ ಭೇಟಿ ನೀಡಿ ಸಿಪಿಐ(ಎಂ) ಕೇರಳ ರಾಜ್ಯ ಸಮಿತಿ ಕಚೇರಿ ಎಕೆಜಿ ಭವನಕ್ಕೆ ಭೇಟಿ ನೀಡಿದರು. ಅವರು ರಾಜ್ಯ ಕಾರ್ಯದರ್ಶಿ ಯುವರನ್ನಲ್ಲದೆ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಮತ್ತು ಹಿರಿಯ ಮುಖಂಡರಾದ ವಿಎಸ್ ಅಚ್ಯುತಾನಂದನ್ ಅವರನ್ನು ಭೇಟಿಯಾಗಿದ್ದರು.



ಪಶ್ಚಿಮ ಬಂಗಾಲ: ಅಕ್ರಮಗಳ ವಿರುದ್ಧ ಪ್ರತಿಭಟನೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿನಿಯರ ಮೇಲೆ ಕಸ್ಟಡಿಯಲ್ಲಿ ಲೈಂಗಿಕ ಚಿತ್ರಹಿಂಸೆ

ಪಶ್ಚಿಮ ಬಂಗಾಲದಲ್ಲಿ ಶಿಕ್ಷಕರ ನೇಮಕಾತಿಯಲ್ಲಿ ನಡೆಯುತ್ತಿರುವ ಅಕ್ರಮಗಳನ್ನು ಪ್ರತಿಭಟಿಸಿ ವಿದ್ಯಾರ್ಥಿಗಳ ಪ್ರತಿಭಟನೆಯ ದಮನಕ್ಕೆ ಮುಂದಾದ ಪಶ್ಚಿಮ ಬಂಗಾಲದ ಪೋಲೀಸರು ಮಾರ್ಚ್ 9ರಂದು ಹಲವಾರು ಪ್ರತಿಭಟನಾಕಾರರನ್ನು ಬಂಧಿಸಿದರು. ಅವರಲ್ಲಿ ನಾಲ್ಕು ವಿದ್ಯಾರ್ಥಿನಿಯರನ್ನು ಒಂದು ರಾತ್ರಿ ಲಾಕಪ್ಪಿನಲ್ಲಿ ಇಟ್ಟ ಮೇಲೆ ಮರುದಿನ ಅವರನ್ನು ಪೋಲೀಸ್ ಕಸ್ಟಡಿಗೆ ಕಳಿಸಿ ಅವರನ್ನು ರಾಜಕೀಯ ಕಾರ್ಯಕರ್ತರು ಎಂದು ಪರಿಗಣಿಸುವ ಬದಲು ಅವರೊಡನೆ ಸಾಧಾರಣ ಕ್ರಿಮಿನಲ್‌ಗಳಂತೆ ವರ್ತಿಸಲಾಯಿತು. ಹಾಗೂ ಮಹಿಳಾ ರಿಫಾರ್ಮೆಟರಿಗೆ ಕಳಿಸಲಾಯಿತು. ಅಲ್ಲಿ ಮಹಿಳಾ ಕಾನ್ಸ್‌ಟೇಬಲ್‌ಗಳು ಅವರನ್ನು ವಿವಿಧ ರೀತಿಗಳಲ್ಲಿ ಚಿತ್ರಹಿಂಸೆಗೊಳಪಡಿಸಲಾಯಿತು. ಇದನ್ನೆಲ್ಲ ತಾವು ಮೇಲಿನಿಂದ ಆದೇಶದ ಮೇರೆಗೆ ನಡೆಸುತ್ತಿದ್ದೇವೆ ಎಂದೂ ಅವರು ಹೇಳಿರುವುದಾಗಿ ತಿಳಿದು ಬಂದಿದೆ. ಈಗ ಆ ವಿದ್ಯಾರ್ಥಿನಿಯರು ಮಾನಸಿಕವಾಗಿ ಬಳಲಿ ಹೋಗಿದ್ದಾರೆ.

ಈ ಆಘಾತಕಾರಿ ಘಟನೆಯನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘ ರಾಷ್ಟ್ರೀಯ ಮಹಿಳಾ ಆಯೋಗದ ಗಮನಕ್ಕೆ ತಂದಿದೆ. ಹಿರಿಯ ಮುಖಂಡರಾದ ಬೃಂದಾ ಕಾರಟ್‌ರೊಂದಿಗೆ ಸಂಘಟನೆಯ ಇಬ್ಬರು ಪದಾಧಿಕಾರಿಗಳಾದ ಪುಣ್ಯವತಿ ಮತ್ತು ಆಶಾ ಶರ್ಮ ಆಯೋಗದ ಅಧ್ಯಕ್ಷೆ ಲಲಿತಾ ಕುಮಾರಮಂಗಲಂ ಅವರನ್ನು ಭೇಟಿಯಾಗಿ ಒಂದು ಮನವಿ ಪತ್ರವನ್ನು ಸಲ್ಲಿಸಿದರು.


ಮನವಿಯನ್ನು ಸ್ವೀಕರಿಸಿದ ಅಧ್ಯಕ್ಷರು ನಿಯೋಗದ ಸಮ್ಮುಖವೇ ಒಬ್ಬ ಈ ನಾಲ್ವರಲ್ಲಿ ಒಬ್ಬ ವಿದ್ಯಾರ್ಥಿನಿಯನ್ನು ಫೋನಿನಲ್ಲಿ ಸಂಪರ್ಕಿಸಿದರು. ನಂತರ ಒಂದು ತನಿಖಾ ತಂಡವನ್ನು ರಚಿಸಿ ಅದು ಪಶ್ಚಿಮ ಬಂಗಾಲಕ್ಕೆ ತೆರಳಿದೆ. ಈ ದೂರನ್ನು ತುರ್ತಾಗಿ ಪರಿಶೀಲಿಸಲಾಗುವುದು ಎಂದು ಅವರು ನಿಯೋಗಕ್ಕೆ ಭರವಸೆ ನೀಡಿದರು.

ಕುರ್ಸ್ಕ ಗಣಿ ಶೋಧ ಮತ್ತು ಲೆನಿನ್

ಕ್ರಾಂತಿ ನಂತರದ ಸೋವಿಯೆಟ್ ಸರಕಾರ ಮೂರು ವಿಷಯುಗಳಿಗೆ – ಭೂಹಂಚಿಕೆಯ ಪ್ರಶ್ನೆ, ವಿಜ್ಞಾನ, ಲಿಂಗಸಮಾನತೆ– ಆದ್ಯತೆ ನೀಡಿತು. ವಿಜ್ಞಾನದ ಬಗ್ಗೆ ಆದ್ಯತೆಯ ಬಗ್ಗೆ ಕೇಂದ್ರ ನಾಯಕತ್ವದಲ್ಲೇ ಇನ್ನೂ ಸ್ಪಷ್ಟತೆ ಇಲ್ಲದಿರುವಾಗ, ಒಂದು ವೈಜ್ಞಾನಿಕ ಸಂಶೋಧನೆ (ಕುರ್ಸ್ಕ ಕಾಂತೀಯ ಅಸಂಗತತೆ) ಬಗ್ಗೆ ಲೆನಿನ್ ತೋರಿದ ಅತೀವ ಕಾಳಜಿ ಭಾರೀ ಪ್ರಮಾಣದ ಖನಿಜದ ಮಾಹಿತಿ ಕೊಟ್ಟ ಸೋವಿಯೆಟ್ ಅವಧಿಯ ಸ್ವಾರಸ್ಯಕರ ಅಧ್ಯಾಯ ಇಲ್ಲಿದೆ. ರಶ್ಯನ್ ಕ್ರಾಂತಿಯ ಶತಮಾನೋತ್ಸವ ಸ್ಫೂರ್ತಿದಾಯಕ ಸ್ಮರಣೆಯ ಭಾಗ ಇದು.

(ಮೂಲ: **ಡಾ. ಎಸ್.ಚಟರ್ಜಿ**, ಅನುವಾದ: **ಎನ್.ಪ್ರಭಾ**)

ಝಾರ್ ದೊರೆಗಳಿಂದ ಮುಕ್ತಿಗೊಂಡ ರಷ್ಯಾದ ಸಾಮ್ರಾಜ್ಯದ ಹಲವು ಭಾಗಗಳು ಅಕ್ಟೋಬರ್ 25ರ 1917 ರಲ್ಲಿ ರೈತರು ಮತ್ತು ಕಾರ್ಮಿಕರು ಸರ್ಕಾರ ರಚಿಸುವ ಮೂಲಕ ಹೊಸ ಮಾದರಿಯ ಆಡಳಿತ ಅಸ್ತಿತ್ವಕ್ಕೆ ಬಂತು. (ನೂತನ ಗ್ರೆಗೋರಿಯನ್ ಕ್ಯಾಲೆಂಡರ್ ಪ್ರಕಾರ ಇದು ನವೆಂಬರ್ 07) ಈ ನೂತನ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ 3 ವಿಷಯಗಳಿಗೆ ಪ್ರಧಾನ ಆದ್ಯತೆಯನ್ನು ನೀಡಿತು. ಅವುಗಳೆಂದರೆ – ಭೂಹಂಚಿಕೆಯ ಪ್ರಶ್ನೆ, ವಿಜ್ಞಾನ, ಲಿಂಗಸಮಾನತೆ. ಇವು ಸರ್ಕಾರ ಅಸ್ತಿತ್ವಕ್ಕೆ ಬಂದ ಶೀಘ್ರದಲ್ಲೇ ಆದೇಶವಾಗಿ ಹೊರಬಂದವು.



"ಲೆನಿನ್ ಘೋಷಣೆ : ವಿದ್ಯುತ್ + ಸೋವಿಯಟ್ ಶಕ್ತಿ = ಕಮ್ಯುನಿಸಂ" – ಪೋಸ್ಟರ್

"ವಿಜ್ಞಾನದ ಆಯಕಟ್ಟಿನ ಯುದ್ಧ"

1917ರ ಅಕ್ಟೋಬರ್ 27ರಂದು ಶಾಂತಿಸ್ಥಾಪನೆಗಾಗಿ ಈ ಸರ್ಕಾರ ಒಂದು ಘೋಷಣೆ ಹೊರಡಿಸಿತು. ಜರ್ಮನಿ, ಆಟೋಮಾನ್ ಟರ್ಕಿ, ಆಸ್ಟ್ರೋ–ಹಂಗೇರಿಯನ್ ಸರ್ಕಾರಗಳು ಸ್ವಾಯತ್ತ ಸರ್ಕಾರಗಳನ್ನು ರಚಿಸಿಕೊಳ್ಳಬೇಕು ಮತ್ತು ಶಾಂತಿ ಸ್ಥಾಪನೆಗೆ ಮುಂದಾಗಬೇಕು, ಎಂದು ಆ ಘೋಷಣೆ ಹೇಳಿತು. ಸರ್ಕಾರ ರಚನೆಯಾಗುವ ಈ ಹಂತದಲ್ಲಿ ನಮಗೆ ನಿಮ್ಮ ಭೂಮಿ ಬೇಕಿಲ್ಲ ಜೊತೆಗೆ ನಾವು ನಿಮಗೆ ಯಾವುದೇ ಪರಿಹಾರಗಳನ್ನೂ ನೀಡುವುದಿಲ್ಲ ಹಾಗೂ ಪಡೆಯುವುದಿಲ್ಲ – ಆ ದೇಶಗಳಿಗೆ ಇದು ರಷ್ಯಾದ ನೂತನ ಸರ್ಕಾರದ ಅಂದಿನ ಘೋಷಣೆಯ ಮುಖ್ಯ ಪ್ರಸ್ತಾಪವಾಗಿತ್ತು. ಆದರೆ ಆ ನಂತರ, ಮೇಲೆ ಹೆಸರಿಸಿದ ಸರ್ಕಾರಗಳು ಹೊಸದಾಗಿ ಉದಯಿಸಿದ್ದ ರಷ್ಯಾ ಸರ್ಕಾರಕ್ಕೆ ಹಲವು ಸ್ವರೂಪದ ಕಿರುಕುಳಗನ್ನು ನೀಡಲು ಪ್ರಾರಂಭಿಸಿದವು. ಅಂತಿಮವಾಗಿ ಟ್ರಾಟ್‌ಸ್ಕಿಯವರಿಂದ ಮಾರ್ಚ್ 3ರ 1918 ರಂದು ಶಾಂತಿ ಒಪ್ಪಂದಕ್ಕೆ ಸಹಿ ಬಿದ್ದಿತ್ತು. ಇದು ಲೆನಿನ್ ರವರ ಸ್ಪಷ್ಟ ಆದೇಶದ ಮೇರೆಗೆ ಜರುಗಿದ ಒಪ್ಪಂದವೇ ಆಗಿತ್ತು. ಬ್ರೆಸ್ಟ್ ಲಿಟಾಫ್ಸ್ಕನಲ್ಲಿ (ಉಕ್ರೈನ್ ನಲ್ಲಿಲ್ಲಿರುವ ಸ್ಥಳ). ಈ ಒಪ್ಪಂದದಲ್ಲಿ ಭಾಗವಹಿಸಿದ್ದ ರಷ್ಯಾ, ಉಕ್ರೈನ್, ಪೋಲೆಂಡ್, ಫಿನ್‌ಲ್ಯಾಂಡ್, ಬೈಲೊರಶ್ಯಾ, ಎಸ್ತೋನಿಯಾ, ಲ್ಯಾಟ್ವಿಯಾ ಮತ್ತು ಲಿತುವಾನಿಯ ದೇಶಗಳು ಝಾರ್‌ಗಳ ಅಧೀನದಿಂದ ಹೊರಬಂದು ಈ ಒಪ್ಪಂದಕ್ಕೆ ಸಹಿ ಮಾಡಿದವು. ಈ ಒಪ್ಪದ್ದಂತೆ ಈ ದೇಶಗಳಿಗೆ ಸ್ವಾಯತ್ತತೆಯನ್ನು ಘೋಷಿಸಲಾಯಿತು.

1917ರ ಬೇಸಿಗೆಯ ನಂತರ ರಷ್ಯನ್ ಜನರ ಇಚ್ಚೆಯು ಯುದ್ಧವು ಮುಕ್ತಾಯಗೊಂಡು ಸೈನಿಕರು ಮನೆಗಳಿಗೆ ಹಿಂತಿರುಗಬೇಕೆಂದಿತ್ತು. ಸೈನಿಕರನ್ನು ಲೆನಿನ್‌ರವರು ಸಮವಸ್ತ್ರದಲ್ಲಿರುವ ರೈತರು ಎಂದು ಕ–ರೆದರು. ಕೆರೆನ್ಸ್ಕಿ ಪ್ರಭುತ್ವವು ಇದನ್ನು ಒಪ್ಪದೆ ತ್ರಿಮೈತ್ರಿ ನಂತರವೂ ಎಷ್ಟು ಸಾಧ್ಯವೋ ಅಷ್ಟು ಭೂಕಬಳಿಕೆಯನ್ನು ಮುಂದುವರೆಸಿತು. ಹೀಗಾಗಿ ಗಡಿಪ್ರದೇಶವನ್ನು ಕಾಯುತ್ತಲೇ ಶಾಂತಿ ಸಂಧಾನಗಳನ್ನು ಮುಂದುವರೆಸಬೇಕಾಯಿತು. ಜನರು ಶಾಂತಿ ಬಯಸಿದರೂ ಯುದ್ಧಕ್ಕೂ ಸಿದ್ಧರಿದ್ದರು.

ಇದೇ ಸಂದರ್ಭದಲ್ಲಿ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳ ಒಕ್ಕೂಟವು ಲೆನಿನ್ ರವರನ್ನು ಭೇಟಿಯಾಗಿ ಸೈನ್ಯದಲ್ಲಿ ಸೇರಿಕೊಳ್ಳುವ ಇಚ್ಚೆಯನ್ನು ವ್ಯಕ್ತಪಡಿಸಿದರು. ವಿದ್ಯಾರ್ಥಿಗಳ ಮಾತುಗಳನ್ನು ಆಲಿಸಿದ ಲೆನಿನ್ "ವಿಜ್ಞಾನದ ಆಯಕಟ್ಟಿನ ಯುದ್ಧದಲ್ಲಿ ಸೇರಿಕೊಳ್ಳಿ"ಎಂದರು. ಲೆನಿನ್ ರವರ ಮಾತುಗಳಿಂದ ಆಶ್ಚರ್ಯಗೊಂಡ ವಿದ್ಯಾರ್ಥಿಗಳು ಲೆನಿನ್ ರವರ ಜೊತೆ ವಾಗ್ವಾದಕ್ಕಿಳಿದರು. ಈ ವಿದ್ಯಾರ್ಥಿಗಳಲ್ಲಿ ಕೆಲವರು ಅಂತಿಮವಾಗಿ ಕುರ್ಸ್ಕ (52ಡಿಗ್ರಿ ಉತ್ತರ, 35ಡಿಗ್ರಿ ಪೂರ್ವ) ಪ್ರಾಂತ್ಯದಲ್ಲಿನ ಭೂ ಕಾಂತೀಯ ಅಸಂಗತತೆ ಕುರಿತ ಸಂಶೋಧನೆಯಲ್ಲಿ ತೊಡಗಿದರು. ವಿಜ್ಞಾನದ ಹುಡುಕಾಟದ ಈ ಕುರಿತಂತೆ ಹೆಚ್ಚಿನದನ್ನು ತಿಳಿದುಕೊಳ್ಳೋಣ.

ಕುರ್ಸ್ಕ ಕಾಂತೀಯ ಬಲದ ಅಸಂಗತತೆ

ನಮಗೆ ಗೊತ್ತಿರುವ ಹಾಗೆ ಭೂಮಿಯು ಒಂದು ದೈತ್ಯ ಮ್ಯಾಗ್ನೆಟ್. ಆದ್ದರಿಂದಲೆ ತಡೆಯಿಲ್ಲದೆ ತೂಗಾಡುವ ಮಾಗ್ನೆಟ್ ಉತ್ತರ–ದಕ್ಷಿಣ ದಿಕ್ಕನ್ನು ಸೂಚಿಸುವುದು. ಇದರಿಂದಲೇ ನಾವಿಕರು ಮ್ಯಾಗ್ನೆಟ್ ದಿಕ್ಸೂಚಿಯನ್ನು ಬಳಸುವ ಮೂಲಕ ತಾವು ಸೇರಬೇಕಾದ ಸ್ಥಳಗಳನ್ನು ತಲುಪುವರು.

ಭೂಮಿಯ ಅಯಸ್ಕಾಂತೀಯ ಕ್ಷೇತ್ರಬಲವು ಸ್ಥಳದಿಂದ ಸ್ಥಳಕ್ಕೆ ವ್ಯತ್ಯಯವಾಗಿರುತ್ತದೆ. ಭೂಮಿಯ ಮೇಲಿನ ಆಯಸ್ಕಾಂತೀಯ ಬಲವು ದುರ್ಬಲವಾಗಿದೆ. ಇದರ ಮೌಲ್ಯ 0.25–0.65 ಗೌಸ್ ಗಳಷ್ಟಿದ್ದು ಗೌಸ್ ಎನ್ನುವುದು ಕಾಂತೀಯ ಕ್ಷೇತ್ರ ಬಲದ ಒಂದು ಮಾಪಕ. ಉದಾಹರಣೆಗೆ, ಮನೆಯಲ್ಲಿರುವ ರೆಫ್ರಿಜರೇಟರ್ ಮೋಟಾರಿನ ಕಾಂತೀಯ ಬಲವು ಭೂಮಿಯ ಅಯಸ್ಕಾಂತೀಯ ಬಲಕ್ಕಿಂತ 300–400 ಪಟ್ಟು ಹೆಚ್ಚಿರುತ್ತದೆ.

ರಷ್ಯಾದ ದಕ್ಷಿಣ–ಪಶ್ಚಿಮ ಭಾಗದಲ್ಲಿ ಇರುವ ಸ್ಥಳ ಕುರ್ಸ್ಕ. ಈ ಸ್ಥಳವು ಮಾಸ್ಕೋ ನಗರದ ದಕ್ಷಿಣಕ್ಕೆ ಸುಮಾರು ನಾನ್ನೂರು ಕಿಲೋಮೀಟರ್ ದೂರದಲ್ಲಿದೆ. 1773ರಲ್ಲಿ ಪರಿಶೋಧಕರ ಒಂದು ಗುಂಪು ಈ ಪ್ರದೇಶದಲ್ಲಿನ ಕಾಂತೀಯತೆಯ ಬಲದಲ್ಲಿನ ದೊಡ್ಡ ವ್ಯತ್ಯಾಸಗಳನ್ನು ಪತ್ತೆ ಹಚ್ಚಿದರು. ಈ ವ್ಯತ್ಯಾಸವು 0.2 ಗೌಸ್ ನಿಂದ 0.8 ಗೌಸ್ ಗಳಷ್ಟು ವ್ಯತ್ಯಯವನ್ನು ಸೂಚಿಸಿತು. ಅದೂ ಅಲ್ಲದೆ, ಇಷ್ಟು ದೊಡ್ಡ ವ್ಯತ್ಯಯವು 2–3 ಕಿಲೋ ಮೀಟರ್ ನಷ್ಟು ದೂರದಲ್ಲಿ ಕಾಣುವುದು. ನೂರು ವರ್ಷಗಳ ನಂತರ 1874–1898ನೇ ಇಸವಿಗಳಲ್ಲಿ ವಿಸ್ತೃತವಾದ ಪರಿಶೋಧನೆಯನ್ನು ಕೈಗೊಳ್ಳಲಾಯಿತು. ಇಷ್ಟು ದೊಡ್ಡ ಕಾಂತೀಯ ಬಲವು ಅದರ ಜೊತೆಗೂಡಿದ ವ್ಯತ್ಯಾಸವು ಒಂದು ವಿಸ್ತೀರ್ಣವಾದ ಪ್ರದೇಶದಲ್ಲಿ ಅಸ್ತಿತ್ವದಲ್ಲಿದೆಯೆಂಬುದು ಪರಿಶೋಧನೆಯಿಂದ ತಿಳಿದು ಬಂತು.


ಸೋವಿಯೆಟ್ ಭೂವಿಜ್ಞಾನಿ ಗುಬ್ಕಿನ್

ಇದು ಲೆನಿನ್ ರವರ ಖ್ಯಾತ ಹೇಳಿಕೆಯಂತೆ "ಸಮಾಜವಾದ ಎಂಬುದು ವಿದ್ಯುತ್ ಮತ್ತು ಸೋವಿಯತ್ ರೀತಿಯ ವ್ಯವಸ್ಥೆ". ವೈಜ್ಞಾನಿಕ ಮತ್ತು ತಂತ್ರಜ್ಞಾನದ ಬುನಾದಿಯನ್ನು ಕ್ರಾಂತಿಯ ನಂತರದ ರಷ್ಯಾದಲ್ಲಿ ಸ್ಥಾಪಿಸುವುದು ಸ್ವಾಭಾವಿಕ. ಇದು ಯಾವುದೇ ಸಮಾಜವಾದಿ ರಾಷ್ಟ್ರಗಳ ಪ್ರಮುಖ ಆದ್ಯತೆ. ಈ ಬುನಾದಿ 1917 ರಲ್ಲಿ ಇರಲೇ ಇಲ್ಲ. ಲೆನಿನ್ ಅವರ ಉತ್ಸುಕತೆಯಿಂದ ಒಂದು ಸಂಶೋಧನಾ ಗುಂಪನ್ನು ಐವನ್ ಗುಬ್ಕಿನ್ ಅವರ ನೇತೃತ್ವದಲ್ಲಿ 1920ನೇ ಇಸವಿಯಲ್ಲಿ ರೂಪಿಸಲಾಯಿತು. ಲೆನಿನ್ ಅವರ ವಿಜ್ಞಾನದೆಡೆಗಿನ ಅಪಾರ ಕಾಳಜಿ ಅವರ ಈ ಪತ್ರದಿಂದ (ಲೆನಿನ್ ಪತ್ರ–1) ತಿಳಿಯುತ್ತದೆ.

ಲೆನಿನ್ ಪತ್ರ–1

ಮೇ 13, 1922:
ಕಾಮ್ರೇಡ್ ಸ್ಮಾಲಿಯಾ ನಿನೋವ್.

ದಯವಿಟ್ಟು ಈ ವಿಷಯವನ್ನು ತುರ್ತಾಗಿ ಪರಿಶೀಲಿಸಿ
ಕುರ್ಸ್ಕ ಅಸಂಗತತೆಯ ಬಗ್ಗೆ ಸಂಶೋಧನೆಯನ್ನು ನಡೆಸುತ್ತಿದ್ದ ಶೈಕ್ಷಣಿಕ ತಜ್ಞರಾದ ಲಜಾರೇವ್ ಗೆ ಹಣದ ಬೆಂಬಲವನ್ನು ನಿರಾಕರಿಸಿದ್ದರ ಬಗ್ಗೆ ಮತ್ತು ಅವರು ಏನು ಬಯಸಿದ್ದರು, ಎಷ್ಟು ಸಂದಾಯವಾಗಿದೆ ಎಂಬುದನ್ನು ತಿಳಿಸುವಂತೆ


– ಲೆನಿನ್

ಕಬ್ಬಿಣ ಗಣಿಯ ಮಾಹಿತಿ ಕೊಟ್ಟ ಕಾಂತೀಯ ಅಸಂಗತತೆ

ಲೆನಿನ್ ಅವರಿಗೆ ನಿಧಾನ ಗತಿಯ ಪ್ರಗತಿ ಎಂದರೆ ಅಸಹನೆ. ಬಹುಶಃ ಅದಕ್ಕೆ ಕಾರಣ ಕೇಂದ್ರ ಸಮಿತಿಯಲ್ಲಿ ಅನೇಕರಿಗೆ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ನೂತನ ಸರ್ಕಾರ ಹೇಗೆ ಸ್ಥಾಪಿಸಬೇಕೆಂಬ ಕಲ್ಪನೆ ಇರಲಲ್ಲ. ಲೆನಿನ್ ರವರಿಗೂ ಸಹ ಇದು ಹೊಸ ಪ್ರಯತ್ನ. ಅವರು ಇದರ ಅನೇಕ ವಿಷಯಗಳನ್ನು ನೂತನ ಕ್ರಾಂತಿಕಾರಿ ಸರ್ಕಾರದ ಶಿಕ್ಷಣ ಮಂತ್ರಿಯಾದ ಲೂನಾಚಾರಸ್ಕಿ ಅವರೊಂದಿಗೆ ಕ್ರಾಂತಿಗೂ ಮುನ್ನಾ ದಿನಗಳಲ್ಲಿಯೇ ಹಂಚಿಕೊಂಡಿದ್ದರು. ಆದರೆ, ಈ ವಿಷಯದ ಬಗ್ಗೆ ಚರ್ಚೆ ಮಾಡಲು ಆಗಷ್ಟೇ ಝಾರ್ ಹಿಡಿತದಿಂದ ಹೊರಬಂದಿದ್ದ ಕಾರಣದಿಂದ ಬಹಳಷ್ಟು ಜನ ಲಭ್ಯ ಇರಲಿಲ್ಲ. ಅದೂ ಅಲ್ಲದೆ ಲೆನಿನ್ ಅವರಿಗೆ ವಿದೇಶೀ ಅಧಿಕಾರಿಗಳು ಮತ್ತು ಶತ್ರುಗಳು ಇವರ ವೈಜ್ಞಾನಿಕ ಪ್ರಗತಿಯನ್ನು ನಾಶ ಮಾಡುವರೆಂಬ ಸಂದೇಹವಿತ್ತು. ಈ ಕುರ್ಸ್ಕ ಅಸಂಗತದ ಬಗ್ಗೆ ಅವರಿಗಿದ್ದ ಸಂಶಯ ಅಕ್ಷರಶಃ ನಿಜವಾಗಿತ್ತು. ಈ ವಿಷಯದ ಬಗ್ಗೆ 14 ವರ್ಷಗಳ ಕಾಲ (1884–1898) ಮಾಸ್ಕೋ ವಿಶ್ವ ವಿದ್ಯಾಲಯದ ಅರ್ನೆಸ್ಟ್ ಲೈಸ್ಟ್ ಅವರು ಸಂಶೋಧನೆ ನಡೆಸಿದ್ದರು. ಈ ಕ್ಲಿಷ್ಟಕರವಾದ ಸಂಶೋಧನೆಯ ಫಲಿತಾಂಶವೆಂದರೆ, ಈ ಅಸಂಗತತೆಗೆ ಮೂಲಕಾರಣ ಆ ಪ್ರದೇಶದ ಕಬ್ಬಿಣ ಖನಿಜದ ಖನಿಯಾಗಿತ್ತು ಎಂಬುದು. ದುರಂತವೆಂದರೆ ಲೈಸ್ಟ್ ಅವರ ಸಂಶೋಧನಾ ದತ್ತಾಂಶಗಳನ್ನು ಜರ್ಮನ್ ಗೂಢಚಾರಿಗಳು ಕದ್ದು, ರಷ್ಯನ್ನರ ವೈಜ್ಞಾನಿಕ ಪ್ರಗತಿ ಹೆಜ್ಜೆಗಳನ್ನು ತಡೆಗಟ್ಟಿ ಅವರ ದತ್ತಾಂಶಗಳನ್ನು ಮರಳಿ ರಷ್ಯನ್ನರಿಗೇ ತುಂಬಾ ದುಬಾರಿ ಮೊತ್ತಕ್ಕೆ ಮಾರಲು ಸಿದ್ಧರಿದ್ದರು.

ಲೆನಿನ್ ಜರ್ಮನ್ ಅಧಿಕಾರಿಗಳ ಈ ಕೋರಿಕೆಯನ್ನು ನಿರಾಕರಿಸಿ, ಹಣಸಹಾಯ ಮಾಡಲು ತಡಮಾಡಿದ ತಮ್ಮ ಸಂಗಾತಿಗಳನ್ನೇ ತರಾಟೆಗೆ ತೆಗೆದುಕೊಂಡರು. ಈ ಕೆಳಗಿನ ಪತ್ರವು (ಲೆನಿನ್ ಪತ್ರ–2) ಇದರ ಬಗ್ಗೆ ಸ್ಪಷ್ಟವಾಗಿ ತಿಳಿಸುತ್ತದೆ.

ಗುಬ್ಕಿನ್ ಅವರ ಪರಿಶೋಧನೆಯು 1920 ರಿಂದ 1925 ವರೆಗೆ ನಡೆದಿತ್ತು. 1931 ರ ಹೊತ್ತಿಗೆ ಈ ಅಪೂರ್ವ ಕಬ್ಬಿಣ ಖನಿಜದ ಅಸ್ತಿತ್ವ ದೃಢೀಕರಿಸಲ್ಪಟ್ಟು ಅಲ್ಲಿನ ಕಬ್ಬಿಣದ ಪ್ರಮಾಣ 60% ಕ್ಕಿಂತ ಹೆಚ್ಚಾಗಿತ್ತು. ಇದರ ವಿಸ್ತೀರ್ಣವು 120,000 ಚದರ ಕಿಲೋ ಮೀಟರ್ ನಷ್ಟಿದ್ದು – ಇದು ಕರ್ನಾಟಕದ ವಿಸ್ತೀರ್ಣಕ್ಕೆ ಹೋಲಿಸಿದರೆ ಮೂರನೆ ಎರಡರಷ್ಟಿದೆ. ಗುಬ್ಕಿನ್ ಅವರು ಸೋವಿಯತ್ ಸರ್ಕಾರದ ಅನೇಕ ಪ್ರಶಸ್ತಿಗಳನ್ನು ಪಡೆದು ಮಾಸ್ಕೋ ನಗರದಲ್ಲಿ 1937 ನೇ ಇಸವಿಯಲ್ಲಿ ಜರುಗಿದ ಅಂತರರಾಷ್ಟೀಯ ಭೂವಿಜ್ಞಾನದ ಸಮ್ಮೇಳನದ ಅ ಧ್ಯಕ್ಷರಾಗಿ ಜವಾಬ್ದಾರಿ ನಿರ್ವಹಿಸಿದರು. ಖುರ್ಸ್ಕ ಗಣಿಯು 1952ನೇ ಇಸವಿಯಲ್ಲಿ ಕಾರ್ಯರೂಪ ತಾಳಿ ಅಲ್ಲಿನ ಕೆಲವು ಗಣಿಗಳಿಗೆ ಗುಬ್ಕಿನ್ ಅವರ ಹೆಸರನ್ನಿಡಲಾಯಿತು. ತೈಲ ಮತ್ತು ನೈಸರ್ಗಿಕ ಅನಿಲಗಳ ಬಗ್ಗೆ ಸಂಶೋಧಿಸುವ ವಿಶ್ವ ವಿದ್ಯಾಲಯಕ್ಕೆ ಗುಬ್ಕಿನ್ ಅವರ ಹೆಸರನ್ನಿಡಲಾಯಿತು. ಗುಬ್ಕಿನ್ ಕಾಲದಲ್ಲಿ ಈ ಪರಿಶೋಧನೆಗಳನ್ನು ಭೂಪರೀಕ್ಷೆ ಮೂಲಕ ನಡೆಸಲಾಗುತ್ತಿತ್ತು. ಈಗಿನ ಕಾಲದಲ್ಲಿ, ವೈಮಾನಿಕ ಮತ್ತು ಬಾಹ್ಯಾಕಾಶ ಪರಿಕರಗಳು ಇಂತಹ ಅಸಂಗತತೆಗಳನ್ನು ಕಂಡುಕೊಳ್ಳಬಲ್ಲವು.


ಕುರ್ಸ್ಕ್ ಕಾಂತೀಯ ವ್ಯತ್ಯಯ ಮತ್ತು ಕಬ್ಬಿಣ ಗಣಿ – ಲಿನೊಕಟ್ ಕಲಾಕೃತಿ

ಲೆನಿನ್ ಪತ್ರ–2

"ಸಂಗಾತಿ ರೈಕೋವ್",
ಪ್ರತಿ: ಸಂಗಾತಿ ಸ್ವೈರೂಪ, ಸಿ.ಪಿ.ಸಿ ಆಡಳಿತ ಮಂಡಳಿ.

ಕುರ್ಸ್ಕ ಅಸಂಗತತೆಯ ಬಗ್ಗೆ ನಮ್ಮ ಪ್ರಮುಖ ವೈಜ್ಞಾನಿಕ ಸಂಶೋಧನೆಯ ಪ್ರಗತಿಯನ್ನು ತಿಳಿಸಲು ನಿಮ್ಮ ಗಮನ ಸೆಳೆಯಲು ಬಯಸುತ್ತೇನೆ. ಸಂಗಾತಿ ಕ್ರೆಜಿಝುನ್ ಹೌಸ್ಕಿ ಮತ್ತು ಇತರೆ ಇಂಜಿನಿಯರ್‌ಗಳ ಅಭಿಪ್ರಾಯದಂತೆ ನಮ್ಮಲ್ಲಿ ಪ್ರಮುಖವಾದ ಕಬ್ಬಿಣ ಅದಿರಿನ ಖನಿಯಿದೆ ಎಂದು ಪುರಾವೆಯಾಗಿದೆ. ಸಂಗಾತಿ ಮಾರ್ಟೈನ್ಸ್ ಸಹ ಇದು ಈಗಾಗಲೆ ಪುರಾವೆಯಾಗಿದೆ ಎಂದು ನಂಬುತ್ತಾರೆ. ಇನ್ನು ಮೂರು ವಾರಗಳ ಸಮಯದಲ್ಲಿ ಅವರು ಅಲ್ಲಿಗೆ ಹೋಗಲು ಸಿದ್ಧರಿರುತ್ತಾರೆ. ನಾವೀಗ ನಿರ್ಧರಿಸಬೇಕಾದದ್ದು ಅವರೊಂದಿಗೆ ನಮ್ಮ ರಷ್ಯಾದ ಪರಿಸ್ಥಿತಿಯನ್ನು ಬಲ್ಲ ಪರಿಣಿತ ಇಂಜಿನಿಯರುಗಳನ್ನು ಯೋಜನಾ ಆಯೋಗದ ವತಿಯಿಂದ ಕಳಿಸುವುದೇ ಎನ್ನುವುದು. ಈ ಸಂಶೋಧನಾ ಫಲಿತಾಂಶದಲ್ಲಿ ಯಾವುದೇ ಉತ್ಪ್ರೇಕ್ಷೆ ಇದೆಯೇ, ಇಲ್ಲವೆ ಎಂಬುದನ್ನು ಈ ಪರಿಣಿತರು ಹೇಳಬಲ್ಲವರಾಗಿರಬೇಕು.

ನನ್ನ ಅನಿಸಿಕೆಯ ಪ್ರಕಾರ ಈ ಯಾವ ವಿಷಯವನ್ನು ಮಾಧ್ಯಮಕ್ಕೆ ತಿಳಿಸಬಾರದು. ಇಲ್ಲದಿದ್ದರೆ ಮಧ್ಯೆ ಪ್ರವೇಶಿಸುವವರ ಯೋಜನೆಗಳು ತೀವ್ರ ಸ್ವರೂಪವನ್ನು ತಾಳಬಹುದೆಂಬ ಸಂಶಯವಿದೆ. ಇದೇ ಕಾರಣಕ್ಕೆ ಮಾರ್ಟೈನ್ಸ್ ರವರ ವರದಿಯನ್ನು ಸಿ.ಪಿ.ಸಿ ಅಥವಾ ಸಿ.ಐ.ಡಿ ಗೆ ಪ್ರಕಟಿಸದೆ ಉಪನಿರ್ದೇಶಕರು ಮತ್ತು ಕೆಲವು ಸಿ.ಸಿ. ಸದಸ್ಯರಿಗೆ ಮಾತ್ರ ತಿಳಿಸಬೇಕು.

ಮಾರ್ಟೈನ್ಸ್ ವರದಿ ಮತ್ತು ಅವರ ಜೊತೆಯಿರುವ ಎಸ್.ಪಿ.ಸಿ ಪರಿಣಿತರು ಈ ವಿಷಯವನ್ನು ಧೃಢಪಡಿಸಿದಲ್ಲಿ, ನಾವು ಆದಷ್ಟು ಬೇಗ ಈ ಕಾರ್ಯವನ್ನು ಶೀಘ್ರಗತಿಯಲ್ಲಿ ಮುನ್ನಡೆಸಿ ಯಾವುದೇ ಕಾರಣಕ್ಕು ಈ ಚಿನ್ನದ ಅವಕಾಶವನ್ನು ಕಳೆದುಕೊಳ್ಳದೆ, ಪ್ರತಗಿಪರಿಶೀಲನೆ ನಡೆಸಿ, ಅದಕ್ಕೆ ಅಗತ್ಯವಾದ ಸಾಮಗ್ರಿಗಳನ್ನು ಅತಿವೇಗದಲ್ಲಿ ಬೇರೆ ದೇಶಗಳಿಂದ ಆಮದು ಮಾಡಿಕೊಳ್ಳಬೇಕು (ಉದಾಹರಣೆಗೆ ವಜ್ರ ಕೊರೆಯುವಂತಹ ಸಾಮಗ್ರಿಗಳು) ನನ್ನ ಭಯವೆಂದರೆ ನನ್ನ ಈ ಸಂಶೋಧನೆಯು ನಮ್ಮ ಶಕ್ತಿಗೆ ಸವಾಲಾಗಬಾರದು. ಸತ್ಯವೇನೆಂದರೆ, ಕ್ರೆಝಿಜೆನ್ ಹೌಸ್ಕಿ ಮತ್ತು ಮಾರ್ಟೈನ್ಸ್ ಅವರ ನಂಬಿಕೆಯ ಪ್ರಕಾರ ನಮ್ಮಲ್ಲಿ ಪ್ರಪಂಚದಲ್ಲಿ ಎಲ್ಲೂ ಕಾಣದ ಖನಿಜ ಸಂಪತ್ತಿದೆ ಮತ್ತು ಇದು ಖನಿಜ ವಿಜ್ಞಾನ **(Geological Science)** ದಲ್ಲಿ ಕ್ರಾಂತಿಯನ್ನು ಸೃಷ್ಟಿಸಲು ಸಶಕ್ತವಾಗಿದೆ.

– ಲೆನಿನ್

JANASHAKTHI KANNADA VARA PATRIKE Mar 27-April 2, 2017 Price : Rs. 10/- Date of Publication : 24 March 2017 RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

ಗೌರವಧನ ಏರಿಕೆಗಾಗಿ ಅಕ್ಷರದಾಸೋಹ ನೌಕರರಿಂದ ಪ್ರತಿಭಟನೆ:



ಕರ್ನಾಟಕದ ರಾಜ್ಯದ ಬಜೆಟ್‌ನಲ್ಲಿ ಅಕ್ಷರದಾಸೋಹ ನೌಕರರ ಗೌರವಧನದಲ್ಲಿ ನಗಣ್ಯವಾದ ಏರಿಕೆ ಮಾಡಿದ್ದು, ಏರಿಕೆಯ ಬಳಿಕವೂ ಅವರ ಮಾಸಿಕ ಗೌರವಧನ ಕೇವಲ ರೂ.2000 ಮಾತ್ರವಾಗಿದೆ. ದಿನದಿಂದ ದಿನಕ್ಕೆ ಬೆಲೆ ಏರಿಕೆಯಾಗುತ್ತಿದ್ದು ಈ ಗೌರವಧನ ಎಲ್ಲಿಗೆ ಸಾಕಾಗುತ್ತದೆ ಎಂದು ಸಿಐಟಿಯು ರಾಜ್ಯ ಸಮಿತಿ ಸದಸ್ಯ ವಸಂತ ಆಚಾರಿ ಪ್ರಶ್ನಿಸಿದರು.

ಮಾರ್ಚ್ 17ರಂದು ಮಂಗಳೂರು ಜಿಲ್ಲಾಧಿಕಾರಿ ಕಚೇರಿ ಎದುರು ನಡೆದ ಅಕ್ಷರದಾಸೋಹ ನೌಕರರ ಸಂಘ ಏರ್ಪಡಿಸಿದ್ದ ಪ್ರತಿಭಟನೆಯಲ್ಲಿ ಕನಿಷ್ಠ ರೂ.5000 ಗೌರವಧನ ನೀಡುವಂತೆ ಪ್ರತಿಭಟನಾಕಾರರು ಆಗ್ರಹಿಸಿದರು. ಜಿಲ್ಲಾ ಸಂಘಟನೆಯ ಅಧ್ಯಕ್ಷೆ ಪದ್ಮಾವತಿ ಶೆಟ್ಟಿ, ಕಾರ್ಯದರ್ಶಿ ಗಿರಿಜ ಮೂಡಬಿದ್ರಿ, ಮುಖಂಡರಾದ ಭವ್ಯಾ, ಸಿಐಟಿಯು ಮುಖಂಡರಾದ ಜೆ.ಬಾಲಕೃಷ್ಣ ಶೆಟ್ಟಿ, ಸುನಿಲ್ ಕುಮಾರ್ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.



ಅಂಗನವಾಡಿ ನೌಕರರ ಹೋರಾಟ ಬೆಂಬಲಿಸಿ ತುಮಕೂರಿನಲ್ಲಿ ಕಾರ್ಮಿಕ ಸಂಘಟನೆಗಳು ಪ್ರತಿಭಟನೆಯನ್ನು ನಡೆಸಿದವು.



ಅಂಗನವಾಡಿ ನೌಕರರ ಹೋರಾಟ ಬೆಂಬಲಿಸಿ ಮಂಗಳೂರು ಸಗಟು ಮಾರುಕಟ್ಟೆಯ ಹಮಾಲಿ ಕಾರ್ಮಿಕರು ಬಂದರು ಶ್ರಮಿಕರ ಸಂಘದ ನೇತ್ರತ್ವದಲ್ಲಿ ಮಾರುಕಟ್ಟೆಯ ವಿವಿಧ ರಸ್ತೆಗಳಲ್ಲಿ ಕೇಂದ್ರ ಹಾಗೂ ರಾಜ್ಯ ಸರಕಾರಗಳ ವಿರುದ್ಧ ಘೋಷಣೆ ಕೂಗುತ್ತಾ ಪ್ರತಿಭಟನೆ ನಡೆಸಿದರು...

ಹುತಾತ್ಮ ದಿನಾಚರಣೆ

ದೇಶಕ್ಕಾಗಿ ಪ್ರಾಣ ತ್ಯಾಗ ಮಾಡಿದ ಭಗತ್ ಸಿಂಗ್, ರಾಜಗುರು, ಸುಖದೇವ್ ರವರ ಆಶಯಗಳನ್ನು ಜಾರಿ ಮಾಡಲು ನಾವೆಲ್ಲ ಪಣ ತೊಡಬೇಕು ಎಂದು ಮೈಸೂರ್ ಬ್ಯಾಂಕ್ ವೃತ್ತದ ಬಳಿ ಹುತಾತ್ಮ ದಿನಾಚರಣೆ ಕಾರ್ಯಕ್ರಮ ನಡೆಸುವ ಮೂಲಕ ಎಸ್‌ಎಫ್‌ಐ, ಡಿವೈಎಫ್‌ಐ, ಜೆಎಂಎಸ್ ಕಾರ್ಯಕರ್ತರು ಪ್ರತಿಜ್ಞೆ ಗೈದರು.

ಮೈಸೂರ್ ಬ್ಯಾಂಕ್ ವೃತ್ತದ ಬಳಿ ಇರುವ ಹುತಾತ್ಮ ಸ್ತಂಭವನ್ನು ಆಕ್ರಮಿಸಿರುವ ಶನಿದೇವರ ಆಡಳಿತ ಮಂಡಳಿ ವಿರುದ್ಧ ಆಕ್ರೋಶ ವ್ಯಕ್ತ ಪಡಿಸಲಾಯಿತು. ಅಕ್ರಮವಾಗಿ ಉದ್ಭವಗೊಂಡಿರುವ ಶನಿ ದೇವಸ್ತಾನವನ್ನು ತೆರುವುಗೊಳಿಸಿ ಸ್ಮಾರಕವನ್ನು ರಕ್ಷಿಸುವ ಕೆಲಸ ಮಾಡಬೇಕು ಇಲ್ಲದೇ ಹೋದಲ್ಲಿ ಬಿಬಿಎಂಪಿ ಕಚೇರಿಗೆ ಮುತ್ತಿಗೆ ಹಾಕುವುದಾಗಿ ಎಚ್ಚರಿಕೆ ನೀಡಲಾಯಿತು.

ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಕೆ.ಮರುಳಸಿದ್ದಪ್ಪ, ಚಿಂತಕರಾದ ಜಿ.ಎನ್. ನಾಗರಾಜ್, ಲೇಖಕಿ ವಸೂಂಧರಾ ಭೂಪತಿ, ಜೆಎಂಎಸ್ ನ ರಾಜ್ಯ ಉಪಾಧ್ಯಕ್ಷರಾದ ಕೆ.ಎಸ್. ವಿಮಲಾ, ಎಸ್‌ಎಫ್‌ಐ ನ ರಾಜ್ಯಾಧ್ಯಕ್ಷರಾದ ವಿ.ಅಂಬರೀಶ್, ಡಿವೈಎಫ್‌ಐ ರಾಜ್ಯ ಮುಖಂಡ ನಿಧಿನ್ ಮಾತನಾಡಿದರು.

ಈ ವೇಳೆ ಸಿಐಟಿಯು ರಾಜ್ಯ ಕಾರ್ಯದರ್ಶಿ ಪ್ರತಾಪ್ ಸಿಂಹ, ಎಸ್‌ಎಫ್‌ಐ ರಾಜ್ಯ ಕಾರ್ಯದರ್ಶಿ ಗುರುರಾಜ್ ದೇಸಾಯಿ, ಮುಖಂಡರಾದ ಕೆ.ಶಾರದಾ, ಚಿಕ್ಕರಾಜು ಎಸ್, ಮಹೇಶ್, ಸಿ.ಅಮರೇಶ್, ವೇಗಾನಂದ್, ದಿಲೀಪ್ ಶೆಟ್ಟಿ, ವೆಂಕಟೇಶ್, ಹನಮಂತ ದುರ್ಗದ್, ತೇಜಸ್ವಿನಿ, ಸೇರಿದಂತೆ ಅನೇಕರಿದ್ದರು.









JANASHAKTHI KANNADA VARA PATRIKE: Printed, Published by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**